ಸಂಪುಟ: 05 ಸಂಚಿಕೆ: 20 ಪುಟಗಳು: 08 ಶುಕ್ರವಾರ 04 ಏಪ್ರಿಲ್ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ನಮಗೆಲ್ಲರಿಗೂ ಸಮಾನ ಪ್ರತಿಭೆ ಇಲ್ಲ, ಆದರೆ, ನಮ್ಮ ಪ್ರತಿಭೆಯನ್ನು ಬೆಳೆಸಿಕೊಳ್ಳಲು ನಮಗೆಲ್ಲರಿಗೂ ಸಮಾನ ಅವಕಾಶವಿದೆ.

# ಪಂಚ ಗ್ಯಾರಂಟಿ ಕಮಲ ಚಾಟಿ

- ಸರ್ಕಾರದ ಬಳಿ ಅಭಿವೃದ್ಧಿಗೆ ಹಣ ಇಲ್ಲ , ಐದು ಗ್ಯಾರಂಟಿಗಾಗಿ ಮನೆ ಮನೆ ಲೂಟಿ: ಅಶೋಕ್
- ರಾಜ್ಯ ಸರ್ಕಾರಗಳು ತಮ್ಮ ಆದಾಯ ಹೆಚ್ಚಿಸಿಕೊಳ್ಳಲು ತೆರಿಗೆ ಏರಿಸುವುದು ಅನಿವಾರ್ಯ:ಪರಂ
- ಸಿಎಂ ಮನೆಗೆ ಮುತ್ತಿಗೆಗೆ ಯತ್ನ...!
- ಬಿಜೆಪಿ ನಾಯಕರು, ಕಾರ್ಯಕರ್ತರು ಪೊಲೀಸ್ ವಶಕ್ಕೆ

**ಸಿಎಂ ನಿವಾಸಕ್ಕೆ ಮುತ್ತಿಗೆ ಯತ್ನ**

**ಸರಣಿ ಬೆಲೆ ಏರಿಕೆ ವಿರುದ್ಧ ಬಿಜೆಪಿ ಸಮರ**

**ಬಿಎಸ್‌ವೈ ಸೇರಿ ಹಲವರು ವಶಕ್ಕೆ**



**ಕಮಲ ಪಡೆ ರಣಕಹಳೆ**



• ಉದಯವಾಹಿನಿ, ಬೆಂಗಳೂರು

ಕಾಂಗ್ರೆಸ್ ಪಕ್ಷ ಚುನಾವಣೆಗೆ ಮುನ್ನ ಬೆಲೆ ಏರಿಕೆ ಮಾಡಲ್ಲ, ಐದು ಗ್ಯಾರಂಟಿ ಕೊಡುತ್ತೇವೆ ಎಂದಿತ್ತು. ಎರಡು ವರ್ಷಗಳಲ್ಲಿ ಹಾಲಿನ ದರ ಮೂರು ಬಾರಿ ಏರಿಕೆ ಮಾಡಲಾಗಿದೆ. ಸರ್ಕಾರದ ಬಳಿ ಅಭಿವೃದ್ಧಿಗೆ ಹಣ ಇಲ್ಲ. ಅದಕ್ಕಾಗಿ ಬೆಲೆ ಏರಿಕೆ ಮೂಲಕ ಲೂಟಿ ಮಾಡಲಾಗುತ್ತಿದೆ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಟೀಕಿಸಿದ್ದಾರೆ.ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯುತ್ತಿರುವ ಆಹೋರಾತ್ರಿ ಧರಣಿಯಲ್ಲಿ ಭಾಗಿಯಾಗಿ ಮಾತನಾಡಿದ ಅವರು, ಬಜೆಟ್‌ನಲ್ಲಿ ಯಾವುದೇ ತೆರಿಗೆ ತೋರಿಸದೆ ಇದೀಗ ಬೆಲೆ ಏರಿಕೆ ಮಾಡಲಾಗ್ತಿದೆ. ಐದು ಗ್ಯಾರಂಟಿಗಾಗಿ ಕರ್ನಾಟಕದ ಮನೆ ಮನೆ ಲೂಟಿ ಆಗುತ್ತಿದೆ ಎಂದರು. ಸಚಿವರು ಅಂಗಡಿ ತೆರೆದಿದ್ದಾರೆ. 40% ಆರೋಪಕ್ಕೆ ಸಾಕ್ಷಿ ಇಲ್ಲ. ಆದರೆ, ಕಾಂಗ್ರೆಸ್ ಸರ್ಕಾರ 60% ಕಮಿಷನ್ ಪಡೆದುಕೊಳ್ಳುತ್ತಿದೆ. ಸ್ಮಾರ್ಟ್ ಮೀಟರ್ ಹಗರಣ ನಡೆದಿದೆ. ಸಿದ್ದರಾಮಯ್ಯ ಹೆಸರಿಗಷ್ಟೇ ಸಿಎಂ. ಸರ್ಕಾರದ ಗಾಲಿ ಕುರ್ಚಿಯಲ್ಲಿದೆ ಎಂದು ಹೇಳಿದರು.ಕಾಂಗ್ರೆಸ್ ಪಕ್ಷ ತನ್ನ ಓಲೈಕೆ ರಾಜಕಾರಣಕ್ಕಾಗಿ ವಕ್ಫ್ ಕಾಯ್ದೆಗೆ ತಿದ್ದುಪಡಿ ತಂದಿತ್ತು. ಯಾವ ಜಮೀನನ್ನು ಬೇಕಾದರೂ ವಕ್ಫ್ ಬೋರ್ಡ್ ಆಸ್ತಿ ಎಂದು ಘೋಷಣೆ ಮಾಡಿಕೊಳ್ಳುವ ಅವಕಾಶ ಕೊಟ್ಟಿತ್ತು. ಇದರಿಂದ ರೈತರ ಜಮೀನು, ದೇವಸ್ಥಾನ, ಮಠ-ಮಂದಿರಗಳ ಆಸ್ತಿ ಎಲ್ಲಾ ಕಬಳಿಕೆ ಆಗುತ್ತಿತ್ತು. ಈಗ ಎನ್‌ಡಿಎ ಸರ್ಕಾರ ತಂದಿರುವ ತಿದ್ದುಪಡಿಯಿಂದ ರೈತರು ನಿಟ್ಟುಸಿರು ಬಿಡುವಂತಾಗಿದೆ ಎಂದರು.ಮಠ-ಮಾನ್ಯಗಳ ಜಮೀನು ಸುರಕ್ಷಿತವಾಗಿ ಉಳಿಯಲಿದೆ. ಇದಕ್ಕಾಗಿ ಪ್ರಧಾನಮಂತ್ರಿಗಳಿಗೆ, ಕೇಂದ್ರ ಗೃಹ ಸಚಿವರಿಗೆ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ಹೇಳಿದರು.

**ವಕ್ಫ್ ಬೋರ್ಡ್ ಹೆಸರಿನಲ್ಲಿ ಕಾಂಗ್ರೆಸ್ ಮುಖಂಡರಿಂದ ಜಮೀನು ಲೂಟಿ-ವಿಜಯೇಂದ್ರ:** ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ, ಮಾತನಾಡಿ, ಲೋಕಸಭೆಯಲ್ಲಿ ನಿನ್ನೆ ಒಂದು ಐತಿಹಾಸಿಕ ಮಸೂದೆಗೆ ಅಂಗೀಕಾರ ಲಭಿಸಿದೆ ಎಂದು ಸಂತಸ ವ್ಯಕ್ತಪಡಿಸಿದರು. ಕಾಂಗ್ರೆಸ್ ಪಕ್ಷ ವಕ್ಫ್ ಕಾಯಿದೆಗೆ ತಿದ್ದುಪಡಿಯನ್ನು ವಿರೋಧಿಸುವುದು ದುರಂತ. ಕರ್ನಾಟಕದಲ್ಲಿ ಸಾವಿರಾರು ಕೋಟಿ ರೂ. ಮೌಲ್ಯದ ಜಮೀನುಗಳನ್ನು ವಕ್ಫ್ ಬೋರ್ಡ್ ಹೆಸರಿನಲ್ಲಿ ಕಾಂಗ್ರೆಸ್ ಮುಖಂಡರು, ರಾಜಕಾರಣಿಗಳು ಲೂಟಿ ಮಾಡಿದ್ದಾರೆ. ಇಂಥವರು ಮಸೂದೆಯನ್ನು ವಿರೋಧಿಸುತ್ತಿದ್ದಾರೆ ಎಂದು ಟೀಕಿಸಿದರು.

**ಬಿಜೆಪಿ ಕಾಲದ ಬೆಲೆ ಏರಿಕೆ ಬಗ್ಗೆ ಏಕೆ ಪ್ರತಿಭಟನೆ ಮಾಡುತ್ತಿಲ್ಲ..:** ಈ ಹಿಂದೆ ಪೆಟ್ರೋಲ್, ಡೀಸೆಲ್, ಗ್ಯಾಸ್ ಸಿಲಿಂಡರ್ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಹೆಚ್ಚಳವಾಗಿತ್ತು. ಈಗ ಟೋಲ್ ದರ ಏಕೆ ಹೆಚ್ಚಳವಾಗಿದೆ. ಇದರ ಬಗ್ಗೆ ಬಿಜೆಪಿಯವರು ಏತಕ್ಕಾಗಿ ಪ್ರತಿಭಟನೆ ಮಾಡುತ್ತಿಲ್ಲ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಕಿಡಿಕಾರಿದ್ದಾರೆ. ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಬೆಲೆ ಏರಿಕೆ ಬಗ್ಗೆ ಬಿಜೆಪಿ ಧರಣಿ ಹಾಗೂ ರಸ್ತೆ ತಡೆ ಮಾಡುತ್ತಿರುವುದರ ಬಗ್ಗೆ ಕೇಳಿದಾಗ, ನಾವು ಹಾಲಿನ ದರ ಹೆಚ್ಚಳ ಮಾಡಿರುವುದರಿಂದ ರೈತರಿಗೆ ಹೆಚ್ಚು ಅನುಕೂಲವಾಗಲಿದೆ. ರೈತರ ಬದುಕನ್ನೂ ಸಹ ನಾವು ನೋಡಬೇಕಲ್ಲವೇ ರೈತರ ಪಕ್ಷ ಎಂದು ಕೇವಲ ಹಸಿರು ಟವೆಲ್ ಹಾಕಿಕೊಂಡರೆ ಸಾಕೇ. ಊರುಗಳಿಗೆ ನಾವುಗಳು ಹೋದಾಗ ರೈತರು ನಮ್ಮನ್ನು ಹೊಡೆಯಲು ಬಂದಿಲ್ಲ, ಅದೇ ನಮ್ಮ ಪುಣ್ಯ. ಅನೇಕ ರೈತರು ಹಸುಗಳನ್ನು ಮಾರಾಟ ಮಾಡಲು ಹೋಗುತ್ತಿದ್ದಾರೆ. ಈ ಹಿಂದೆ ಬೆಲೆ ಹೆಚ್ಚಳವಾದಾಗ ಅವರುಗಳೂ ಜನಪ್ರತಿನಿಧಿಗಳಾಗಿದ್ದರು ಅಲ್ಲವೇ...ಎಂದು ಕುಟುಕಿದರು.

ಆಂತರಿಕ ಭಿನ್ನಮತದಿಂದ ನಲುಗಿದ್ದ ಬಿಜೆಪಿ ಇದೀಗ ತಕ್ಕ ಮಟ್ಟಿನ ಒಗ್ಗಟ್ಟಿನ ಪ್ರದರ್ಶನ ಮಾಡಿದೆ. ಎರಡು ದಿನಗಳ ಹೋರಾಟದ ಮೂಲಕ ಸರ್ಕಾರವನ್ನು ಎಚ್ಚರಿಸುವ ಕೆಲಸ ಮಾಡಿದೆ. ಇದೇ ವೇಳೆ ವಕ್ಫ್ ಬಿಲ್ ಅಂಗೀಕಾರ ಅಗಿದ್ದನ್ನೂ ಬಿಜೆಪಿ ನಾಯಕರು ಸಿಹಿ ಹಂಚಿ ಸಂಭ್ರಮಿಸಿದ್ದಾರೆ. ಸರ್ಕಾರದ ವಿರುದ್ಧ ಆರಂಭಿಕ ಹೆಜ್ಜೆಯಾಗಿ ಆಹೋರಾತ್ರಿ ಹೋರಾಟ ಹಮ್ಮಿಕೊಂಡು ಯಶಸ್ವಿಯಾಗಿ ಪೂರ್ಣಗೊಳಿಸಿದ ಬಿಜೆಪಿ ಮುಂದಿನ ದಿನಗಳಲ್ಲಿ ಜನಾಕ್ರೋಶ ಹೋರಾಟ ಘೋಷಣೆ ಮಾಡಿದೆ. ಸಿಎಂ ಸಿದ್ದರಾಮಯ್ಯ ತವರು ಜಿಲ್ಲೆ ಮೈಸೂರಿನಿಂದಲೇ ಹೋರಾಟ ಹಮ್ಮಿಕೊಂಡಿದೆ. ಈ ಮೂಲಕ ಸರ್ಕಾರದ ವಿರುದ್ಧ ಜನಾಭಿಪ್ರಾಯ ಮೂಡಿಸಲಿದೆ.

**ಬಿಜೆಪಿಯಿಂದ ಯಶಸ್ವಿ ಹೋರಾಟ**

**ಪೊಲೀಸ್ ವಶಕ್ಕೆ**

ಧರಣಿಯಲ್ಲಿ ಮುಂದುವರಿದ ಭಾಗವಾಗಿ ಸಿಎಂ ಸಿದ್ದರಾಮಯ್ಯ ಅವರ ಕಾವೇರಿ ನಿವಾಸಕ್ಕೆ ಮುತ್ತಿಗೆ ಹಾಕಲು ಬಿಜೆಪಿ ನಾಯಕರು ಕಾರ್ಯಕರ್ತರು ಮುಂದಾದರು. ಈ ವೇಳೆ ಮುಂಜಾಗ್ರತಾ ಕ್ರಮವಾಗಿ ಪೊಲೀಸರು ಬ್ಯಾರಿಕೇಡ್ ಅಳವಡಿಸಿದ್ದರು. ಬ್ಯಾರಿಕೇಡ್ ತಳ್ಳಿ ಕೊಂಡು ಹೋದ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದುಕೊಂಡರು. ಇದೇ ವೇಳೆ ಮಾಜಿ ಸಿಎಂ ಬಿಎಸ್ ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ, ವಿಪಕ್ಷ ನಾಯಕರಾದ ಆರ್ ಅಶೋಕ್, ಛಲವಾದಿ ನಾರಾಯಣ ಸ್ವಾಮಿ ಹಾಗೂ ಬಿಜೆಪಿ ನಾಯಕರನ್ನು ವಶಕ್ಕೆ ಪಡೆದುಕೊಳ್ಳಲಾಯ್ತು.





**ವಕ್ ತಿದ್ದುಪಡಿ ಮಸೂದೆ ವಿಚಾರ**

ಲೋಕಸಭೆಯಲ್ಲಿ ವಕ್ಫ್ ಮಸೂದೆಗೆ ಸಾಕಷ್ಟು ವಿರೋಧ ವ್ಯಕ್ತವಾದರೂ, 288 ಜನ ಸದಸ್ಯರು ಇದರ ಪರವಾಗಿ ಮತ ಚಲಾಯಿಸಿದ್ದಾರೆ. ಈ ಕಾರಣದಿಂದಾಗಿ, ರಾತ್ರಿ ಒಂದು ಗಂಟೆಗೆ ಮಸೂದೆಯು ಅಂಗೀಕಾರಗೊಂಡಿದೆ. ಆದರೆ, ಈ ನಿರ್ಧಾರಕ್ಕೆ ಬಹಳಷ್ಟು ಜನರಿಂದ ವಿರೋಧವಿದ್ದು, ಮುಖ್ಯವಾಗಿ ಮುಸಲ್ಮಾನ ಸಮುದಾಯ ಮತ್ತು ಇತರರು ಇದನ್ನು ರಾಜಕೀಯವಾಗಿ ಉಪಯೋಗಿಸುತ್ತಿದ್ದಾರೆ ಎಂಬ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸದ್ಯ ವಿಧೇಯಕ ಪಾಸ್ ಆಗಿದೆ. ಆದರೆ ಮುಂದೆ ಏನಾಗುತ್ತದೆ ಎಂಬುದನ್ನು ಕಾದು ನೋಡೋಣ ಎಂದು ಹೇಳಿದರು. ಸಚಿವರು ಮತ್ತು ಶಾಸಕರು ರಾಹುಲ್ ಗಾಂಧಿಯವರನ್ನು ಭೇಟಿಯಾಗುತ್ತಿರುವ ಬಗ್ಗೆ ಪ್ರತಿಕ್ರಿಯಿಸಿ, ಅವರು ಬೇರೆ ವಿಚಾರಕ್ಕಾಗಿ ಹೋಗಿದ್ದಾರೆ. ರಾಜ್ಯ ರಾಜಕಾರಣದ ಬಗ್ಗೆ ಯಾವುದೇ ಚರ್ಚೆ ಆಗುವುದಿಲ್ಲ. ಇದು ಕೇವಲ ಸೃಷ್ಟಿ ಮಾತ್ರ ಎಂದು ತಿಳಿಸಿದರು.

ಮುಖ್ಯಮಂತ್ರಿ ಅವರು ರಾಹುಲ್ ಗಾಂಧಿ ಅವರನ್ನು ಭೇಟಿಮಾಡಿದ್ದರ ಬಗ್ಗೆ ಕೇಳಿದಾಗ, ರಾಹುಲ್ ಗಾಂಧಿ ಅವರು ಪಕ್ಷದ ರಾಷ್ಟ್ರೀಯ ನಾಯಕರು, ಅದಕ್ಕೆ ಭೇಟಿ ಮಾಡಿದ್ದಾರೆ. ನಾನು ಕೂಡ ಬಂದಾಗ ಭೇಟಿ ಮಾಡಿದ್ದೇನೆ. ಹಲವಾರು ನಾಯಕರನ್ನು ಭೇಟಿಯಾಗುತ್ತೇವೆ. ಕಾಂಗ್ರೆಸ್ ಕಚೇರಿ ಪಕ್ಷದ ದೇವಸ್ಥಾನವಿದ್ದಂತೆ ಭೇಟಿ ಮಾಡಿದರೆ ತಪ್ಪೇನಿದೆ. ವಿಧಾನ ಪರಿಷತ್ ಸ್ಥಾನಗಳ ಬಗ್ಗೆ ಇನ್ನೂ ಚರ್ಚೆಯಾಗಿಲ್ಲ. ಚರ್ಚೆಗೆ ಬಂದಾಗ ಮಾತನಾಡುತ್ತೇವೆ ಎಂದರು. ದೆಹಲಿಯ ನೂತನ ಕರ್ನಾಟಕ ಭವನ ನಮ್ಮ ರಾಜ್ಯದ ಜನತೆಯ ರಾಯಭಾರಿಯಾಗಿ ಕೆಲಸ ಮಾಡಲಿದೆ. ಅಂದರೆ ಎಲ್ಲಾ ಪಕ್ಷಗಳ ಜನಪ್ರತಿನಿಧಿಗಳಿಗೆ, ಸರ್ಕಾರದ ಅಧಿಕಾರಿಗಳಿಗೆ ಸೇರಿದಂತೆ ಅನೇಕರಿಗೆ ಈ ಭವನ ಉಪಯೋಗವಾಗಲಿದೆ. ಇಲ್ಲಿ ನಡೆಯುವ ಚರ್ಚೆಗಳಿಂದ ರಾಜ್ಯಕ್ಕೆ ಉಪಯೋಗವಾಗಲಿ ಎಂದು ಆಶಿಸುತ್ತೇನೆ. ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರು ಒಂದಷ್ಟು ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಈ ಸೂಚನೆಗಳನ್ನು ಕಾರ್ಯಗತಗೊಳಿಸಲಾಗುವುದು, ಇದರ ಬಗ್ಗೆ ಮುಖ್ಯಮಂತ್ರಿಗಳು ಸಹ ಸಹಮತ ವ್ಯಕ್ತಪಡಿಸಿದ್ದಾರೆ ಎಂದು ತಿಳಿಸಿದರು.

**ರಾಷ್ಟ್ರೀಯ ನಾಯಕರನ್ನು ಭೇಟಿಯಾಗುವುದು ಸಾಮಾನ್ಯ**

1. ಬಿಜೆಪಿ ನಡೆಸಿದ ಆಹೋರಾತ್ರಿ ಹೋರಾಟದ ಅಂಗವಾಗಿ ಸಿಎಂ ಸಿದ್ದರಾಮಯ್ಯ ಮನೆಗೆ ಮುತ್ತಿಗೆ ಹಾಕಲು ಮುಂದಾದರು.
2. ಮುತ್ತಿಗೆ ಹಾಕಲು ಮುಂದಾದ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದುಕೊಂಡರು.
3. ಬೆಲೆ ಏರಿಕೆ, ಮುಸ್ಲಿಂ ಮೀಸಲಾತಿ ರದ್ದು ಮಾಡಬೇಕು ಎಂದು ಆಗ್ರಹಿಸಿದ್ದರು.

**ಗ್ಯಾರಂಟಿ ವಿರುದ್ಧ ಬಿಜೆಪಿ ಗರಂ**

## ವಕ್ಫ್ ಬಿಲ್ ವಿರೋಧಿಸುವವರು ದೇಶದ್ರೋಹಿಗಳು; ಮುತಾಲಿಕ್

• ಉದಯವಾಹಿನಿ, ಹುಬ್ಬಳ್ಳಿ

1995ರ ವಕ್ಫ್ ಕಾಯ್ದೆ ತಿದ್ದುಪಡಿ ಮಸೂದೆಗೆ ಲೋಕಸಭೆಯಲ್ಲಿ ಅಂಗೀಕಾರ ದೊರೆತಿರುವುದನ್ನು ಸ್ವಾಗತಿಸಿರುವ ಶ್ರೀರಾಮಸೇನೆ ರಾಷ್ಟ್ರೀಯ ಅಧ್ಯಕ್ಷ ಪ್ರಮೋದ್ ಮುತಾಲಿಕ್, ಇದೊಂದು ಐತಿಹಾಸಿಕ ಕ್ಷಣ.. ಎಂದು ಬಣ್ಣಿಸಿದ್ದಾರೆ. ವಕ್ಫ್ ತಿದ್ದುಪಡಿ ಮಸೂದೆ ಲೋಕಸಭೆಯಲ್ಲಿ ಅಂಗೀಕಾರ ಪಡೆದಿರುವುದಕ್ಕೆ ಸಂತಸ ವ್ಯಕ್ತಪಡಿಸಿದರು. ಇದೇ ವೇಳೆ ಈ ಮಸೂದೆ ರಾಜ್ಯಸಭೆಯಲ್ಲೂ ಅಂಗೀಕಾರಗೊಂಡು ಕಾಯ್ದೆಯ ರೂಪದಲ್ಲಿ ಜಾರಿಯಾಗಲಿದೆ ಎಂಬ ವಿಶ್ವಾಸವಿದೆ ಎಂದು ಪ್ರಮೋದ್ ಮುತಾಲಿಕ್ ಹೇಳಿದರು. ವಕ್ಫ್ ಬೋರ್ಡ್ ಹೆಸರಿನಲ್ಲಿ ಸರ್ಕಾರಿ ಜಾಗ, ರೈತರ ಜಮೀನು, ಮಠಗಳ ಜಾಗ, ದಲಿತರ ಜಾಗವನ್ನು ಕಬಳಿಸಿದ್ದು ಸರಿಯಲ್ಲ. ಈಗಲಾದರೂ ಈ ಅನ್ಯಾಯವನ್ನು ಸರಿಪಡಿಸುವ ವಿಶ್ವಾಸವಿದೆ. ವಕ್ಫ್ ಬೋರ್ಡ್ ಲೂಟಿಯನ್ನು ತಡೆಯಲು ಮುಂದಾಗಿರುವ ಕೇಂದ್ರ ಬಿಜೆಪಿ ಸರ್ಕಾರ ನಿಜಕ್ಕೂ ಅಭಿನಂದನೆಗೆ ಅರ್ಹ.. ಎಂದು ಪ್ರಮೋದ್ ಮುತಾಲಿಕ್ ನುಡಿದರು. ವಕ್ಫ್ ಬಿಲ್ ವಿರೋಧಿಗಳನ್ನು ದೇಶದ್ರೋಹಿಗಳು ಎಂದು ಕರೆದಿರುವ ಪ್ರಮೋದ್ ಮುತಾಲಿಕ್, ದೇಶದ ಸಂಪತ್ತಿನ ಲೂಟಿಯಾದರೂ ಇವರಿಗೆ ತಮ್ಮ ವೋಟ್ ಬ್ಯಾಂಕ್ ರಾಜಕಾರಣವೇ ಮುಖ್ಯವಾಗಿದೆ ಎಂದು ಕಾಂಗ್ರೆಸ್ ವಿರುದ್ಧ ಟೀಕಾಪ್ರಹಾರ ನಡೆಸಿದರು. 1995ರಲ್ಲಿ ಅಂದಿನ ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರ ಸಂವಿಧಾನಕ್ಕೆ ವಿರುದ್ಧವಾಗಿ ವಕ್ಫ್ ಕಾಯ್ದೆಯನ್ನು ಜಾರಿ ಮಾಡಿತ್ತು. ಇದನ್ನೇ ದುರ್ಬಳಕೆ ಮಾಡಿಕೊಂಡು ವಕ್ಫ್ ಬೋರ್ಡ್ ದೇಶದ ಸಾರ್ವಜನಿಕರ ಆಸ್ತಿಗಳನ್ನು ಲೂಟಿ ಮಾಡಿತು. ತನ್ನ ವೋಟ್ ಬ್ಯಾಂಕ್ ರಾಜಕಾರಣಕ್ಕಾಗಿ ದೇಶದ ಸಂಪತ್ತಿನ ಲೂಟಿಗೆ ಅವಕಾಶ ಮಾಡಿಕೊಟ್ಟ ಕಾಂಗ್ರೆಸ್‌ಗೆ ನಾಚಿಕೆಯಾಗಬೇಕು ಎಂದು ಮುತಾಲಿಕ್ ತೀವ್ರ ವಾಗ್ದಾಳಿ ನಡೆಸಿದರು.

## ಮುಡಾ ಕೇಸಲ್ಲಿ ಬಿ ರಿಪೋರ್ಟ್‌ಗೆ ಆಕ್ಷೇಪ ವಿಚಾರಣೆ ಮುಂದೂಡಿಕೆ

• ಉದಯವಾಹಿನಿ, ಬೆಂಗಳೂರು

ಲೋಕಾಯುಕ್ತ ಬಿ-ರಿಪೋರ್ಟ್ ಪ್ರಶ್ನಿಸಿ ಇಡಿ ಸಲ್ಲಿಸಿದ್ದ ತಕರಾರು ಅರ್ಜಿಯ ವಿಚಾರಣೆ ಜನಪ್ರತಿನಿಧಿಗಳ ವಿಶೇಷ ಕೋರ್ಟ್‌ನಲ್ಲಿಂದು ನಡೆಯಿತು. ವಾದ-ಪ್ರತಿವಾದ ಆಲಿಸಿದ ಕೋರ್ಟ್ ಆದೇಶವನ್ನು ಏಪ್ರಿಲ್ 8ಕ್ಕೆ ಕಾಯ್ದಿರಿಸಿತು. ಇಡಿ ಪರ ಹಿರಿಯ ವಕೀಲ ಮಧುಕರ್ ದೇಶಪಾಂಡೆ ವಾದ ಮಂಡನೆ ಮಾಡಿದರು. ಲೋಕಾಯುಕ್ತ ತನಿಖೆಯ ಬಗ್ಗೆ ಆಕ್ಷೇಪ ಎತ್ತಿ ವಾದ ಮಂಡಿಸಿದರು. ಬಿ ರಿಪೋರ್ಟ್ ಚಾಲೆಂಜ್ ಮಾಡಲು ಇಡಿಗೆ ಅಧಿಕಾರ ಇದೆ ಎಂದು ಹೇಳಿದರು. ಈ ವೇಳೆ ಜಡ್ಜ್ ಸಂತೋಷ್ ಗಜಾನನ ಭಟ್, ಕೋರ್ಟ್ ಬಿ ರಿಪೋರ್ಟ್ ಒಪ್ಪಿಕೊಂಡರೆ ನಿಮ್ಮ ನಿಲುವೇನು ಅಂತ ಪ್ರಶ್ನೆ ಮಾಡಿದ್ರು. ಇದಕ್ಕೆ ಪ್ರತಿಕ್ರಿಯಿಸಿದ ವಕೀಲರು, ಇಡಿ ತನಿಖೆಯಲ್ಲಿ ಪತ್ತೆಯಾದ ಅಂಶಗಳನ್ನು ಹಂಚಿಕೊಂಡಿದೆ. ಲೋಕಾಯುಕ್ತ ಪೊಲೀಸರಿಗೆ ವಿವರ ಹಂಚಿಕೊಂಡರೂ ಬಿ ರಿಪೋರ್ಟ್ ಸಲ್ಲಿಸಿದ್ದಾರೆ. ಹೀಗಾಗಿ ಇಡಿ ಬಿ ರಿಪೋರ್ಟ್ ಪ್ರಶ್ನಿಸಿದೆ. ಒಂದು ವೇಳೆ ಕೋರ್ಟ್ ಬಿ ರಿಪೋರ್ಟ್ ಒಪ್ಪಿಕೊಂಡರೆ ಅದನ್ನು ಹೈಕೋರ್ಟ್ ನಲ್ಲಿ ಪ್ರಶ್ನಿಸುತ್ತೇವೆ. ಬಿ ರಿಪೋರ್ಟ್ ಪ್ರಶ್ನಿಸಲು ಇಡಿಗೆ ಅಧಿಕಾರವಿದೆ ಎಂದು ವಾದಿಸಿದರು. ಇದಕ್ಕೆ ನಿಮಗೆ ಅವಕಾಶ ಕೊಟ್ಟರೆ ದೂರುದಾರ ಸ್ಥಾನಮಾನ ಕೊಟ್ಟಂತೆ ಆಗುವುದಿಲ್ಲವೇ ಅನುಸೂಚಿತ ಅಪರಾಧ ಇಲ್ಲದಿರುವಾಗ ಇಡಿಗೆ ಹೇಗೆ ಅಧಿಕಾರ ಬರಲಿದೆ ಎಂದು ವಿಜಯ್ ಮದನ್ ಲಾಲ್ ಕೇಸ್ ಉಲ್ಲೇಖಿಸಿ ಜಡ್ಜ್ ಇಡಿ ಪರ ವಕೀಲರಿಗೆ ಪ್ರಶ್ನೆ ಮಾಡಿದರು. ವಾದ ಪ್ರತಿವಾದಗಳನ್ನು ಆಲಿಸಿದ ಬಳಿಕ ಕೋರ್ಟ್ ಏಪ್ರಿಲ್ 8ಕ್ಕೆ ವಿಚಾರಣೆ ಮುಂದೂಡಿತು.

## ವಿವಾದಿತ ಸ್ಥಳದಲ್ಲಿ ಮದರಸಾ ತೆರೆಯಲು ಸರ್ಕಾರದ ಅನುಮತಿ

• ಉದಯವಾಹಿನಿ, ಮೈಸೂರು

ಮೈಸೂರಿನ ಕ್ಯಾತಮಾರನಹಳ್ಳಿಯ ವಿವಾದಿತ ಸ್ಥಳದಲ್ಲಿ ಈಗಿರುವ ಮಸೀದಿಯ ಬದಲು ಮದರಸಾ ತೆರೆಯುವಂತೆ ಮೈಸೂರು ಜಿಲ್ಲಾಧಿಕಾರಿ ಜಿ. ಲಕ್ಷ್ಮೀ ಕಾಂತ ರೆಡ್ಡಿ ಆದೇಶಿಸಿದ್ದಾರೆ. ಇದು ಅಲ್ಲಿನ ಹಲವಾರು ಹಿಂದೂಪರ ಸಂಘಟನೆಗಳ ವರ್ಷಗಳ ಹೋರಾಟಕ್ಕೆ ತೀವ್ರ ಹಿನ್ನಡೆ ತಂದಿದೆ. ಕ್ಯಾತಮಾರನಹಳ್ಳಿಯಲ್ಲಿ ಕೋಮು ಭಾವನೆಗಳಿಗೆ ಧಕ್ಕೆ ಹಿನ್ನೆಲೆಯಲ್ಲಿ ಮಸೀದಿಯನ್ನು ಮುಚ್ಚಲಾಗಿದ್ದು ಅದನ್ನು ಮತ್ತೆ ಆರಂಭಿಸಲು ಅನುಮತಿ ಕೋರಬೇಕೆಂಬ ವಿಚಾರ ಕರ್ನಾಟಕ ಹೈಕೋರ್ಟ್ ನಲ್ಲಿ ವಿಚಾರಣೆ ಹಂತದಲ್ಲಿದೆ. ಆ ಹಿನ್ನೆಲೆಯಲ್ಲಿ ನ್ಯಾಯಾಲಯವು, ಮೈಸೂರಿನ ಜಿಲ್ಲಾಧಿಕಾರಿಯವರಿಗೆ ಜನಾಭಿಪ್ರಾಯವನ್ನು ಪಡೆದು ನ್ಯಾಯಾಲಯಕ್ಕೆ ಸಲ್ಲಿಸುವಂತೆ ಸೂಚಿಸಿತ್ತು. ಆ ಹಿನ್ನೆಲೆಯಲ್ಲಿ, ಏ. 2ರಂದು ಹಿಂದೂ ಸಂಘಟನೆಗಳ ಮುಖಂಡರು ಹಾಗೂ ಮುಸ್ಲಿಂ ಸಮುದಾಯದ ಮುಖಂಡರ ಸಭೆ ಕರೆದು ಜಿಲ್ಲಾಧಿಕಾರಿ ಮಾತುಕತೆ ನಡೆಸಿದ್ದರು. ಎಂದು ಲೋಕಾಯುಕ್ತ ಅಧಿಕಾರಿಗಳು ತಿಳಿಸಿದ್ದಾರೆ. ಕುಮಾರ್ ತಮ್ಮ ಸಂಬಂಧಿಗಳಾದ ಗವಿಗೌಡ ಮತ್ತು ದಿವ್ಯಾ ಎಂಬುವರ ಹೆಸರಿಗೆ ಮನೆ ನೋಂದಣಿ ಮಾಡಿಕೊಡುವಂತೆ ಚನ್ನೇಗೌಡರಿಗೆ ಒತ್ತಡ ಹೇರಿದ್ದರು. ಸಂಜೆ ಕರಾರು ಪತ್ರಕ್ಕೆ ಸಹಿ ಹಾಕಿಸಲು ನಾಗರಬಾವಿಯ ಹೋಟೆಲ್‌ಗೆ ಅನುಷಾರನ್ನು ಕರೆಸಿಕೊಂಡಿದ್ದರು. ಈ ವೇಳೆ ದಾಳಿ ನಡೆಸಿ ಕಾನ್‌ಸ್ಟೆಬಲ್‌ಗಳಾದ ಉಮೇಶ್, ಅನಂತ್ ಸೋಮಶೇಖರ್ ಆರಾಧ್ಯ, ಖರೀದಿದಾರ ಗವಿಗೌಡ, ದಿನೇಶ್ ಸೇರಿದಂತೆ ಐದು ಮಂದಿಯನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

## ಡಿಕೆಶಿ ಕೇಂದ್ರ ಸಚಿವರ ಭೇಟಿ, ರಾಹುಲ್ ಗಾಂಧಿ ಜತೆ ಸಿದ್ದು ಮಾತುಕತೆ

• ಉದಯವಾಹಿನಿ, ಬೆಂಗಳೂರು

ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ದೆಹಲಿ ಪ್ರವಾಸದಲ್ಲಿದ್ದಾರೆ. ದೆಹಲಿಯಲ್ಲಿ ಗುರುವಾರ ಸಿಎಂ ಹಾಗೂ ಡಿಸಿಎಂ ಕೇಂದ್ರ ಸಚಿವರನ್ನು ಹಾಗೂ ಸ್ವಪಕ್ಷದ ನಾಯಕರನ್ನು ಭೇಟಿಯಾಗಿದ್ದಾರೆ. ಈ ಸಂದರ್ಭದಲ್ಲಿ ಕೇಂದ್ರ ಸಚಿವರನ್ನು ಡಿಕೆಶಿ ಜೊತೆಗೆ ಸಿಎಂ ಭೇಟಿ ಆದರೆ, ಲೋಕಸಭೆ ವಿರೋದ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಮಾತ್ರ ಪ್ರತ್ಯೇಕವಾಗಿ ಭೇಟಿ ಮಾಡಿ ಮಾತುಕತೆ ನಡೆಸಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ ಕೆ ಶಿವಕುಮಾರ್ ಅವರು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್ ಪಾಟೀಲ್ ಅವರನ್ನು ನವದೆಹಲಿಯಲ್ಲಿ ಭೇಟಿ ಮಾಡಿ ರಾಜ್ಯದ ಬಾಕಿ ಉಳಿದಿರುವ ನೀರಾವರಿ ಯೋಜನೆಗಳಿಗೆ ಅನುಮತಿ ಸಂಬಂಧ ಸಮಾಲೋಚನೆ ನಡೆಸಿದರು. ಕೇಂದ್ರ ಜಲಶಕ್ತಿ, ರೈಲ್ವೆ ರಾಜ್ಯ ಸಚಿವ ವಿ ಸೋಮಣ್ಣ, ದೆಹಲಿಯಲ್ಲಿ ರಾಜ್ಯ ಸರ್ಕಾರದ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ, ರಾಜ್ಯ ಸರಕಾರದ ಅಪರ ಮುಖ್ಯ ಕಾರ್ಯದರ್ಶಿ ಅತೀಕ್ ಉಪಸ್ಥಿತರಿದ್ದರು.



**ಪ್ರತ್ಯೇಕ ಭೇಟಿ ಮಾಡಿ ಮಾತುಕತೆ**

ಆದರೆ ಬಳಿಕ ರಾಹುಲ್ ಗಾಂಧಿ ಅವರನ್ನು ಸಿದ್ದರಾಮಯ್ಯ ಭೇಟಿ ಮಾಡಿದ್ದಾರೆ. ಪ್ರತ್ಯೇಕವಾಗಿ ಭೇಟಿ ಮಾಡಿ ಕೆಲ ಹೊತ್ತು ಮಾತುಕತೆ ನಡೆಸಿದ್ದಾರೆ. ಈ ವೇಳೆ ಡಿಕೆಶಿ ಇರಲಿಲ್ಲ. ಸಿಎಂ ಪ್ರತ್ಯೇಕ ಮಾತುಕತೆ ಸಹಜವಾಗಿ ಕುತೂಹಲಕ್ಕೆ ಕಾರಣವಾಗಿದೆ.

**ರಾಜ್ಯ ರಾಜಕೀಯ ಚರ್ಚೆ!:** ರಾಜ್ಯ ಕಾಂಗ್ರೆಸ್ ನಲ್ಲಿ ನಡೆಯುತ್ತಿರುವ ಆಂತರಿಕ ಬೆಳವಣಿಗೆಗಳ ಬಗ್ಗೆ ಸಿದ್ದರಾಮಯ್ಯ ರಾಹುಲ್ ಗಾಂಧಿ ಅವರ ಬಳಿಕ ವಿವರಣೆ ನೀಡಿರುವ ಸಾಧ್ಯತೆ ಇದೆ. ರಾಜ್ಯದಲ್ಲಿ ಹನಿಟ್ರ್ಯಾಪ್ ವಿಚಾರ ಸಾಕಷ್ಟು ಸದ್ದು ಮಾಡಿತ್ತು. ಸದನದಲ್ಲೇ ಕೆ.ಎನ್.ರಾಜಣ್ಣ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದರು. ಪರೋಕ್ಷವಾಗಿ ಇದರ ಹಿಂದೆ ಸ್ವಪಕ್ಷೀಯರ ಕೈವಾಡ ಇದೆ ಎಂಬ ಆರೋಪವನ್ನು ಮಾಡಿದ್ದರು.

**ಸಂಪುಟ ಪುನಾರಚನೆ ಚರ್ಚೆ**

ರಾಹುಲ್ ಗಾಂಧಿ ಭೇಟಿ ಸಂದರ್ಭದಲ್ಲಿ ಸಂಪುಟ ಪುನಾರಚನೆ ಕುರಿತಾಗಿಯೂ ಚರ್ಚೆ ನಡೆದಿರುವ ಸಾಧ್ಯತೆ ಇದೆ ಎಂಬ ಮಾಹಿತಿಯೂ ಇದೆ. ಸಿದ್ದರಾಮಯ್ಯ ಸದ್ಯಕ್ಕೆ ಸಂಪುಟ ಪುನಾರಚನೆ ಬೇಡ ಎಂಬ ಅಭಿಪ್ರಾಯ ಹೊಂದಿದ್ದಾರೆ. ಇದನ್ನು ರಾಹುಲ್ ಗಾಂಧಿ ಬಳಿಯೂ ತೆರೆದಿಟ್ಟಿರುವ ಸಾಧ್ಯತೆ ಇದೆ. ಆದರೆ ಭೇಟಿ ಕುರಿತಾಗಿ ಅಧಿಕೃತವಾಗಿ ಯಾವುದೇ ಮಾಹಿತಿಯನ್ನು ಸಿದ್ದರಾಮಯ್ಯ ಮಾಧ್ಯಮಗಳ ಮುಂದೆ ಹಂಚಿಕೊಂಡಿಲ್ಲ. ಅದೇನೇ ಇದ್ದರೂ ಸದ್ಯದ ಕಾಂಗ್ರೆಸ್ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಈ ಭೇಟಿ ಮತ್ತು ಮಾತುಕತೆ ವಿವಿಧ ಆಯಾಮಗಳಲ್ಲಿ ಚರ್ಚೆಗೆ ಎಡೆಮಾಡಿಕೊಟ್ಟಿದೆ.

## ಕೆಪಿಸಿಸಿ ಅಧ್ಯಕ್ಷ ಸ್ಥಾನ ಬದಲಾವಣೆ, ಸಂಪುಟ ವಿಸ್ತರಣೆ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ಸಂದೇಶ

### ಸರಕಾರ ಎರಡು ವರ್ಷ ಪೂರೈಸುವವರೆಗೆ ಪಕ್ಷ ಮತ್ತು ಸರಕಾರದಲ್ಲಿಯಥಾಸ್ಥಿತಿ ಮುಂದುವರಿಕೆಗೆ ಸ್ಪಷ್ಟ ನಿರ್ದೇಶನ

• ಉದಯವಾಹಿನಿ, ಬೆಂಗಳೂರು

ಹನಿಟ್ರ್ಯಾಪ್ ಪ್ರಕರಣ ನಿಭಾಯಿಸಿದ ರೀತಿ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಕಾಂಗ್ರೆಸ್ ಹೈಕಮಾಂಡ್, ಸರಕಾರ ಎರಡು ವರ್ಷ ಪೂರೈಸುವವರೆಗೆ ಪಕ್ಷ ಮತ್ತು ಸರಕಾರದಲ್ಲಿಯಥಾಸ್ಥಿತಿ ಮುಂದುವರಿಕೆಗೆ ಸ್ಪಷ್ಟ ನಿರ್ದೇಶನ ನೀಡಿದೆ. ಇದರೊಂದಿಗೆ, ಕೆಪಿಸಿಸಿ ಸಾರಥ್ಯ ಬದಲಾವಣೆ ಹಾಗೂ ಸಂಪುಟ ಪುನಾರಚನೆ ಸಾಧ್ಯತೆ ಕುರಿತ ಚರ್ಚೆಗೆ 'ಬ್ರೇಕ್' ಬಿದ್ದಿದೆ.

ಮೂರು ದಿನಗಳ ಭೇಟಿಯ ಭಾಗವಾಗಿ ದಿಲ್ಲಿಯಲ್ಲಿ ಉಳಿದಿರುವ ಸಿಎಂ ಸಿದ್ದರಾಮಯ್ಯ ಅವರು ಗುರುವಾರ ಬೆಳಗ್ಗೆ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಹಾಗೂ ಮಧ್ಯಾಹ್ನ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರನ್ನು ಭೇಟಿಯಾಗಿದ್ದರು. ರಾಜ್ಯ ವಿಧಾನ ಪರಿಷತ್ತಿನಲ್ಲಿ ತೆರವಾಗಿರುವ ನಾಲ್ಕು ಸ್ಥಾನಗಳಿಗೆ ನಾಮನಿರ್ದೇಶನ ಸಂಬಂಧ ಸೂಕ್ತ ಆಯ್ಕೆ ಶುರು ಮಾಡಿ ಎಂದು ಸೂಚಿಸಿದ್ದನ್ನು ಬಿಟ್ಟರೆ, ಪಕ್ಷ ಮತ್ತು ಸರಕಾರದ ಮಟ್ಟದಲ್ಲಿ ಸದ್ಯಕ್ಕೆ ಯಾವುದೇ ಬದಲಾವಣೆಗೆ ಹೈಕಮಾಂಡ್ 'ನೋ' ಎಂದಿದೆ.

ರಾಹುಲ್ ಗಾಂಧಿ ಅವರನ್ನು ನಿವಾಸದಲ್ಲಿ ಭೇಟಿಯಾಗಿ ಸುಮಾರು ಅರ್ಧ ತಾಸು ಕಾಲ ಸಿಎಂ ಸಿದ್ದರಾಮಯ್ಯ ಚರ್ಚಿಸಿದರು. ರಾಜ್ಯ ರಾಜಕೀಯ ಬೆಳವಣಿಗೆಗಳ ಕುರಿತು ವಿವರಣೆ ನೀಡಿ, ಸಚಿವ ಕೆ.ಎನ್.ರಾಜಣ್ಣ ಅವರನ್ನು ಹನಿಟ್ರ್ಯಾಪ್‌ಗೆ ಕೆಡವಲು ನಡೆದ ಪ್ರಯತ್ನದ ಕುರಿತು ಸಿಎಂ ಪ್ರಸ್ತಾಪಿಸಿದರು.



**ಹನಿಟ್ರ್ಯಾಪ್ ಕುರಿತು ರಾಹುಲ್ ಅಸಮಾಧಾನ**

ಆದರೆ, ಘಟನೆ ಬಗ್ಗೆ ರಾಹುಲ್ ಗಾಂಧಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಪಕ್ಷದ ವೇದಿಕೆ ಬದಲಿಗೆ ಈ ವಿಚಾರ ವಿಧಾನಸಭೆಯಲ್ಲಿ ಪ್ರಸ್ತಾಪವಾಗಿದ್ದು ಹೇಗೆ ರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಗೆ ಗ್ರಾಸವಾದ ಈ ಪ್ರಕರಣ ಶಾಸನಸಭೆಯಲ್ಲಿ ಪ್ರಸ್ತಾಪವಾಗುವಂತಹ ವಾತಾವರಣ ನಿರ್ಮಾಣವಾಗಿದ್ದು ಮತ್ತು ಅದಕ್ಕೆ ಅವಕಾಶ ಮಾಡಿಕೊಟ್ಟಿದ್ದು ಏಕೆ,'' ಎಂದು ರಾಹುಲ್ ಗಾಂಧಿ ಪ್ರಶ್ನಿಸಿದರು ಎಂದು ಹೇಳಲಾಗಿದೆ.

**ಜಾತಿ ಗಣತಿ ಚರ್ಚೆ**

ಪಕ್ಷ ಭರವಸೆ ನೀಡಿದ್ದಂತೆ ಹಿಂದುಳಿದ ವರ್ಗಗಳ ಆಯೋಗದ ಜಾತಿ ಗಣತಿ ವರದಿಯನ್ನು ಅಂಗೀಕರಿಸಿ, ಜಾರಿ ಮಾಡುವ ಕುರಿತಂತೆ ಸಿಎಂ ಸಿದ್ದರಾಮಯ್ಯ ಅವರು ಈಗಾಗಲೇ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೊಟ್ಟಿಗೆ ಚರ್ಚಿಸಿದ್ದು, ನೆರೆಯ ತಮಿಳುನಾಡು ಮಾದರಿಯಲ್ಲಿ ಮೀಸಲು ಪ್ರಮಾಣವನ್ನು ಹೆಚ್ಚಳ ಮಾಡಿ ಕೇಂದ್ರಕ್ಕೆ ಶಿಫಾರಸು ಮಾಡುವ ಆಶಯವನ್ನು ವ್ಯಕ್ತಪಡಿಸಿದ್ದರು. ಈ ಕುರಿತು ರಾಹುಲ್ ಗಾಂಧಿ ಅವರೊಂದಿಗೆ ಚರ್ಚಿಸಿ ತೀರ್ಮಾನಕ್ಕೆ ಬರಲು ಖರ್ಗೆ ಅವರು ಸಿಎಂಗೆ ಸಲಹೆ ಮಾಡಿದ್ದರು. ಆದರೆ, ಈ ವಿಚಾರ ಇಂದಿನ ಭೇಟಿ ಕಾಲಕ್ಕೆ ಚರ್ಚೆಯಾಯಿತೇ ಅಥವಾ ಇಲ್ಲವೇ ಎಂಬುದು ಖಚಿತವಾಗಿಲ್ಲ.

**ಯಥಾಸ್ಥಿತಿಗೆ ಸೂಚನೆ:** ಸಂಪುಟದಲ್ಲಿ ಸಣ್ಣ ಪ್ರಮಾಣದ ಬದಲಾವಣೆ ಮಾಡಿ, ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿರಾಜೀನಾಮೆ ನೀಡಿದ್ದ ಬಿ.ನಾಗೇಂದ್ರ ಅವರನ್ನು ಮತ್ತೆ ಸಂಪುಟಕ್ಕೆ ತೆಗೆದುಕೊಳ್ಳುವ ಹಾಗೂ ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಅವರಿಗೂ ಸಂಪುಟದಲ್ಲಿಅವಕಾಶ ಕಲ್ಪಿಸುವ ಚಿಂತನೆಗೆ ಎಐಸಿಸಿ ಹೈಕಮಾಂಡ್ ಒಪ್ಪಿಲ್ಲ. ಜತೆಗೆ, ''ಕೆಪಿಸಿಸಿ ಸಾರಥ್ಯವೂ ಯಥಾಸ್ಥಿತಿ ಇರಲಿ. ಮೇಲ್ಮನೆ ನಾಮನಿರ್ದೇಶನ ಕುರಿತಂತೆ ವೇಣುಗೋಪಾಲ್ ಅವರೊಟ್ಟಿಗೆ ಸಮಾಲೋಚನೆ ನಡೆಸಿ, ಮುಂದುವರಿಯಿರಿ ಎಂದು ರಾಹುಲ್ ಗಾಂಧಿ ಸಿಎಂಗೆ ಸೂಚಿಸಿದರು ಎಂದು ತಿಳಿದುಬಂದಿದೆ.

**ದಿಲ್ಲಿಯಲ್ಲೇ ಉಳಿದ ಸಿಎಂ:** ದಿಲ್ಲಿಯಲ್ಲೇ ಉಳಿದಿರುವ ಸಿಎಂ ಸಿದ್ದರಾಮಯ್ಯ ಅವರು ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಭೇಟಿ ಮಾಡುವ ನಿರೀಕ್ಷೆ ಇದ್ದು, ವಕ್ಫ್ ವಿಚಾರ ಮುಗಿದ ಬಳಿಕ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಮತ್ತೊಮ್ಮೆ ಭೇಟಿ ಮಾಡುವ ಸಾಧ್ಯತೆಯಿದೆ. ಶುಕ್ರವಾರ ರಾತ್ರಿ ಸಿಎಂ ಬೆಂಗಳೂರಿಗೆ ವಾಪಸ್ಸಾಗಲಿದ್ದಾರೆ.

**ಬದಲಾವಣೆ ಬಯಸದ ವರಿಷ್ಠರು**

ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಕುರಿತು ಬೆಳವಣಿಗೆಯ ನಿರೀಕ್ಷೆ ಇತ್ತು. ದಿಲ್ಲಿ ಬುಲಾವ್ ಆಧರಿಸಿ ಸಚಿವ ಈಶ್ವರ ಖಂಡ್ರೆ ಅವರು ಗುರುವಾರ ಬೆಳಗ್ಗೆ ದಿಢೀರ್ ದಿಲ್ಲಿಗೆ ತೆರಳಿದ್ದರು. ಆದರೆ, ಪಕ್ಷದ ಸರಕಾರದಲ್ಲಿ'ಸಮತೋಲನ' ಕಾಯ್ದುಕೊಳ್ಳುವ ಹಾಗೂ ಚೆಕ್‌ಮೇಟ್ ವ್ಯವಸ್ಥೆಯಾಗಿ ಹಾಲಿ ವ್ಯವಸ್ಥೆಯೇ ಮುಂದುವರಿಯಲಿ ಎಂದು ಹೈಕಮಾಂಡ್ ನಾಯಕರು ಸ್ಪಷ್ಟ ನಿರ್ದೇಶನ ನೀಡಿದ್ದಾರೆ ಎನ್ನಲಾಗಿದೆ.

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.99 ₹/L ಬಂಗಾರ: ₹9,338/Gram24ct ₹8,560/Gram22ct ಬೆಳ್ಳಿ: ₹103.00/Gram

## ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಭೀಕರ ಅಪಘಾತ, ಕಾರಿಗೆ ಐರಾವತ ಬಸ್ ಡಿಕ್ಕಿ, ನಾಲ್ವರ ಸಾವು

• ಉದಯವಾಹಿನಿ, ಬೆಂಗಳೂರು

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೆದ್ದಾರಿಯ ಮಂಡ್ಯ ಸಮೀಪದ ತೂಬಿನಕೆರೆ ಬಳಿ ಅತೀ ವೇಗವಾಗಿ ಬರುತ್ತಿದ್ದ ಐರಾವತ ಬಸ್ ಮುಂದೆ ಹೋಗುತ್ತಿದ್ದ ಕಾರಿಗೆ ಡಿಕ್ಕಿ ಹೊಡೆದ ಪರಿಣಾಮ ನಗರದ ನಾಲ್ವರು ಸಾವನ್ನಪ್ಪಿರುವ ಘಟನೆ ಮಧ್ಯಾಹ್ನ ಸಂಭವಿಸಿದೆ.

ಮೃತರು ಬೆಂಗಳೂರಿನ ಜೆಪಿ ನಗರದ ನಿವಾಸಿಗಳೆಂದು ಪೊಲೀಸರು ಈ ಸಂಜೆಗೆ ತಿಳಿಸಿದ್ದಾರೆ. ಬೆಂಗಳೂರಿನಿಂದ ಪಿರಿಯಾಪಟ್ಟಣಕ್ಕೆ ಕಾರಿನಲ್ಲಿ ಈ ನಾಲ್ವರು ಹೋಗುತ್ತಿದ್ದಾಗ ಎಕ್ಸ್‌ಪ್ರೆಸ್ ಹೆದ್ದಾರಿಯ ಮಂಡ್ಯ ಸಮೀಪದ ತೂಬಿನಕೆರೆ ಬಳಿ ಸರ್ವಿಸ್ ರಸ್ತೆಗೆ ಹೋಗುವ ಮಾರ್ಗದಲ್ಲಿ ಮಧ್ಯಾಹ್ನ 12.30 ರಲ್ಲಿ ಈ ಅಪಘಾತ ಸಂಭವಿಸಿದೆ.

ಸರ್ವಿಸ್ ರಸ್ತೆಗೆ ಹೋಗಲು ಕಾರಿನ ವೇಗವನ್ನು ಕಡಿಮೆ ಮಾಡಿದ ಹಿನ್ನೆಲೆಯಲ್ಲಿ ಹಿಂದೆ ಅತಿ ವೇಗವಾಗಿ ಬರುತ್ತಿದ್ದ ಐರಾವತ ಬಸ್ ಡಿಕ್ಕಿ ಹೊಡೆದಿದೆ. ಡಿಕ್ಕಿ



ಉದಯವಾಹಿನಿ ಚಿತ್ರ

ಹೊಡೆದ ರಭಸಕ್ಕೆ ಕಾರು ನಜ್ಜುಗುಜ್ಜಾಗಿದ್ದು, ಅದರಲ್ಲಿ ಇದ್ದವರು ಹೊರ ಬರಲಾಗದೆ ಮೃತಪಟ್ಟಿದ್ದಾರೆ. ಸುದ್ದಿ ತಿಳಿದು ಸ್ಥಳಕ್ಕೆ ದಾವಿಸಿದ ಮಂಡ್ಯ ಗ್ರಾಮಾಂತರ ಠಾಣೆ ಪೊಲೀಸರು ಪರಿಹಾರ ಕಾರ್ಯಾಚರಣೆ ಕೈಗೊಂಡರು. ಒಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ್ದು ಮೂವರು ಆಸ್ಪತ್ರೆಗೆ ಕರೆದೊಯ್ಯುತ್ತಿದ್ದಾಗ ಮಾರ್ಗಮಧ್ಯೆ ಕೊನೆಯುಸಿರು ಎಳೆದಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಬಗ್ಗೆ ಮಂಡ್ಯ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಪೊಲೀಸರು ಮುಂದಿನ ಕ್ರಮಕ್ಕೆಗೊಂಡಿದ್ದಾರೆ.

## ಕರ್ನಾಟಕ ಭವನ ಉದ್ಘಾಟನೆಗೆ ಆಮಂತ್ರಣವಿಲ್ಲ : ಪರಮೇಶ್ವರ್

• ಉದಯವಾಹಿನಿ, ಬೆಂಗಳೂರು

ದೆಹಲಿಯಲ್ಲಿ ನಿನ್ನೆ ನಡೆದ ಕರ್ನಾಟಕ ಭವನ ಉದ್ಘಾಟನಾ ಕಾರ್ಯಕ್ರಮದ ಫೋಟೋವನ್ನು ಪೇಪರ್‌ನಲ್ಲಿ ನಾನು ನೋಡಿದೆ. ಅದರಲ್ಲಿ ನಾನು ಇಲ್ಲ ಎಂದು ಹಾಸ್ಯ ಚಟಾಕಿ ಹಾರಿಸುವ ಮೂಲಕ ಗೃಹಸಚಿವ ಡಾ.ಜಿ.ಪರಮೇಶ್ವರ್ ತಮ್ಮಲ್ಲಿರುವ ಅಸಹನೆಯನ್ನು ಪರೋಕ್ಷವಾಗಿ ಹೊರಹಾಕಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕರ್ನಾಟಕ ಭವನದ ನಿರ್ಮಾಣಕ್ಕೆ ಶಂಕು ಸ್ಥಾಪನೆ ಮಾಡಿದ್ದೇ ನಾನು. ನಿನ್ನೆ ಅದರ ಉದ್ಘಾಟನೆಯಾಗಿದೆ. ನನ್ನನ್ನು ಯಾರೂ ಕರೆದಿಲ್ಲ ಎಂದು ಹೇಳಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಲೋಕೋಪಯೋಗಿ ಸಚಿವರು ಸೇರಿದಂತೆ ಬಹುತೇಕ ಪ್ರಮುಖರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ. ನನಗೆ ಆಹ್ವಾನ ನೀಡದೇ ಇರುವ ಬಗ್ಗೆ ಹೆಚ್ಚು ಪ್ರಾಮುಖ್ಯ ನೀಡಬೇಕಿಲ್ಲ ಎಂದು ಹೇಳಿದರು.

> **ಹೊಸ ನೀರು ಬಂದಾಗ ಹಳೆ ನೀರು ಬದಲಾಗುವುದು ಸಹಜ. ಈ ಹಿಂದೆ ನಾನು ಕೆಪಿಸಿಸಿ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಈಗ ಡಿ.ಕೆ.ಶಿವಕುಮಾರ್ ಅಧ್ಯಕ್ಷರಾಗಿದ್ದಾರೆ. ಎಲ್ಲದಕ್ಕೂ ನನ್ನ ಅಭಿಪ್ರಾಯ ಕೇಳಬೇಕು ಎಂದು ಹೇಗೆ ಹೇಳಲು ಸಾಧ್ಯ -ಪರಮೇಶ್ವರ್**



ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ಕಾಲಕಾಲಕ್ಕೆ ಚರ್ಚೆಗಳು ನಡೆಯುತ್ತಿವೆ. ನಾನು ಅಧ್ಯಕ್ಷನಾಗಿದ್ದಾಗಲೂ ಎರಡನೇ ಅವಧಿಗೆ ಮುಂದುವರೆಸಬಾರದು ಎಂಬ ಚರ್ಚೆಯಾಗಿತ್ತು. ಹೈಕಮಾಂಡ್ ನಾಯಕರು ಹಿರಿಯ ಕಾಂಗ್ರೆಸಿಗರ ಅಭಿಪ್ರಾಯ ಪಡೆದು ನನ್ನನ್ನೇ ಮುಂದುವರೆಸಿದರು. ಈಗಲೂ ಹಾಗೆಯೇ ಅಧ್ಯಕ್ಷರ ಬದಲಾವಣೆ ಬಗ್ಗೆ ಚರ್ಚೆಗಳಾಗುತ್ತವೆ. ಇದರಲ್ಲಿ ಏನೂ ವಿಶೇಷತೆ ಇಲ್ಲ ಎಂದು ತಿಳಿಸಿದರು.

ಡಿ.ಕೆ.ಶಿವಕುಮಾರ್ ಹಾಗೂ ನನ್ನ ನಡುವೆ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ. ಈಗ ಬೇಕೆಂದರೆ ಈಗಲೇ ನಾನು ಅವರ ಮನೆಗೆ ಹೋಗುತ್ತೇನೆ. ನಮಿಬ್ಬರ ಬಗ್ಗೆ ಅಂತಹ ಆತೀಯತೆ ಇದೆ ಎಂದರು.

ರಾಜಕೀಯದಲ್ಲಿ ಸಣ್ಣಪುಟ್ಟ ಅಭಿಪ್ರಾಯ ಭೇದಗಳಿರುವುದು ಸಹಜ. ಅದನ್ನೇ ಭಿನ್ನಮತ ಎಂದು ಹೇಳುವುದು ಸರಿಯಲ್ಲ ಎಂದು ತಿಳಿಸಿದರು.

ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರ ಹನಿಟ್ರ್ಯಾಪ್ ಹಾಗೂ ಅವರ ಪುತ್ರ ರಾಜೇಂದ್ರ ರಾಜಣ್ಣ ಅವರ ಕೊಲೆ ಬೆದರಿಕೆ ಎರಡೂ ಪ್ರಕರಣಗಳ ತನಿಖೆ ನಡೆಯುತ್ತಿದೆ. ಎಂದರು.

## ಲೋಕಸಭೆಯಲ್ಲಿ ವಕ್ಫ್ ವಿಧೇಯಕ ಅಂಗೀಕಾರ ಐತಿಹಾಸಿಕ ಕ್ಷಣ : ಹೆಚ್ಡಿಕೆ

• ಉದಯವಾಹಿನಿ, ಬೆಂಗಳೂರು



ಲೋಕಸಭೆಯಲ್ಲಿ ವಕ್ಫ್ ತಿದ್ದುಪಡಿ ವಿಧೇಯಕ 2025ಅನ್ನು ಅಂಗೀಕರಿಸಿರುವುದು ಐತಿಹಾಸಿಕ ಕ್ಷಣವಾಗಿದೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಬಣ್ಣಿಸಿದ್ದಾರೆ. ಈ ಸಂಬಂಧ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು ಐತಿಹಾಸಿಕ ವಕ್ಫ್ ವಿಧೇಯಕ ಅಂಗೀಕಾರವಾಗಿರುವುದು ಪಾರದರ್ಶಕತೆ ಹಾಗೂ ನ್ಯಾಯದ ಕಡೆಗೆ ಮಹತ್ವದ ಹೆಜ್ಜೆ ಇಟ್ಟಿರುವುದನ್ನು ಗುರುತಿಸುತ್ತದೆ ಎಂದು ಹೇಳಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ದೂರದೃಷ್ಟಿಕೋನವನ್ನು ಕೇಂದ್ರ ಸರ್ಕಾರ ಹೊಂದಿದೆ. ಕೇಂದ್ರ ಸರ್ಕಾರವು ನ್ಯಾಯಪರತೆ ಮತ್ತು ಹೊಣೆಗಾರಿಕೆಯನ್ನು ಎತ್ತಿಹಿಡಿಯುವಸುಧಾರಣೆಗಳನ್ನು ಖಚಿತಪಡಿಸುವುದನ್ನು ಮುಂದುವರೆಸಿದಂತಾಗಿದೆ. ಈ ರೀತಿಯ ಪರಿವರ್ತಕ ನಡೆಯು ಶ್ಲಾಘನೀಯವಾಗಿದೆ ಎಂದಿದ್ದಾರೆ.

## ಡೀಸೆಲ್ ಬೆಲೆ ಏರಿಕೆ ಖಂಡಿಸಿದ ಕಾಸಿಯಾ

• ಉದಯವಾಹಿನಿ, ಬೆಂಗಳೂರು

ವಿದ್ಯುತ್ ದರ ಏರಿಕೆ ನಡುವೆ ಡೀಸೆಲ್ ಬೆಲೆ ಏರಿಕೆ ಮಾಡಿರುವುದನ್ನು ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ(ಕಾಸಿಯಾ) ವಿರೋಧ ವ್ಯಕ್ತಪಡಿಸಿದೆ ಸರ್ಕಾರದ ಈ ಕ್ರಮವು ಸಣ್ಣ ಹಾಗು ಮಧ್ಯಮ ಕೈಗಾರಿಕೆಗಳನ್ನು ಸಂಕಷ್ಟಕ್ಕೆ ಸಿಲುಕುವಂತೆ ಮಾಡಲಿದೆ ಎಂದು ಕಾಸಿಯಾ ಅಧ್ಯಕ್ಷ ರಾಜಗೋಪಾಲ್ ಕಳವಳ ವ್ಯಕ್ತಪಡಿಸಿದ್ದಾರೆ.

ಸಣ್ಣ ಕೈಗಾರಿಕೆಗಳು, ಸಾರಿಗೆ, ಉತ್ಪಾದನೆ ವಲಯದಲ್ಲಿ ಹೆಚ್ಚಾಗಿ ಡೀಸೆಲ್ ಅವಲಂಬಿಸಿವೆ. ಡೀಸೆಲ್ ಬೆಲೆ 2 ರೂ ಏಕಾಏಕಿ ತೀವ್ರವಾಗಿ ಏರಿಕೆಯಾಗುತ್ತಿರುವುದರಿಂದ, ವ್ಯವಹಾರಗಳು, ಉತ್ಪಾದನಾ ವೆಚ್ಚವನ್ನು ನಿರ್ವಹಿಸುವುದು ಕಷ್ಟಕರವಾಗುತ್ತಿದೆ ಎಂದಿದ್ದಾರೆ.

ಅನೇಕ ಸಣ್ಣ ಉದ್ಯಮಗಳು ಸಣ್ಣ ಪ್ರಮಾಣದ ಲಾಭಾಂಶದಲ್ಲಿ ಕಾರ್ಯನಿರ್ವಹಿಸುತ್ತವೆ. ಹೆಚ್ಚುತ್ತಿರುವ ಇಂಧನ ವೆಚ್ಚಗಳು ಅವುಗಳ ಕಾರ್ಯಸಾಧ್ಯತೆಗೆ ಅಪಾಯವನ್ನುಂಟು ಮಾಡುತ್ತಿವೆ. ವಿದ್ಯುತ್ ಪೂರೈಕೆ ಸರಪಳಿ ಅಡಚಣೆಗಳು, ಹಣದುಬ್ಬರ ಒತ್ತಡಗಳು, ಹೆಚ್ಚುತ್ತಿರುವ ಕಚ್ಚಾವಸ್ತುಗಳ ವೆಚ್ಚಗಳಿಂದ ಪರಿಸ್ಥಿತಿ ಮತ್ತಷ್ಟು ಉಲ್ಬಣಗೊಂಡಿದೆ ಎಂದು ತಿಳಿಸಿದೆ. ಸರ್ಕಾರವು ಸಬ್ಸಿಡಿ ಒದಗಿಸಬೇಕು, ಅಬಕಾರಿ ಸುಂಕಗಳನ್ನು ಕಡಿಮೆ ಮಾಡಬೇಕು ಅಥವಾ ಇಂಧನ ಬೆಲೆಗಳ ಪರಿಣಾಮವನ್ನು ಕಡಿಮೆ ಮಾಡುವ ನೀತಿಗಳನ್ನು ಜಾರಿಗೆ ತರಬೇಕು ಎಂದು ಒತ್ತಾಯಿಸಿದೆ.

### ಸಾಮಾಜಿಕ ಜಾಲತಾಣದಲ್ಲಿ ಈ ಕುರಿತಂತೆ ತಮ್ಮ ಅಭಿಪ್ರಾಯ ಹಂಚಿಕೊಂಡಿರುವ ಮಾಹಿತಿ

## ವಕ್ಫ್ ಮಸೂದೆ ಲೋಕಸಭೆಯಲ್ಲಿ ಪಾಸ್ ಆಗಿದ್ದು ಖುಷಿ ತಂದಿದೆ: ಚೇತನ್

• ಉದಯವಾಹಿನಿ, ಬೆಂಗಳೂರು

ಇದೇ ಏಪ್ರಿಲ್ 2ರಂದು ಮಧ್ಯರಾತ್ರಿ ಲೋಕಸಭೆಯಲ್ಲಿ ವಕ್ಫ್ ಮಸೂದೆಗೆ ಲೋಕಸಭೆಯಲ್ಲಿ ಅಂಗೀಕಾರ ದೊರಕಿರುವುದಕ್ಕೆ ಸಾಮಾಜಿಕ ಹೋರಾಟಗಾರ ಚೇತನ್ ಕುಮಾರ್ ಅಹಿಂಸಾ ಅವರು ಸಂತೋಷ ವ್ಯಕ್ತಪಡಿಸಿದ್ದಾರೆ. ಈ ಕುರಿತಂತೆ ಟ್ವೀಟ್ ಮಾಡಿರುವ ಅವರು, ''ಲೋಕಸಭೆಯಲ್ಲಿ ವಕ್ಸ್ ಮಸೂದೆ ಅಂಗೀಕಾರವಾಗಿರುವುದನ್ನು ನೋಡಿ ಸಂತೋಷವಾಗಿದೆ'' ಎಂದು ಹೇಳಿದ್ದಾರೆ. ಇದೇ ವೇಳೆ, ಪ್ರತಿಪಕ್ಷಗಳು ಮಸೂದೆಯನ್ನು ತೀವ್ರವಾಗಿ ವಿರೋಧಿಸಿದ್ದಕ್ಕೂ ಅವರು ಬೇಸರ ವ್ಯಕ್ತಪಡಿಸಿದ್ದಾರೆ.

''ಯಾವುದೇ ಸದೃಢ ಪ್ರಜಾಪ್ರಭುತ್ವದಲ್ಲಿ 'ಚೆಕ್ ಮತ್ತು ಬ್ಯಾಲೆನ್ಸ್' ಅತ್ಯಗತ್ಯ ವಕ್ಸ್ ಮಸೂದೆಯು ನ್ಯಾಯಸಮ್ಮತವಲ್ಲದಿದ್ದಲ್ಲಿ ಬಹುಶಃ ಅಂಗೀಕಾರವಾಗುತ್ತಿರಲಿಲ್ಲ.

ಮಸೂದೆಗೆ 288 ಮತಗಳು ಕೋಮುವಾದಿ ಮತ್ತು ನಿಜವಾದ ಸೆಕ್ಯುಲರ್ ಶಕ್ತಿಗಳ ಸಂಯೋಜನೆಯಾಗಿದೆ. ಮಸೂದೆ ವಿರುದ್ಧ 232 ಮತಗಳು ಬಂದಿರುವುದನ್ನು ನೋಡದಿರೆ, ಅದೆಲ್ಲವೂ ಹುಸಿ–ಸೆಕ್ಯುಲರ್ ಲಾಭಿಯಾಗಿದೆ'' ಎಂದು ಪ್ರತಿಪಕ್ಷಗಳ ನಾಯಕರ ನಡೆಯನ್ನು ಟೀಕಿಸಿದ್ದಾರೆ.

ತಮ್ಮ ಮಾತುಗಳನ್ನು ಮುಂದುವರಿಸಿ, ''2025 ರ ವಕ್ಸ್ ಮಸೂದೆಯಲ್ಲಿನ ವಸ್ತುನಿಷ್ಠತೆ ಮತ್ತು ಸಮತೋಲನವು ಸಮ್ಮಿಶ್ರ ರಾಜಕೀಯದ ಪರಿಣಾಮಕಾರಿತ್ವವನ್ನು ಸಾಬೀತುಪಡಿಸುತ್ತದೆ. ಬಿಜೆಪಿಯ ಮೊದಲ ಎರಡು ಅವಧಿಗಳಲ್ಲಿ ಬಹುಮತವು ವಕ್ಫ್ ಮಂಡಳಿಯ ಸಮಸ್ಯೆಗಳನ್ನು ಮುಸ್ಲಿಂ ಸಮುದಾಯದ ವಿರುದ್ಧ ಅಸ್ತ್ರವಾಗಿ ಬಳಸಿರಬಹುದು'' ಎಂದು ಅವರು ಹೇಳಿದ್ದಾರೆ.

''ಇವಾಗ ಟಿಡಿಪಿ, ಜೆಡಿಯು ಸೇರಿದಂತೆ ಎನ್‌ಡಿಎ ಒಕ್ಕೂಟದ ಮೈತ್ರಿ ಪಕ್ಷಗಳು ಈ ಮಸೂದೆಗೆ ಬೆಂಬಲ ಸೂಚಿಸುವ ಮೂಲಕ ಸರಕಾರ ಜೊತೆಗೆ ತಮ್ಮ ಒಳಗೊಳ್ಳುವಿಕೆಯನ್ನು ಪಾರದರ್ಶಕತೆಯನ್ನು ಎತ್ತಿಹಿಡಿಯುವ ಕೆಲಸ ಮಾಡಿವೆ'' ಎಂದು ಶ್ಲಾಘಿಸಿದ್ದಾರೆ.

ಜಿಲ್ಲೆಯ ಸಂಸದ ಶ್ರೇಯಸ್ ಪಟೇಲ್ ವಕ್ಫ್ ಕಾಯಿದೆ ಬಗ್ಗೆ ಸರಿಯಾಗಿ ತಿಳಿದುಕೊಳ್ಳದೆ ಅವರಿಗೆ ವೋಟು ಹಾಕಿದ ಮುಸ್ಲಿಮರ ಓಲೈಸಲು ಕಾಯಿದೆ ತಿದ್ದುಪಡಿ ವಿರುದ್ಧ ಹೇಳಿಕೆ ನೀಡಿದ್ದಾರೆ,'' ಎಂದು ಹೇಳಿಕೆಯಲ್ಲಿಟೀಕಿಸಿದ್ದಾರೆ.

''ಸಂಸದ ಶ್ರೇಯಸ್‌ಪಟೇಲ್ ಅವರಿಗೆ ಹಿಂದೂಗಳು ಮತ ಹಾಕಿದ್ದಾರೆ ಎಂಬುದನ್ನು ಅವರು ಮರೆಯಬಾರದು.

ಹಿಂದೂಗಳ ದೇವಸ್ಥಾನ, ರೈತರ ಆಸ್ತಿಯನ್ನು ಕಬಳಿಸುವ ವಕ್ಫ್ ಕಾಯಿದೆ ಬೆಂಬಲಿಸುವ ಸಂಸದರ ನಡೆ ಖಂಡನಾರ್ಹ ಎಂದಿದ್ದಾರೆ.

- **ಏ. 2ರಂದು ವಕ್ಫ್ ಮಸೂದೆಯು ಲೋಕಸಭೆಯಲ್ಲಿ ಪಾಸ್ ಆಗಿದ್ದಕ್ಕೆ ನಟ, ಹೋರಾಟಗಾರ ಚೇತನ್ ಅಹಿಂಸಾ ಸಂತೋಷ.**
- **ಸಾಮಾಜಿಕ ಜಾಲತಾಣದಲ್ಲಿ ಈ ಕುರಿತಂತೆ ತಮ್ಮ ಅಭಿಪ್ರಾಯ ಹಂಚಿಕೊಂಡಿರುವ ಮಾಹಿತಿ.**
- **ವಕ್ಫ್ ಮಸೂದೆ ವಿರುದ್ಧ ಮತ ಚಲಾಯಿಸಿದ್ದ ವಿಪಕ್ಷಗಳ ನಡೆಗೆ ಬೇಸರ.**



### ವಕ್ಫ್ ಕಾಯಿದೆ ತಿದ್ದುಪಡಿ ಸ್ವಾಗತಾರ್ಹ

ಕೇಂದ್ರ ಸರಕಾರ ಲೋಕಸಭೆಯಲ್ಲಿಮಂಡಿಸಿದ ವಕ್ಫ್ ಕಾಯಿದೆ ತಿದ್ದುಪಡಿ ಸ್ವಾಗತಾರ್ಹ ಎಂದು ಸಕಲೇಶಪುರ-ಆಲೂರು ಶಾಸಕ ಸಿಮೆಂಟ್ ಮಂಜು ತಿಳಿಸಿದ್ದಾರೆ. ''ಈ ಕಾಯಿದೆಯಿಂದ ಬಡ ಮತ್ತು ಹಿಂದುಳಿದ ನೊಂದ ಮುಸ್ಲಿಮರಿಗೆ ಅನುಕೂಲವಾಗಲಿದೆ. ಹಾಸನ ಜಿಲ್ಲೆಯ ಅರಕಲಗೂಡು ತಾಲೂಕಿನ ಇತಿಹಾಸ ಪ್ರಸಿದ್ಧ ಗೌರಿ ಕಟ್ಟೆ, ಬೇಲೂರಿನ ಐತಿಹಾಸಿಕ ಸ್ಥಳಗಳು, ಅರಸೀಕೆರೆ, ಹಾಸನ ಹೀಗೆ ಜಿಲ್ಲೆಯ ಹಲವಾರು ಹಿಂದೂ ದೇವಾಲಯದ ಸ್ಥಳಗಳನ್ನು ಮತ್ತು ಬಡ ರೈತರ ಆಸ್ತಿಯನ್ನು ವಕ್ಫ್ ಆಸ್ತಿ ಎಂದು ಹೇಳಿದೆ.

### ಒಂದು ವಿಚಾರಕ್ಕೆ ಸ್ಪಷ್ಟನೆ ಕೋರಿಕೆ

ವಕ್ಸ್ ಮಂಡಳಿಯಲ್ಲಿ ಕೆಲವು ಹುದ್ದೆಗಳಲ್ಲಿರುವವರು 'ಕನಿಷ್ಠ 5 ವರ್ಷಗಳ ಕಾಲ ಮುಸ್ಲಿಂ ಧರ್ಮವನ್ನು ಪಾಲಿಸುತ್ತಿರಬೇಕು' ಎಂಬ ವಕ್ಸ್ ಮಸೂದೆಯಲ್ಲಿ ಸೇರ್ಪಡೆ ಅಸ್ಪಷ್ಟವಾಗಿ ಕಾಣುತ್ತದೆ'' ಎಂದು ಚೇತನ್ ಹೇಳಿದ್ದಾರೆ. ಮಸೂದೆಯು ಕಾಯ್ದೆಯ ನಂತರ ವಿಚಾರಾ ರೂಪಿಸಲು ಅವಕಾಶ ನೀಡುವುದರಿಂದ, ಈ ಅಂಶವನ್ನು ಮತ್ತಷ್ಟು ಹೊರತರಬೇಕು. ಈ ಸೇರ್ಪಡೆ ಏಕೆ ಅಗತ್ಯ 'ಮುಸ್ಲಿಂ ಧರ್ಮವನ್ನು ಪಾಲಿಸುತ್ತಿರುವವರು' ಎಂಬುದನ್ನು ಹೇಗೆ ವ್ಯಾಖ್ಯಾನಿಸುವುದು? ಎಂದು ಅವರು ಪ್ರಶ್ನಿಸಿದ್ದಾರೆ.

### ಕೇಂದ್ರ ಸರ್ಕಾರದ ವಕ್ಫ್ ಕಾಯ್ದೆ

ತಿದ್ದುಪಡಿ ಮಸೂದೆಯಲ್ಲಿ ಹಲವಾರು ಬದಲಾವಣೆಗಳನ್ನು ಸೂಚಿಸಲಾಗಿದೆ. ವಕ್ಫ್ ಮಂಡಳಿಗಳ ಅಡಿಯಲ್ಲಿ ಸ್ಥಾಪಿತವಾಗಿರುವ ಸೊಸೈಟಿಗಳು ಹಾಗೂ ಸಂಘ ಸಂಸ್ಥೆಗಳನ್ನು ಆಯಾ ರಾಜ್ಯಗಳ ವಕ್ಫ್ ಮಂಡಳಿಗಳಿಂದ ವಿಭಜಿಸುವುದು ಮೊದಲ ವಿಚಾರವಾಗಿದೆ. ಇನ್ನು, ಯಾವುದೇ ಸ್ಥಿರಾಸ್ತಿಯನ್ನು ಸೂಕ್ತ ದಾಖಲೆಗಳಿಲ್ಲದಿದ್ದರೂ ವಕ್ಫ್ ಆಸ್ತಿಯೆಂದು ಘೋಷಿಸುವ ಅಧಿಕಾರವನ್ನು ಮೊಟಕುಗೊಳಿಸಲಾಗಿದೆ. ವಕ್ಫ್ ಮಂಡಳಿಯಲ್ಲಿ ಇಬ್ಬರು ಮುಸ್ಲಿಮೇತರ ಸದಸ್ಯರನ್ನು ನೇಮಿಸುವುದು, ವಕ್ಫ್ ಆಸ್ತಿ ನೋಂದಾವಣೆಯಲ್ಲಿ ಆಧುನಿಕ ತಂತ್ರಜ್ಞಾನ ಬಳಕೆ ಇತ್ಯಾದಿಗಳನ್ನು ಸೇರಿಸಲಾಗಿದೆ.

## ಕಿರುಕುಳ ಆರೋಪ: ವಿಧಾನಸೌಧದ ಮುಂದೆ ಯುವಕ ಆತ್ಮಹತ್ಯೆಗೆ ಯತ್ನ

• ಉದಯವಾಹಿನಿ, ಬೆಂಗಳೂರು

ಪೊಲೀಸರು ತನ್ನ ಮೇಲೆ ಹಲ್ಲೆ ನಡೆಸಿ, ಕಿರುಕುಳ ನೀಡುತ್ತಿದ್ದಾರೆ. ನನಗೆ ನ್ಯಾಯ ಬೇಕೆಂದು ಆಗ್ರಹಿಸಿ ಯುವಕನೋರ್ವ ವಿಧಾನಸೌಧದ ಮುಂದೆ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿರುವ ಘಟನೆಯೊಂದು ನಡೆದಿದೆ. ಆತ್ಮಹತ್ಯೆಗೆ ಯತ್ನಿಸಿದ ಯುವಕನನ್ನು ಬೆಂಗಳೂರು ಗ್ರಾಮಾಂತರದ ದೇವನ ಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣದ ನಿವಾಸಿ ಶೇಖರ್ (28) ಎಂದು ಗುರ್ತಿಸಲಾಗಿದೆ. ಚನ್ನರಾಯಪಟ್ಟಣ ಠಾಣೆ ಪೊಲೀಸರು ಹೊಡೆದು ಕಿರುಕುಳ ನೀಡಿದ್ದು, ನನಗೆ ನ್ಯಾಯಬೇಕೆಂದು ಯುವಕ ಆಗ್ರಹಿಸಿದ್ದಾರೆ. ಇದಕ್ಕೆ ನಿಖರ ಕಾರಣ ಇನ್ನೂ ತಿಳಿದು ಬಂದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.


ಉದಯವಾಹಿನಿ ಚಿತ್ರ

ಸಂಜೆ 5 ಗಂಟೆ ಸುಮಾರಿಗೆ ಶೇಖರ್ ಸೌಧದ ಮುಂದೆ ವಿಷ ಸೇವಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ದಾರಿಹೋಕರು ಪೊಲೀಸರಿಗೆ ಮಾಹಿತಿ ನೀಡಿದ್ದು, ಕೂಡಲೇ ಆತನನ್ನು ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಇದೀಗ ಯುವ ಚಿಕಿತ್ಸೆ ಪಡೆಯುತ್ತಿದ್ದು, ಅಪಾಯದಿಂದ ಪಾರಾಗಿದ್ದಾನೆಂದು ಪೊಲೀಸರು ತಿಳಿಸಿದ್ದಾರೆ.

### ಮುಡಾ ಪ್ರಕರಣದ ಇಡಿ ತನಿಖೆ ಮಾಡುವುದು

## ನ್ಯಾಯಾಂಗ ನಿಂದನೆಯಾಗುತ್ತದೆ


• ಉದಯವಾಹಿನಿ, ಬೆಂಗಳೂರು

ಮುಡಾದಿಂದ ಹಂಚಿಕೆಯಾಗಿದ್ದ 14 ನಿವೇಶನಗಳ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ ನೋಟೀಸ್, ಸಮನ್ಸ್ ನೀಡುವುದು ಅಥವಾ ತನಿಖೆ ಮಾಡಲು ಮುಂದಾದರೆ ನ್ಯಾಯಾಂಗ ನಿಂದನೆಯಾಗುತ್ತದೆ ಎಂದು ಶಾಸಕ ಎ.ಎಸ್.ಪೊನ್ನಣ್ಣ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿರುವ ಅವರು, ಮುಡಾದಿಂದ ಹಂಚಿಕೆಯಾದ 14 ನಿವೇಶನಗಳನ್ನು ಸಿದ್ದರಾಮಯ್ಯನವರ ಪತ್ನಿ ಪಾರ್ವತಿಯವರು ವಾಪಸ್ ನೀಡಿದ್ದಾರೆ. ಇದನ್ನು ಬೇರೆಯವರಿಗೆ ಮಾರಾಟ ಅಥವಾ ಪರಭಾರೆ ಮಾಡುವುದಾಗಲೀ ನಡೆದಿಲ್ಲ. ಹೀಗಾಗಿ ಇಲ್ಲಿ ಹಣದ ವಹಿವಾಟು ಇಲ್ಲ. ಮನಿ ಲ್ಯಾಂಡ್ರಿಂಗ್ ಕಾಯ್ದೆ ಅನ್ವಯಿಸುವುದಿಲ್ಲ ಎಂದರು.

ಇ.ಡಿ ಮುಡಾ ಪ್ರಕರಣದಲ್ಲಿ ದಾಖಲಿಸಿದ್ದ ಇಸಿಐಆರ್ ಅನ್ನು ಶ್ರೀಮತಿ ಪಾರ್ವತಿ ಹಾಗೂ ಸಚಿವ ಭೈರತಿ ಸುರೇಶ್ ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ವಿಚಾರಣೆ ನಡೆದು ಇಸಿಐಆರ್ ಅನ್ನು ರದ್ದುಗೊಳಿಸಲಾಗಿದೆ. ಪ್ರಕರಣದಲ್ಲಿ ಹೆಸರಿಸಲಾದ ಎಲ್ಲರಿಗೂ ತೀರ್ಪು ಅನ್ವಯವಾಗುತ್ತದೆ.

> **14 ನಿವೇಶನಗಳ ಪ್ರಕರಣಗಳನ್ನು ತನಿಖೆ ಮಾಡಲು ಅವಕಾಶವಿಲ್ಲ. ಉಳಿದಂತೆ ಯಾವುದೇ ವಿಚಾರಣೆಗೆ ಯಾವುದೇ ಆಕ್ಷೇಪಗಳಿಲ್ಲ. ನ್ಯಾಯಾಲಯದ ತೀರ್ಪು ಇಲ್ಲದೆ ಇದ್ದರೂ ಕೂಡ ಮುಕ್ತ ತನಿಖೆಗೆ ಅವಕಾಶ ನೀಡಬೇಕು -ಎ.ಎಸ್.ಪೊನ್ನಣ್ಣ**



ಹೀಗಾಗಿ ಮತ್ತೆ ಸಿದ್ದರಾಮಯ್ಯನವರಿಗೆ ನೋಟಿಸ್ ಅಥವಾ ಸಮನ್ಸ್ ನೀಡುವುದಾಗಲೀ ಮಾಡಿದರೆ ಅದು ನ್ಯಾಯಾಂಗ ನಿಂದನೆಯಾಗುತ್ತದೆ ಎಂದು ಎಚ್ಚರಿಸಿದರು.

ನಿನ್ನೆ ನಟೇಶ್ ಪ್ರಕರಣದಲ್ಲಿ ನ್ಯಾಯಾಲಯ ನೀಡಿದ ತೀರ್ಪನ್ನು ತಪ್ಪಾಗಿ ಅರ್ಥೈಸಲಾಗುತ್ತಿದೆ. ಮುಡಾ ಪ್ರಕರಣದಲ್ಲಿ ನಿವೇಶನ 50:50 ಅನುಪಾತ ಹಾಗೂ ಇತರ ಸಂದರ್ಭದಲ್ಲಿ ತನಿಖೆ ನಡೆಸಲು ನಟೇಶ್ ಪ್ರಕರಣದಲ್ಲಿ ನೀಡಲಾಗಿರುವ ತಡೆಯಾಜ್ಞೆ ಅಡ್ಡ ಬರುತ್ತಿದೆ ಎಂದು ಜಾರಿ ನಿರ್ದೇಶನಾಲಯ ನ್ಯಾಯಾಲಯಕ್ಕೆ ಮನವಿ ಮಾಡಿಕೊಂಡಿತ್ತು.

ಇದಕ್ಕೆ ಸ್ಪಷ್ಟನೆ ನೀಡಿದ ನ್ಯಾಯಾಲಯ ನಟೇಶ್ ಪ್ರಕರಣದಲ್ಲಿ ಮಾತ್ರ ತಡೆಯಾಜ್ಞೆಯಿದೆ. ಉಳಿದ ಯಾವುದೇ ವಿಚಾರಣೆಗೆ ತಡೆಯಾಜ್ಞೆ ಇಲ್ಲ. ಪ್ರತಿ ತೀರ್ಪು ಕೂಡ ವಾದಿ ಮತ್ತು ಪ್ರತಿವಾದಿಗಳ ಸೀಮಿತ ವ್ಯಾಪ್ತಿಗೆ ಒಳಗೊಂಡಿರುತ್ತದೆ ಎಂದು ಸ್ಪಷ್ಟನೆ ನೀಡಿದೆ. ಇದನ್ನು ರಾಜಕೀಯವಾಗಿ ಬೇರೆ ರೀತಿ ಅರ್ಥೈಸಿ ಸಿದ್ದರಾಮಯ್ಯನವರ ವಿರುದ್ಧ ತನಿಖೆಗೆ ನ್ಯಾಯಾಲಯ ಒಪ್ಪಿದೆ ಎಂದು ಬಿಂಬಿಸಲಾಗುತ್ತಿದೆ ಎಂದು ಆಕ್ಷೇಪಿಸಿದರು.

ಮುಡಾ ಪ್ರಕರಣದಲ್ಲಿ ಲೋಕಾಯುಕ್ತ ತನಿಖೆಯನ್ನು ಪ್ರಶ್ನಿಸಿ ಜಾರಿ ನಿರ್ದೇಶನಾಲಯ ಮೇಲನವಿ ಸಲ್ಲಿಸಲು ಅಧಿಕಾರ ಇದೆಯೇ, ಇಲ್ಲವೇ ಎಂಬ ಪ್ರಶ್ನೆ ಉದ್ಭವಿಸಿದೆ ಎಂದು ಹೇಳಿದರು.


## ಸನಾತನ ಹಿಂದೂ ಧರ್ಮದ ಪ್ರಗತಿಗೆ ಕೈಜೋಡಿಸಲು ಕರೆ

• ಉದಯವಾಹಿನಿ, ಆನೇಕಲ್

ಸನಾತನ ಹಿಂದೂ ಧರ್ಮದ ಪ್ರಗತಿಗಾಗಿ ಪ್ರತಿಯೊಬ್ಬರು ಕಂಕಣ ತೊಟ್ಟು ನಿಲ್ಲುವ ಅವಶ್ಯಕತೆ ಇದೆ ಎಂದು ನೆರಿಗಾ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ ಶ್ರೀಮತಿ ಶೈಲಜಾ ಯೋಗೇಶ್ ರೆಡ್ಡಿ ರವರು ತಿಳಿಸಿದರು.

ಅವರು ನೆರಿಗಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಕ್ಕುಂದಿ ದೊಮ್ಮಸಂದ್ರ ಗ್ರಾಮದಲ್ಲಿ ಏಪ್ರಿಲ್ 12 ರಂದು ಶ್ರೀ ಪದ್ಮಾವತಿ ಅಲುಮೇಲ್ ಮಂಗ ಸಮೇತ ಶ್ರೀ ವೆಂಟೇಶ್ವರ ಸ್ವಾಮಿಯ ಪ್ರಾಣ ಪ್ರತಿಷ್ಠಾಪನೆ ಮತ್ತು ಲೋಕ ಕಲ್ಯಾಣಕ್ಕಾಗಿ ಹಮ್ಮಿಕೊಂಡಿರುವ ಅಷ್ಟಾಕ್ಷರಿ ಹೋಮ. ಅನಂತ ವಿಶ್ವ ಕಲ್ಯಾಣ ಮಹಾ ಯಜ್ಞ ಕಾರ್ಯಕ್ರಮದಲ್ಲಿ ಬಾಗವಹಿಸಿ ಮಾತನಾಡಿದರು. ಸನಾತನ ಧರ್ಮಕ್ಕೆ ಸಾವಿರಾರು ವರ್ಷಗಳ ಇತಿಹಾಸ ಹೊಂದಿದೆ ಜೊತೆಗೆ ಜಗತ್ತಿಗೆ ಮಾರ್ಗದರ್ಶನ ಹಾಗೂ ಬದುಕುವ ರೀತಿಯನ್ನು ಕಲಿಸಿಕೊಟ್ಟಿದ್ದು ಸನಾತನ ಧರ್ಮವಾಗಿದೆ ಎಂದರು. ಅನೇಕ ವರ್ಷಗಳಿಂದ ಸನಾತನ ಹಿಂದೂ ಧರ್ಮ ದಬ್ಬಾಳಿಕೆ ಸಹಿಸಿಕೊಂಡು ಪುಟಿದು ಪುಟಿದು ನಿಲ್ಲುತ್ತಿದೆ ಎಂದರು.

ಇನ್ನು ಲೋಕ ಕಲ್ಯಾಣಕ್ಕಾಗಿ ಋಷಿ ಮುನಿಗಳ ಕಾಲದಲ್ಲಿ ಯಜ್ಞ ಯಾಗಾದಿಗಳು ನಡೆಯುತ್ತಿದ್ದ ರೀತಿಯಲ್ಲಿಯೇ


ಉದಯವಾಹಿನಿ ಚಿತ್ರ

ನಕ್ಕುಂದಿ ದೊಮ್ಮಸಂದ್ರ ಗ್ರಾಮದಲ್ಲಿ ಏಪ್ರಿಲ್ 1ನೇ ತಾರೀಖಿನಿಂದ ಏಪ್ರಿಲ್ 13 ನೇ ತಾರೀಖಿನವರೆಗೆ ಸುಮಾರು 10 ಏಕರೆ ಜಾಗದಲ್ಲಿ 16 ಯಾಗ ಕುಟೀರಗಳಲ್ಲಿ 108 ಹೋಮ ಕುಂಢಗಳಲ್ಲಿ ಏಕಕಾಲಕ್ಕೆ ಅಷ್ಟಾಕ್ಷರಿ ಹೋಮ. ಅನಂತ ವಿಶ್ವ ಕಲ್ಯಾಣ ಮಹಾ ಯಜ್ಞ ಕಾರ್ಯಕ್ರಮ. ವಿಷ್ಣು ಸಹಸ್ರನಾಮ ಪಾರಾಯಣ. ಸಾಂಸ್ಕೃತಿಕ ಕಾರ್ಯಕ್ರಮಗಳು. ಅನ್ನದಾಸೋಹ ಸೇರಿದಂತೆ ವಿಶೇಷ ಪೂಜಾ ಕಾರ್ಯಕ್ರಮಗಳು ಶಾಸ್ತ್ರೋಸ್ತವಾಗಿ ನಡೆಯಲಿದ್ದು ಸಕಾಲಕ್ಕೆ ತಾಲ್ಲೂಕಿನ ಜನತೆ ಮತ್ತು ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬಾಗವಹಿಸಿ ಸ್ವಾಮಿಯ ಕೃಪೆಗೆ ಪಾತ್ರ ರಾಗುವಂತೆ ಶ್ರೀನಾಥ್ ಸ್ವಾಮೀಜಿಗಳು ಮತ್ತು ರಾಮ್ ಮೂರ್ತಿ ಸ್ವಾಮಿಗಳು ಮನವಿ ಮಾಡಿದರು.

## ಶಾಲಾ ಮಕ್ಕಳಿಂದ ಶೌಚಾಲಯ ಸ್ವಚ್ಛತೆ; ಇಬ್ಬರು ಶಿಕ್ಷಕರು ಅಮಾನತು

• ಉದಯವಾಹಿನಿ, ಬೆಂಗಳೂರು

ಶಾಲಾ ಮಕ್ಕಳಿಂದ ಶೌಚಾಲಯ ಸ್ವಚ್ಛಗೊಳಿಸಲು ಆರೋಪದ ಮೇಲೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಇಬ್ಬರು ಶಿಕ್ಷಕರನ್ನು ಅಮಾನತುಗೊಳಿಸಲಾಗಿದೆ. ಬೇಗೂರು ಪೊಲೀಸ್ ಠಾಣೆ ವ್ಯಾಪ್ತಿಯ ಶಾಲೆಯಲ್ಲಿ ಜನವರಿಯಲ್ಲಿ ಘಟನೆ ನಡೆದಿತ್ತು. ವಿದ್ಯಾರ್ಥಿಗಳು ಶಾಲೆಯ ಶೌಚಾಲಯ ಸ್ವಚ್ಛಗೊಳಿಸುತ್ತಿರುವ ವಿಡಿಯೋ ವೈರಲ್ ಆಗಿತ್ತು. ಸಾಮಾಜಿಕ ಕಾರ್ಯಕರ್ತ ನಾಗೇಶ್ ಅವರು ನೀಡಿದ ದೂರಿನ ಆಧಾರದ ಮೇಲೆ, ಮಾರ್ಚ್ 29 ರಂದು ಶಾಲಾ ಮುಖ್ಯೋಪಾಧ್ಯಾಯಿನಿ ಸಾಕಮ್ಮ ಮತ್ತು ದೈಹಿಕ ಶಿಕ್ಷಣ ಶಿಕ್ಷಕಿ ಸುಮಿತ್ರಮ್ಮ ವಿರುದ್ಧ ಬಾಲ ನ್ಯಾಯ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಾದೇಶಿಕ ಸುದ್ದಿ ವಾಹಿನಿಯಲ್ಲಿ ಸುದ್ದಿ ಪ್ರಸಾರವಾಗಿತ್ತು. ಬಳಿಕ ಘಟನೆಯ ಬಗ್ಗೆ ನಾಗೇಶ್ ಅವರು ಪೊಲೀಸರಿಗೆ ದೂರು ನೀಡಿದ್ದರು. ಫೆಬ್ರವರಿ ಅಂತ್ಯದಲ್ಲಿ ಇಬ್ಬರು ಶಿಕ್ಷಕರನ್ನು ಅಮಾನತುಗೊಳಿಸಲಾಗಿದೆ ಮತ್ತು ಶಿಕ್ಷಣ ಇಲಾಖೆ ಆಂತರಿಕ ವಿಚಾರಣೆ ನಡೆಸುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಪ್ರತಿ ಲೀಟರ್‌ಗೆ 1 ರಿಂದ 3 ಪೈಸೆ ಹೆಚ್ಚಳ ಸಾಧ್ಯತೆ

• ಉದಯವಾಹಿನಿ, ಬೆಂಗಳೂರು

ಮೆಟ್ರೋ, ಬಸ್, ವಿದ್ಯುತ್, ಹಾಲು, ಡೀಸೆಲ್ ದರ ಹೆಚ್ಚಳದ ನಂತರ ಇದೀಗ ಬೆಂಗಳೂರಿನಲ್ಲಿ ಕಾವೇರಿ ನೀರು ಪೂರೈಕೆ ದರ ಪ್ರತಿ ಲೀಟರ್ ನೀರಿಗೆ 1ರಿಂದ 3 ಪೈಸೆಯಷ್ಟು ಬೆಲೆ ಹೆಚ್ಚಳವಾಗಲಿದೆ. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ನೀರಿನ ದರವನ್ನು ಹೆಚ್ಚಿಸುವುದು ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ಮಂಡಳಿಯ ಅಧಿಕಾರಿಗಳು ಸಿದ್ಧತೆಗಳನ್ನು ನಡೆಸುತ್ತಿದ್ದು, ದರ ಹೆಚ್ಚಳ ಶೀಘ್ರದಲ್ಲೇ ಜಾರಿಗೆ ಬರಲಿದೆ ಎಂದು ಡಿಸಿಎಂ ಮತ್ತು ಬೆಂಗಳೂರು ಅಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್ ಅವರು ಹೇಳಿದ್ದಾರೆ.

ಬಿಡಬ್ಲ್ಯೂಎಸ್‌ಎಸ್‌ಬಿ ನೀರಿನ ದರವನ್ನು ಲೀಟರ್‌ಗೆ ಒಂದು ಪೈಸೆ ಹೆಚ್ಚಿಸುವುದು ಅನಿವಾರ್ಯವಾಗಿದ್ದು, ಜನರ ಮೇಲೆ ಹೊರೆಯಾಗದಂತೆ ಬಿಡಬ್ಲ್ಯೂಎಸ್‌ಎಸ್‌ಬಿ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದ್ದಾರೆ. ಬಿಡಬ್ಲ್ಯೂಎಸ್‌ಎಸ್‌ಬಿ ತೀವ್ರ ಒತ್ತಡದಲ್ಲಿದೆ. ಮೂಲಸೌಕರ್ಯ ಯೋಜನೆಗಳನ್ನು ಕೈಗೆತ್ತಿಕೊಳ್ಳಲು


ಉದಯವಾಹಿನಿ ಚಿತ್ರ

ಈ ಹೆಚ್ಚಳ ಅತ್ಯಗತ್ಯವಾಗಿದೆ.

ಜಲಮಂಡಳಿಗೆ ವಾರ್ಷಿಕ 1 ಸಾವಿರ ಕೋಟಿ ರೂ. ನಷ್ಟವುಂಟಾಗುತ್ತಿದೆ. ಹಾಗೆಯೇ, ಮುಂದಿನ ಹಂತದ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕಾದರೆ ದರ ಏರಿಕೆ ಅನಿವಾರ್ಯವಾಗಿದೆ. ಅಲ್ಲದೆ, ಜನರೂ ನೀರಿನ ಪ್ರಾಮುಖ್ಯತೆ ಅರಿಯಬೇಕು. ಕಳೆದ 13 ವರ್ಷಗಳಲ್ಲಿ ಯಾವುದೇ ಹೆಚ್ಚಳವಾಗದ ಕಾರಣ ಸುಂಕವನ್ನು ಲೀಟರ್‌ಗೆ 7 ಪೈಸೆ ಹೆಚ್ಚಿಸಲು ಮಂಡಳಿ ಬಯಸಿತ್ತು. ಆದರೆ, ಕೇವಲ ಒಂದು ಪೈಸೆ ದರ ಹೆಚ್ಚಿಸುವಂತೆ ಅಧಿಕಾರಿಗಳ ಮನವೊಲಿಸಲಾಗಿದೆ ಎಂದರು.

## ಮನೆಗೆ ನುಗ್ಗಿದ ಚಿರತೆ, ಡೋರ್ ಲಾಕ್ ಮಾಡಿ ಆಚೆ ಬಂದ ದಂಪತಿ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನ ಹೊರವಲಯದ ಜಿಗಣಿಯಲ್ಲಿರುವ ಮನೆಯೊಂದಕ್ಕೆ ಗುರುವಾರ ಬೆಳಗ್ಗೆ ಚಿರತೆ ನುಗ್ಗಿದ್ದು, ಬೆಚ್ಚಿಬಿದ್ದ ದಂಪತಿ, ಕೂಡಲೇ ಮನೆಯಿಂದ ಆಚೆ ಬಂದು ಬಾಗಿಲು ಲಾಕ್ ಮಾಡಿದ್ದಾರೆ.

ಬೆಳಗ್ಗೆ ಜಿಗಣಿಯ ಪಿಲ್ಲಾ ರೆಡ್ಡಿ ಲೇಔಟ್‌ನಲ್ಲಿ ಈ ಘಟನೆ ನಡೆದಿದ್ದು, ವೆಂಕಟೇಶ್, ಅವರ ಪತ್ನಿ ವೆಂಕಟಲಕ್ಷ್ಮಿ ಮತ್ತು ಅವರ ಮಗ ನಿಖಿಲ್ ವಾಸಿಸುತ್ತಿದ್ದ ಬಾಡಿಗೆ ಮನೆಗೆ ಚಿರತೆ ನುಗ್ಗಿದೆ. ಚಿರತೆ ಬಂದಿದ್ದನ್ನ ಗಮನಿಸಿದ ವೆಂಕಟೇಶ್ ಅವರು ಒಂದು ಕ್ಷಣ ಭಯಬೀತರಾಗಿದ್ದರೂ ವಿಚಲಿತರಾಗದೆ ಸಮಯಪ್ರಜ್ಞೆ ತೋರಿ, ಮನೆಯಲ್ಲಿದ್ದ ಪತ್ನಿಯನ್ನು ಹೊರಗೆ ಕರೆತಂದು ಮನೆ ಬಾಗಿಲನ್ನ ಲಾಕ್ ಮಾಡಿದ್ದಾರೆ. ಇದರಿಂದ ಚಿರತೆ ಮನೆಯೊಳಗೆ ಲಾಕ್ ಆಗಿದ್ದು, ಬಳಿಕ ಪೊಲೀಸರು ಹಾಗೂ ಅರಣ್ಯ ಇಲಾಖೆಹಗೆ ಮಾಹಿತಿ ನೀಡಿದ್ದಾರೆ. ತಕ್ಷಣ ಸ್ಥಳಕ್ಕೆ ಆಗಮಿಸಿದ ಪೊಲೀಸ್ ಸಿಬ್ಬಂದಿ ಹಾಗೂ ಅರಣ್ಯ ಇಲಾಖೆಯವರು ಮನೆಯಲ್ಲಿ ಲಾಕ್ ಆಗಿದ್ದ ಚಿರತೆಯನ್ನು ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ಅರಣ್ಯ ಪ್ರದೇಶವಾದ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಬಳಿ ಇರುವ ಜಿಗಣಿಯಲ್ಲಿ ಚಿರತೆಗಳು ಮತ್ತು ಆನೆಗಳು ಸೇರಿದಂತೆ ಆಗಾಗ್ಗೆ ವನ್ಯಜೀವಿಗಳು ವಸತಿ ಪ್ರದೇಶದಲ್ಲಿ ಕಾಣಿಸಿಕೊಳ್ಳುತ್ತವೆ ಎಂದು ಅರಣ್ಯ ಅಧಿಕಾರಿ ತಿಳಿಸಿದ್ದಾರೆ.

## ಬಿಹಾರ ಮೂಲದ ಯುವತಿಯನ್ನು ಅಪಹರಿಸಿ ಅತ್ಯಾಚಾರ

• ಉದಯವಾಹಿನಿ, ಬೆಂಗಳೂರು

ಬೆಳ್ಳಂಬೆಳಗ್ಗೆ ರಾಜಧಾನಿ ಜನರನ್ನು ಬೆಚ್ಚಿಬೀಳಿಸುವ ಸುದ್ದಿಯೊಂದು ಬಂದಿದೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಬಗ್ಗೆ ವಿಪಕ್ಷಗಳು ಆರೋಪಿಸುತ್ತಿರುವ ಹೊತ್ತಲ್ಲೇ ಗ್ಯಾಂಗ್ ರೇಪ್ ನಡೆದಿದೆ.



ನಿನ್ನೆ ಮಧ್ಯರಾತ್ರಿ ಕೆ ಆರ್ ಪುರಂ ರೈಲ್ವೇ ಸ್ಟೇಷನ್‌ನಿಂದ ಅಣ್ಣನೊಂದಿಗೆ ಮಹದೇವಪುರದ ಕಡೆಗೆ ಬೈಕ್‌ನಲ್ಲಿ ತೆರಳುತ್ತಿದ್ದ ಬಿಹಾರ ಮೂಲದ ಯುವತಿಯನ್ನು ಅಪಹರಿಸಿ ಕಾಮುಕರು ಅತ್ಯಾಚಾರ ಎಸಗಿದ್ದಾರೆ. ಬೈಕ್ ಅಡ್ಡಗಟ್ಟಿದ ದುಷ್ಕರ್ಮಿಗಳು ಅಣ್ಣನ ಮೇಲೆ ಹಲ್ಲೆ ಮಾಡಿ, ಯುವತಿಯನ್ನು ಎಳೆದೊಯ್ದು ಮೃಗೀಯ ವರ್ತನೆ ತೋರಿದ್ದಾರೆ. ಯುವತಿ ಬೊಬ್ಬೆ ಹಾಕಿದಾಗ ಸ್ಥಳೀಯರು ಬಂದಿದ್ದು, ಒಬ್ಬ ಆರೋಪಿಯನ್ನು ಪೊಲೀಸರಿಗೆ ಒಪ್ಪಿಸಿದ್ದಾರೆ. ಘಟನೆ ಸಂಬಂಧ ಮಹದೇವಪುರ ಠಾಣೆ ಪೊಲೀಸರು ಈಗಾಗಲೇ ಇಬ್ಬರನ್ನು ಬಂಧಿಸಿದ್ದಾರೆ.

ಕೆ ಆರ್ ಪುರಂ ಮೆಟ್ರೋ ನಿಲ್ದಾಣದ ಬಳಿ ಘಟನೆ ಬಿಹಾರ ಮೂಲದ ಯುವತಿ ಕೇರಳದ ಎರ್ನಾಕುಲಂನಿಂದ ಬೆಂಗಳೂರಿನ ಕೆ.ಆರ್ ಪುರಂ ರೈಲ್ವೇ ನಿಲ್ದಾಣಕ್ಕೆ ಬಂದಿದ್ದಳು. ತನ್ನ ದೊಡ್ಡಮ್ಮನ ಮಗನಿಗೆ ಕರೆ ಮಾಡಿ, ಬೆಂಗಳೂರಿಗೆ ಬರುವ ಬಗ್ಗೆ ತಿಳಿಸಿದ್ದಳು. ಅಣ್ಣನ ಸೂಚನೆ ಮೇರೆಗೆ ಕೆ ಆರ್ ಪುರಂ ನಲ್ಲಿ ಇಳಿದಿದ್ದ ಯುವತಿ, ಬಳಿಕ ಅಣ್ಣನ ಜೊತೆ ಊಟಕ್ಕಾಗಿ ಮಹದೇವಪುರ ಕಡೆಗೆ ಹೋಗುತ್ತಿದ್ದಳು. ಈ ವೇಳೆ ಇಬ್ಬರು ಅಪರಿಚಿತರು ಬೈಕ್ ಅಡ್ಡಗಟ್ಟಿ ಅಣ್ಣನ ಮೇಲೆ ಹಲ್ಲೆ ಮಾಡಿ, ಯುವತಿಯನ್ನು ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಅತ್ಯಾಚಾರ ಎಸಗಿದ್ದಾರೆ.

### ಮೆಟ್ರೋದ ಭದ್ರತಾ ದಳವು ನಡೆಸಿದ ವಾಡಿಕೆಯ ಭದ್ರತಾ ತಪಾಸಣೆ

## ಬೆಂಗಳೂರು ಮೆಟ್ರೋದಲ್ಲಿ 27 ಸಾವಿರ ಜನರಿಗೆ ದಂಡ

• ಉದಯವಾಹಿನಿ, ಬೆಂಗಳೂರು

ನಮ್ಮ ಮೆಟ್ರೋ ಪ್ರಯಾಣಿಕರೇ ಬಿ ಅಲರ್ಟ್ ನಿಮ್ಮ ಎಲ್ಲಾ ನಡವಳಿಕೆಯೂ ಸಿಸಿ ಟಿವಿ ಕ್ಯಾಮರಾದಲ್ಲಿ ದಾಖಲಾಗ್ತವೆ. ಅಷ್ಟೇ ಯಾಕೆ ಸಹಪ್ರಯಾಣಿಕರೂ ನೀಡಿದ ದೂರನ್ನು ಗಂಭೀರವಾಗಿ ಬಿಎಂಆರ್‌ಸಿಎಲ್ ಪರಿಗಣಿಸಲಿದೆ. ಇನ್ನು ಆಗಾಗ ತಪಾಸಣೆಗೆ ಬರುವ ಭದ್ರತಾ ದಳ ಕೂಡಾ ಪ್ರಯಾಣಿಕರ ತಪ್ಪಿಗೆ ದಂಡ ವಿಧಿಸಲಿದೆ. ಹೀಗಾಗಿಯೇ ಕಳೆದ 6 ತಿಂಗಳಲ್ಲಿ ಮೆಟ್ರೋ ರೈಲಿನಲ್ಲಿ ನಿಯಮ ಉಲ್ಲಂಘಿಸಿದ ಸುಮಾರು 27,000 ಪ್ರಕರಣಗಳಿಗೆ ನಮ್ಮ ಮೆಟ್ರೋ ದಂಡ ವಿಧಿಸಿದೆ.

- **ಕಳೆದ 6 ತಿಂಗಳಲ್ಲಿ ಮೆಟ್ರೋ ರೈಲಿನಲ್ಲಿ ನಿಯಮ ಉಲ್ಲಂಘಿಸಿದ ಸುಮಾರು 27,000 ಪ್ರಕರಣ**
- **ಮೆಟ್ರೋದ ಭದ್ರತಾ ದಳವು ನಡೆಸಿದ ವಾಡಿಕೆಯ ಭದ್ರತಾ ತಪಾಸಣೆ**
- **ನಿಯಮಗಳ ಉಲ್ಲಂಘನೆ ಮಾಡಿದ ಸುಮಾರು 27,000 ಕ್ಕೂ ಹೆಚ್ಚು ಘಟನೆಗಳು ಬಹಿರಂಗ**

ಸೆಪ್ಟೆಂಬರ್ 2024 ರಿಂದ ಮಾರ್ಚ್ 2025ರ ನಡುವೆ ಕಳೆದ ಆರು ತಿಂಗಳ ಅವಧಿಯಲ್ಲಿ ಸಂಚಾರ ದಟ್ಟಣೆ ಇಲ್ಲದ ಸಮಯದಲ್ಲಿ ಮೆಟ್ರೋದ ಭದ್ರತಾ ದಳವು ನಡೆಸಿದ ವಾಡಿಕೆಯ ಭದ್ರತಾ ತಪಾಸಣೆಯ ಪ್ರಕಾರ ಸಹ ಪ್ರಯಾಣಿಕರಿಗೆ ಅನಾನುಕೂಲತೆ ಉಂಟುಮಾಡುವ ಹಾಗೂ ಮೆಟ್ರೋ ನಿಯಮಗಳ ಉಲ್ಲಂಘನೆ ಮಾಡಿದ ಸುಮಾರು 27,000 ಕ್ಕೂ ಹೆಚ್ಚು ಘಟನೆಗಳು ಬಹಿರಂಗವಾಗಿದೆ. ಸದ್ಯ ಮೆಟ್ರೋ ನಿಗಮ ಈ ಕ್ರಮಗಳಿಗೆ ಯಾವುದೇ ದಂಡ ವಿಧಿಸಿಲ್ಲ, ಅಂತಹ ನಡವಳಿಕೆಗಳನ್ನು ಮುಂದೆ ಮಾಡದಂತೆ ಎಚ್ಚರಿಕೆ ಕೊಡಲಾಗಿದೆ. ಸುಗಮವಾದ ಪ್ರಯಾಣಕ್ಕಾಗಿ ನಮ್ಮ ಮೆಟ್ರೋ ಮಾರ್ಗಸೂಚಿಗಳನ್ನು ಪಾಲಿಸಲು ಮತ್ತು ದಂಡಗಳು ವಿಧಿಸುವ ಅವಕಾಶಗಳನ್ನು ತಪ್ಪಿಸಲು ನಿಯಮ ಪಾಲನೆ ಕಡ್ಡಾಯ ಎಂದು ಮೆಟ್ರೋ ತಿಳಿಸಿದೆ.



### ಮಳೆಗಾಲದಲ್ಲಿ ಮೆಟ್ರೋ ನಿಲ್ದಾಣಗಳ ಸಂಚಾರ ಹುಷಾರು

**ಕೋಟ್ಯಾಂತರ ವೆಚ್ಚ ಮಾಡಿರುವ ಮೆಟ್ರೋ ನಿಲ್ದಾಣಗಳಲ್ಲಿ ಹಲವು ಬಾರಿ ಮಳೆಯಿಂದಾಗಿ ನೀರು ಸೋರಿಕೆ ಆಗಿ ಪ್ರಯಾಣಿಕರು ಜಾರಿ ಬಿದ್ದಿರುವ ಘಟನೆ ನಡೆದಿದೆ. ಈ ಬಾರಿ ವಾಟರ್ ಪ್ರೂಫಿಂಗ್ ಕಾಮಗಾರಿಗಾಗಿ ಮೆಟ್ರೋ ಟೆಂಡರ್ ಕರೆದಿದ್ದು, ವಿಳಂಬವಾಗಿ ಕಾಮಗಾರಿ ಆರಂಭ ಆಗಲಿದೆ. ಹೀಗಾಗಿ ಈ ಬಾರಿಯ ಮಳೆಗಾಲದಲ್ಲೂ ಸಾರ್ವಜನಿಕರಿಗೆ ಸಮಸ್ಯೆ ತಪ್ಪಿದ್ದಲ್ಲ. ಪ್ರಮುಖವಾಗಿ ಸುರಂಗ ಮಾರ್ಗದಲ್ಲಿರುವ ಮೆಟ್ರೋ ನಿಲ್ದಾಣಗಳಲ್ಲಿ ಹೆಚ್ಚು ಸೋರಿಕೆ ಇವೆ.**

### ಏನೆಲ್ಲಾ ಉಲ್ಲಂಘಟನೆಗಳು

**ಪ್ರಯಾಣಿಕರಿಂದ ಜೋರಾಗಿ ಸಂಗೀತವನ್ನು ಮೊಬೈಲ್‌ನಲ್ಲಿ ಹಾಕಿ ಕೊಂಡು ಕೇಳುತ್ತಿರುವುದು ಒಟ್ಟು 11,922 ಪ್ರಕರಣಗಳು ದಾಖಲಾಗಿವೆ. ವಿಕಲಾಂಗ ವ್ಯಕ್ತಿಗಳು , ಹಿರಿಯ ನಾಗರಿಕರು, ಗರ್ಭಿಣಿಯರು ಮತ್ತು ಶಿಶುಗಳೊಂದಿಗೆ ಪ್ರಯಾಣಿಸುವವರಿಗೆ ಆದ್ಯತೆಯ ಆಸನಗಳನ್ನು ನೀಡದಿರುವುದು 14,162 ಪ್ರಕರಣಗಳು ಹಾಗೂ ರೈಲಿನಲ್ಲಿ ಪ್ರಯಾಣ ಮಾಡುವಾಗ ಆಹಾರ ಪದಾರ್ಥಗಳ ಸೇವನೆಯ 554 ಪ್ರಕರಣಗಳು ಕಂಡುಬಂದಿವೆ. ಅಲ್ಲದೆ, 474 ಘಟನೆಗಳು ದೊಡ್ಡ ಗಾತ್ರದ ಲಗೇಜ್‌ಗಳನ್ನು ಸಾಗಿಸುವ ಪ್ರಯಾಣಿಕರನ್ನು ಒಳಗೊಂಡಿವೆ.**

ಅಂತರಾಳದಿಂದ.. EDITORIAL

# ದೊಡ್ಡ ಯೋಜನೆಗಳ ಭಾರದಲ್ಲಿ ಗೌಣವಾದ ಜನರ ನಿರೀಕ್ಷೆಗಳು

ಗುಂಡಿಮುಕ್ತ ರಸ್ತೆ, ತ್ಯಾಜ್ಯಮುಕ್ತ ಬಡಾವಣೆ, ದಟ್ಟಣೆಮುಕ್ತ ಸಂಚಾರ ವ್ಯವಸ್ಥೆಗೆ ಭರವಸೆದಾಯಕ ಯೋಜನೆಗಳು ಸಿಗಬಹುದೆಂಬ ಜನರ ನಿರೀಕ್ಷೆ ಹುಸಿಯಾಗಿದೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಇತಿಹಾಸದಲ್ಲೇ ಅತ್ಯಂತ ಬೃಹತ್ ಗಾತ್ರದ್ದು (19,930 ಕೋಟಿ) ಎಂಬ ಹೆಗ್ಗಳಿಕೆಗೆ ಪಾತ್ರವಾದ 2025–26ನೇ ಸಾಲಿನ ಬಜೆಟ್ ಮಂಡನೆಯಾಗಿದೆ. ಕಳೆದ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಬಜೆಟ್‌ನ ಗಾತ್ರದಲ್ಲಿ ಈ ಸಲ ಭಾರಿ ಹೆಚ್ಚಳ ಆಗಿದೆ. ಬಿಬಿಎಂಪಿಗೆ ಚುನಾಯಿತ ಸದಸ್ಯರಿಲ್ಲದೆ, ಅಧಿಕಾರಿಗಳೇ ಸತತ ಐದನೆಯ ವರ್ಷವೂ ಮಂಡಿಸಿದ ಬಜೆಟ್ ಇದಾಗಿದೆ. ಇದು. ಬೆಂಗಳೂರಿನ ನಾಗರಿಕರ ಸಾಂವಿಧಾನಿಕ ಹಕ್ಕಿನ ಸ್ಪಷ್ಟ ಉಲ್ಲಂಘನೆ ಎಂಬ ವಿವಿಧ ಸಂಘಟನೆಗಳ ಕೂಗು ಬೃಹತ್ ಯೋಜನೆಗಳ ಅಬ್ಬರದಲ್ಲಿ ಕರಗಿಹೋಗಿದೆ. 'ಬ್ರ್ಯಾಂಡ್ ಬೆಂಗಳೂರು' ಪರಿಕಲ್ಪನೆಯ ಛಾಯೆ ಈ ಬಜೆಟ್‌ನಲ್ಲೂ ಮುಂದುವರಿದಿದ್ದು, ಅದರಡಿಯ ಎಂಟು ವಿಭಾಗಗಳ ಯೋಜನೆಗಳಿಗೆ ಹಣ ಎತ್ತಿಡಲು ಭಗೀರಥ ಯತ್ನ ನಡೆದಿದೆ. ಬಜೆಟ್ ಸಿದ್ಧಪಡಿಸಿದವರು. ಅದರ 'ಭಾರಿ ಗಾತ್ರ'ದ ಕುರಿತು ಹೆಮ್ಮೆಯಿಂದ ಹೇಳಿಕೊಂಡರೂ ವರ್ಷಗಳಿಂದ ಯಾವ ಸಂಪನ್ಮೂಲಗಳಿಂದ ವರಮಾನ ಸಂಗ್ರಹ ಸಾಧ್ಯವಾಗಿಲ್ಲವೋ ಅದೇ ಮೂಲಗಳಿಂದ ದುಪ್ಪಟ್ಟು ವರಮಾನ ಗಳಿಸುವ ಗುರಿ ಹಾಕಿಕೊಂಡಿದ್ದಾರೆ.




**ರಾಜಧಾನಿ ಅಭಿವೃದ್ಧಿಯ ದಿಕ್ಕನ್ನೇ ಬದಲಿಸುವ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಮುಂದಿನ ಐದು ವರ್ಷಗಳಲ್ಲಿ ಅನುಷ್ಠಾನಗೊಳಿಸುವ ಕನಸು ಬಿತ್ತಿರುವ ಬಜೆಟ್, ಅದಕ್ಕಾಗಿ ವಿಶೇಷ ಉದ್ದೇಶಿತ ಘಟಕ ಸೃಜಿಸಿ, 73.600 ಕೋಟಿ ವಿನಿಯೋಗ ಮಾಡುವುದಾಗಿ ಪ್ರಸ್ತಾಪಿಸಿದೆ.**

ಇದು ಕಾರ್ಯಸಾಧ್ಯವೇ ಎನ್ನುವ ಪ್ರಶ್ನೆ ಬಲವಾಗಿ ಕಾಡುತ್ತಿದೆ. ಉದಾಹರಣೆಗೆ, ಜಾಹೀರಾತು ಕರ. ಇ-ಖಾತೆ ವರ್ಗಾವಣೆ, ಸ್ವತ್ತುಗಳ ಬಾಡಿಗೆ, ಚಿತಾಗಾರದ ಶುಲ್ಕ, ಒಎಫ್‌ಸಿ ತೆರಿಗೆಗಳ ಸಂಗ್ರಹವನ್ನು ಕಳೆದ ವರ್ಷಕ್ಕೆ ಹೋಲಿಸಿದರೆ, ಬಹುತೇಕ ದ್ವಿಗುಣಗೊಳಿಸಿಕೊಳ್ಳಲು ಅಂದಾಜಿಸಲಾಗಿದೆ. ಇವುಗಳ ವರಮಾನ ಹಿಂದಿನ ವರ್ಷಗಳಲ್ಲಿ ಬಜೆಟ್ ನಿರೀಕ್ಷೆಯ ಅರ್ಧದಷ್ಟು ಮಾತ್ರ ಸಂಗ್ರಹವಾಗಿತ್ತು. ಸ್ವಂತ ಸಂಪನ್ಮೂಲಕ್ಕಿಂತಲೂ ಈ ಬಜೆಟ್ ಹೊರಗಿನ ಅನುದಾನವನ್ನೇ ಹೆಚ್ಚಾಗಿ ನೆಚ್ಚಿಕೊಂಡಿದ್ದು, ಪರಾವಲಂಬಿ ಯೋಜನೆಗಳೇ ಬಹಳಷ್ಟಿವೆ. ಬಜೆಟ್‌ನ ಒಟ್ಟು ವರಮಾನದ ಶೇಕಡ 44ರಷ್ಟು ಮೊತ್ತವನ್ನು ಸರ್ಕಾರದ ಅನುದಾನ, ಖಾತರಿ ಹಾಗೂ ಸಾಲದ ರೂಪದಲ್ಲಿ ನಿರೀಕ್ಷಿಸಿರುವುದು ಅದರ ಪರಾವಲಂಬಿ ಸ್ಥಿತಿಗೆ ದ್ಯೋತಕ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಮಹತ್ವಾಕಾಂಕ್ಷಿ ಯೋಜನೆಗಳಿಗೆ ಬಿಬಿಎಂಪಿ ಮಣೆ ಹಾಕಿರುವುದು ಎದ್ದು ಕಾಣುವ ಅಂಶ. ಸುರಂಗ ರಸ್ತೆ ನಿರ್ಮಾಣ. ಡಬಲ್ ಡೆಕರ್ ಯೋಜನೆ ಅನುಷ್ಠಾನ, ಎಲಿವೇಟೆಡ್ ಕಾರಿಡಾರ್ ಮತ್ತು ಹೊಸ ರಸ್ತೆಗಳ ನಿರ್ಮಾಣ, ವೈಟ್ ಟಾಪಿಂಗ್ ಹಾಗೂ ಸ್ಕೈ ಡೆಕ್ ಯೋಜನೆಯ ಅನುಷ್ಠಾನ ಸೇರಿದಂತೆ ಸಾರ್ವಜನಿಕ ಕಾಮಗಾರಿಗಳಿಗೆ ಬಜೆಟ್‌ನ ಒಟ್ಟಾರೆ ಮೊತ್ತದಲ್ಲಿ ಶೇ 65ರಷ್ಟು ಅನುದಾನವನ್ನು ಮೀಸಲಿಡಲಾಗಿದೆ. ಬಿಬಿಎಂಪಿಯ ಉದ್ದೇಶಿತ ಈ ಹೊಸ ಯೋಜನೆಗಳಿಗೆ ಮೆಟ್ರೊಪಾಲಿಟನ್ ಯೋಜನಾ ಸಮಿತಿಯ (ಎಂಪಿಸಿ) ಅನುಮೋದನೆ ಇಲ್ಲ. ಮಾಸ್ಟರ್ ಪ್ಲಾನ್ ಭಾಗವಾಗಿ ಈ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆ ಎಂದುಕೊಳ್ಳಲು ನಗರಕ್ಕೆ ಸದ್ಯ ಒಂದು ಮಾಸ್ಟರ್ ಪ್ಲಾನ್ ಸಹ ಇಲ್ಲ. ಹೀಗಿರುವಾಗ ಇಂತಹ ದೊಡ್ಡ ಯೋಜನೆಗಳಿಗೆ ಭಾರಿ ಮೊತ್ತವನ್ನು ವಿನಿಯೋಗಿಸುವುದು ಎಷ್ಟು ಸರಿ ಎಂಬುದು ನಗರಯೋಜನೆ ತಜ್ಞರ ಪ್ರಶ್ನೆ. ಆರೋಗ್ಯ, ಶಿಕ್ಷಣ ಮತ್ತು ಕಲ್ಯಾಣ ಕಾರ್ಯಕ್ರಮಗಳಿಗೆ ಶೇ 4ರಷ್ಟು ಮಾತ್ರ ಅನುದಾನ ಒದಗಿಸಲಾಗಿದೆ. ಇದು ಒಳಗೊಳ್ಳುವ ಅಭಿವೃದ್ಧಿ ಅಲ್ಲ ಎನ್ನುವುದು ತಜ್ಞರ ಆಕ್ಷೇಪ. ಬೃಹತ್ ಕಾಮಗಾರಿಗಳಿಗೆ ಆದ್ಯತೆ ನೀಡಿ, ವಾರ್ಡ್ ರಸ್ತೆ, ಚರಂಡಿ ಕಾಮಗಾರಿಗಳನ್ನು ಕಡೆಗಣಿಸಲಾಗಿದೆ. ಒಂದುವೇಳೆ ಚುನಾಯಿತ ಕೌನ್ಸಿಲ್ ಅಸ್ತಿತ್ವದಲ್ಲಿದ್ದಿದ್ದರೆ ಈ ರೀತಿ ತಾರತಮ್ಯಕ್ಕೆ ಅವಕಾಶ ಇರುತ್ತಿರಲಿಲ್ಲ ಎಂಬ ವಾದದಲ್ಲಿ ತಥ್ಯವಿದೆ. ಗುಂಡಿಮುಕ್ತ ರಸ್ತೆ, ಹೂಳುಮುಕ್ತ ಚರಂಡಿ, ತ್ಯಾಜ್ಯಮುಕ್ತ ಬಡಾವಣೆ, ದಟ್ಟಣೆಮುಕ್ತ ಸಂಚಾರ ವ್ಯವಸ್ಥೆಗೆ ಭರವಸೆದಾಯಕ ಯೋಜನೆಗಳು ಸಿಗಬಹುದೆಂಬ ಜನರ ನಿರೀಕ್ಷೆ ಹುಸಿಯಾಗಿದೆ.

ಕಸಸಂಗ್ರಹ ಶುಲ್ಕವನ್ನು ಹೆಚ್ಚುವರಿಯಾಗಿ ನಾಗರಿಕರ ಮೇಲೆ ಹೊರಿಸಿದ ಬಜೆಟ್ ಕೂಡ ಇದಾಗಿದೆ. ಘನತ್ಯಾಜ್ಯ ನಿರ್ವಹಣೆಯು ನಗರವನ್ನು ಎರಡೂವರೆ ದಶಕಗಳಿಂದ ಕಾಡುತ್ತಿರುವ ಬಹುದೊಡ್ಡ ಸಮಸ್ಯೆ. ಈ ಸಮಸ್ಯೆಯ ನಿವಾರಣೆಗೆ ಒಂದು ಸುಸ್ಥಿರ ಹಾಗೂ ವ್ಯವಸ್ಥಿತ ಯೋಜನೆಯನ್ನು ರೂಪಿಸಿ, ಅನುಷ್ಠಾನಕ್ಕೆ ತರುವ ಪ್ರಬಲ ಆಕಾಂಕ್ಷೆ ಬಜೆಟ್‌ನಲ್ಲಿ ಗೋಚರಿಸಿಲ್ಲ. ನಗರದ ನಾಲ್ಕೂ ದಿಕ್ಕುಗಳಲ್ಲಿ ತಲಾ ನೂರು ಎಕರೆ ಜಾಗದಲ್ಲಿ ತ್ಯಾಜ್ಯ ನಿರ್ವಹಣೆ ಘಟಕ ನಿರ್ಮಿಸುವುದಕ್ಕೆ ಸಂಬಂಧಿಸಿದಂತೆ ಈ ಹಿಂದಿನ ಬಜೆಟ್‌ಗಳಲ್ಲಿ ಇದ್ದಂತಹ ಹೇಳಿಕೆಗಳು ಈ ಸಲದ ಬಜೆಟ್‌ನಲ್ಲೂ ಮುಂದುವರಿದಿವೆ. ಕೃತಕ ಬುದ್ಧಿಮತ್ತೆಯನ್ನು ಬಳಸಿಕೊಂಡು 'ಬಿಬಿಎಂಪಿ ಒನ್ ಆ್ಯಪ್' ಅಭಿವೃದ್ಧಿಪಡಿಸಲು ನಿರ್ಧರಿಸಿರುವುದು ಗಮನಸೆಳೆಯುವಂತಹ ಘೋಷಣೆ. ಈ ಆ್ಯಪ್ ಏನಾದರೂ ಸಮರ್ಪಕವಾಗಿ ಅಭಿವೃದ್ಧಿ ಹೊಂದಿ ನಾಗರಿಕರ ಕೈಗೆ ಸಿಕ್ಕರೆ ನಗರದ ಸಮಸ್ಯೆಗಳ ಪರಿಹಾರಕ್ಕೆ ಸುಲಭದ ದಾರಿ ಸಿಕ್ಕಂತಾಗುತ್ತದೆ.

# ರಾಮಾಯಣ



## ಸೀತಾ ರಾಮ ಲಕ್ಷ್ಮರು ದಾನ ಮಾಡಿದ್ದು

• ಹಿಂದಿನ ಸಂಚಿಕೆಯಿಂದ 78 ನೆಯ ಅಧ್ಯಾಯ

ಶ್ರೀರಾಮನು ಆ ಮುನೀಶ್ವರನನ್ನು ಕುರಿತು ''ಸುಯಜ್ಞಮುನೀಶ್ವರರೆ, ನನ್ನ ಸೋದರಮಾವನು ಶತ್ರುಂಜಯವೆಂಬ ಹೆಸರುಳ್ಳ ಉತ್ತಮವಾದ ಮದ್ದಾನೆಯನ್ನು ನನಗೆ ಕೊಟ್ಟನು. ಆ ಆನೆಯನ್ನೂ ಒಂದು ಸಾವಿರ ಸುವರ್ಣನಾಣ್ಯಗಳನ್ನೂ ನಾನು ನಿಮಗೆ ಕೊಡುತ್ತೇನೆ ; ತೆಗೆದುಕೊಳ್ಳಿ'' ಎಂದನು. ಸುಯಜ್ಞ ಮುನೀಶ್ವರನು ರಾಮ ಲಕ್ಷ್ಮಣ ಸೀತಾದೇವಿಯರು ಕೊಟ್ಟ ವಸ್ತುಗಳನ್ನು ತೆಗೆದುಕೊಂಡು ಅವರಿಗೆ ಅನೇಕ ಆಶೀರ್ವಾದಗಳನ್ನು ಮಾಡಿದನು.

ಆಮೇಲೆ ಸಮಸ್ತ ಪ್ರಾಣಿಗಳೊಡನೆಯೂ ಪ್ರಿಯೋಕ್ತಿಗಳನ್ನೇ ನುಡಿಯುತ್ತಿದ್ದ ಶ್ರೀರಾಮನು ಲಕ್ಷ್ಮಣನನ್ನು ನೋಡಿ ಹೀಗೆಂದನು, ಲಕ್ಷ್ಮಣ, ಬ್ರಾಹ್ಮಣೋತ್ತಮರಾದ ಅಗಸ್ತ್ಯನನ್ನೂ ಕೌಶಿಕ ಮುನಿಯನ್ನೂ ಕರೆಕಳುಹಿಸಿ ಅವರಿಗೆ ಅನೇಕಸಹಸ್ರ ಹಸುಗಳನ್ನು ಕೊಟ್ಟು ಸತ್ಕರಿಸು. ಮೇಘಗಳು ಮಳೆಗರೆದು ಪೈರುಗಳನ್ನು ಸಂತೋಷಪಡಿಸುವಂತೆ ಅವರನ್ನು ಸಂತೋಷಪಡಿಸು. ಕೌಸಲ್ಯಾದೇವಿಯ ಸಮೀಪದಲ್ಲಿ ಯಗ್ಗಿಧಾನೋಕ್ತವಾದ ಮಾಂಗಲ್ಯಸೂಕ್ತಗಳಿಂದ ಆಶೀರ್ವಾದಗಳನ್ನು ಮಾಡಿ ಸಂತೋಷಪಡಿಸುವಂಥ ಅಗಸ್ತ ನನ್ನು ಅನೇಕ ರತ್ನಾಭರಣ ಪಟ್ಟೆಯ ಹಚ್ಚಡ ಧನ ಧಾನ್ಯಾದಿಗಳಿಂದ ಸಂತೋಷವಾಗುವ ರೀತಿಯಲ್ಲಿ ಸತ್ಕಾರವನ್ನು ಮಾಡು. ಚಿತ್ರರಥನೆಂಬ ಸೂತನು ಬಹುಕಾಲದಿಂದ ನಿನ್ನನ್ನು ಆಶ್ರಯಿಸಿಕೊಂಡಿದ್ದನು. ಆತನನ್ನು ಅನೇಕ ರತ್ನಾ ಭರಣಗಳಿಂದ ಸತ್ಕರಿಸು. ವೇದಪಾರಾಯಣಶೀಲರಾಗಿ ವ್ರತನಿಯಃ )ಬ್ರಾಹ್ಮಣರಿಗೆ ಸಾವಿರ ಹಸುಗಳನ್ನು ಕೊಡು. ನಮ್ಮ ತಾಯಿಯಾದ ಕೌಸಲ್ಯಾದೇವಿಯನ್ನು ಆಶ್ರಯಿಸಿಕೊಂಡಿರುವ ಬ್ರಹ್ಮ ಚಾರಿಗಳಿಗೆ ಒಬ್ಬೊಬ್ಬರಿಗೆ ಸಾವಿರ ಸಾವಿರ ವರಹಗಳನ್ನು ಲೆಕ್ಕಮಾಡಿ ಆ ದೇವಿಗೆ ಸಂತೋಷವಾಗುವಂತೆ ಕೊಡು!'' ಎಂದು ಬ್ರಹ್ಮದೇವನು ದೇವೇಂದ್ರನಿಗೆ ಆಜ್ಞಾಪಿಸುವಂತೆ ಲಕ್ಷ್ಮಣನಿಗೆ ಅಪ್ಪಣೆಯನ್ನು ಕೊಟ್ಟನು.

ಲಕ್ಷ್ಮಣನು ಆತನ ಆಜ್ಞೆಯನ್ನು ಶಿರಸಾವಹಿಸಿ ಬ್ರಾಹ್ಮಣೋತ್ತಮರಿಗೆ ಅನೇಕ ದ್ರವ್ಯ ವಸ್ತು ವಾಹನಗಳನ್ನು ಕೊಟ್ಟನು. ತಾವು ವನವನ್ನೈದುವುದನ್ನು ಕಂಡು ದುಃಖಾತಿಶಯದಿಂದ ಕಣ್ಣೀರನ್ನು ಬಿಡುತ್ತಿದ್ದ ಊಳಿಗದವರಿಗೆ ಅನೇಕ ದ್ರವ್ಯಗಳನ್ನು ಕೊಟ್ಟನು. ತಮ್ಮ ಅರಮನೆಗಳು ಶೂನ್ಯವಾಗದಂತೆ ಆಪ್ತಜನರಿಗೆ ಅನೇಕ ದ್ರವ್ಯ ವಸ್ತು ವಾಹನಗಳನ್ನು ಕೊಟ್ಟು ಅರಮನೆಗಳನ್ನು ಕಾದುಕೊಂಡಿರುವಂತೆ ಕಟ್ಟುಮಾಡಿದನು. ಮನೋವ್ಯಥೆಯಿಂದಿದ್ದ ಪುರಜನರನ್ನು ಸಂತವಿಟ್ಟನು. ಬೊಕ್ಕಸದವರನ್ನು ಕರೆದು ಅವರಲ್ಲಿದ್ದ ದ್ರವ್ಯವೆಲ್ಲವನ್ನೂ ತರಿಸಿ ಪರ್ವತಾಕಾರವಾಗಿದ್ದ ಆ ದ್ರವ್ಯರಾಶಿಯನ್ನು ನೋಡಿ ಸಂತೋಷಪಟ್ಟು ಬ್ರಾಹ್ಮಣರಿಗೆ ಕೊಡುತ್ತಿದ್ದನು. ಆ ಸಮಯದಲ್ಲಿ ಗಾರ್ಗ್ಯನ ಮಗನಾದ ಶ್ರೀ ಜಟನೆಂಬವನು ಗುದ್ದಲಿ ನೇಗಿಲುಗಳನ್ನೂ ಸಂಪಾದಿಸಿಕೊಂಡು ಕಾಡುಮೇಡುಗಳನ್ನು ಸುತ್ತುತ್ತ ತನ್ನ ಸಂಸಾರಸ್ಥಿತಿಯನ್ನು ನಡೆಯಿಸುತ್ತಿದ್ದನು. ಅವನು ವೃದ್ಧನಾಗಿದ್ದನು. ಆತನ ಪತ್ನಿಯು ತನ್ನ ಎಳೆಯ ಮಕ್ಕಳನ್ನೂ ವೃದ್ಧನಾದ ತನ್ನ ಪತಿಯ ಕಾರ್ಪಣ್ಯವನ್ನೂ ನೋಡಲಾರದೆ ಶ್ರೀರಾಮನು ಬಹಳವಾಗಿ ದ್ರವ್ಯದಾನ ಮಾಡುತ್ತಲಿರುವುದನ್ನು ಕೇಳಿ ಅತಿದಾರಿದ್ರ್ಯದಿಂದ ನೊಂದವಳಾಗಿ ಆ ಬ್ರಾಹ್ಮಣನನ್ನು ಕುರಿತು ''ಸ್ವಾಮಿ, ಈ ಗುದ್ದಲಿ ನೇಗಿಲುಗಳನ್ನು ಸಾಕುಮಾಡಿ ಧರ್ಮಿಷ್ಠನಾದ ಶ್ರೀರಾಮನನ್ನು ಕಂಡೆಯಾದರೆ ನಮ್ಮ ಇಷ್ಟಾರ್ಥವು ಕೈಗೂಡುವುದು ಎಂದು ಹೇಳಿದಳು.

ಮುಂದುವರಿಯುವುದು...

# ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷೀಯ ಅಭ್ಯರ್ಥಿ

## ಎಸ್.ರಘುನಾಥ್ ರವರ ತಂಡದಿಂದ ಬೃಹತ್ ಚುನಾವಣೆ ಪ್ರಚಾರ ಸಭೆ

• ಉದಯವಾಹಿನಿ, ಬಸವನಗುಡಿ

ಪತ್ತಿ ಸಭಾಂಗಣದಲ್ಲಿ ಬಸವನಗುಡಿ ಬ್ರಾಹ್ಮಣ ಸಂಘಗಳ ಒಕ್ಕೂಟ ಹಾಗೂ ಬಸವನಗುಡಿ ಬ್ರಾಹ್ಮಣ ಮಹಾಸಭಾ ವತಿಯಿಂದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷೀಯ ಅಭ್ಯರ್ಥಿ ಎಸ್.ರಘುನಾಥ್ ಮತ್ತು ಜಿಲ್ಲಾ ಪ್ರತಿನಿಧಿಗಳ ಬೃಹತ್ ಪ್ರಚಾರ ಸಭೆ.

ಅಧ್ಯಕ್ಷೀಯ ಅಭ್ಯರ್ಥಿ ಎಸ್.ರಘುನಾಥ್ ರವರು, ಮಾಜಿ ಅಧ್ಯಕ್ಷರಾದ ಎಂ.ಆರ್.ವಿ.ಪ್ರಸಾದ್ , ನಿಕಟಪೂರ್ವ ಉಪಾಧ್ಯಕ್ಷರಾದ ಆರ್.ಲಕ್ಷ್ಮಿಕಾಂತ್ ರವರು ಬಸನಗುಡಿ ಬ್ರಾಹ್ಮಣ ಮಹಾಸಭಾ ಎಸ್.ಆರ್.ಕೃಷ್ಣಮೂರ್ತಿ, , ಬಡಗನಾಡು ಸಂಘದ ಅಧ್ಯಕ್ಷರಾದ ಚಿದಾನಂದ್, ವಿಪ್ರ ಮುಖಂಡರುಗಳಾದ ಅರುಳು ಮಲ್ಲಿಗೆ ಪಾರ್ಥಸಾರಥಿ, ಕೆ.ಪಿ.ಪುತ್ತುರಾಯ, ರವಿಶಂಕರ್, ಸತ್ಯನಾರಾಯಣ್, ದತ್ತಾತ್ರಿ, ಬಿ.ಎನ್.ಪ್ರಹ್ಲಾದ್, ಶಿವಶಂಕರ್, ರಾಘವೇಂದ್ರ, ಉಮೇಶ್ ಶಾಸ್ತ್ರಿ, ರಥಯಾತ್ರೆ ಸುರೇಶ್, ಜಿಲ್ಲಾ ಪ್ರತಿನಿಧಿ ಸ್ಪರ್ಧಿಗಳಾದ ಸತೀಶ್ ಉರಾಳ್, ರಾಜಶೇಖರ್ ಜಿ, ಕೆ.ಎನ್.ರವಿಕುಮಾರ್, ಶ್ರೀಮತಿ ಅಂಬಿಕಾ ರಾಮಚಂದ್ರರವರು, ಕೇಂದ್ರ ಜಿಲ್ಲಾ ಪ್ರತಿನಿಧಿ ಸ್ಥಾನದ ಅಭ್ಯರ್ಥಿ ಎಸ್.ಎಸ್.ಪ್ರಸಾದ್ ರವರು ದೀಪ ಬೆಳಗಿಸಿ ಬೃಹತ್ ಪ್ರಚಾರ ಸಭೆಗೆ ಚಾಲನೆ ನೀಡಿದರು.

ಎಸ್.ರಘುನಾಥ್‌ರವರು ಮಾತನಾಡಿ ಪ್ರತಿ ದಿನ, ಪ್ರತಿಕ್ಷಣ ಬಹಳ ಮುಖ್ಯ ಮತದಾರರ ಮನೆ, ಮನ ಮುಟ್ಟುವ ಕೆಲಸ ಮಾಡಬೇಕು. ಎಲ್ಲಾ ಮಠದ ಸ್ವಾಮೀಜಿಗಳು, ಗುರುಗಳು ಆಶೀರ್ವಾದದಿಂದ ನಮ್ಮ ಹೋರಾಟಕ್ಕೆ ಶಕ್ತಿ ಬಂದಿದೆ.

ಎಲ್ಲಾ ಕಡೆ ವಾತವರಣ ತುಂಬಾ ಚನ್ನಾಗಿದೆ, ವಿಪ್ರರು ಉತ್ತಮ ಸ್ಪಂದನೆ ನೀಡುತ್ತಿದ್ದಾರೆ. ಮತದಾರರ ಪ್ರತಿ ಮನೆಗಳಿಗೆ ಭೇಟಿ ನೀಡಿ ಸಾಧನೆ ಮತ್ತು ವಿಪ್ರ ಸಮುದಾಯಕ್ಕೆ ಕೈಗೊಳ್ಳುವ ಯೋಜನೆಗಳನ್ನು ತಿಳಿಸಿ ಮತಯಾಚನೆ ಮಾಡಲಾಗುತ್ತಿದೆ.

ಎಲ್ಲಾ ವಿಪ್ರ ಮುಖಂಡರು ಆಶೀರ್ವಾದ, ಸಹಕಾರಕ್ಕೆ ಹೃತ್ಪೂರ್ವಕ ಧನ್ಯವಾದಗಳು ಎಂದು ಹೇಳಿದರು.

ಎಂ.ಆರ್.ವಿ.ಪ್ರಸಾದ್ ರವರು ಮಾತನಾಡಿ ಬ್ರಾಹ್ಮಣ ಎಂದರೆ ಸಮಾಜದಲ್ಲಿ ಉತ್ತಮ ಗೌರವವಿದೆ. ಮುಂದಿನ ದಿನಗಳಲ್ಲಿ ಮಹಾಸಭಾ ಪ್ರಬಲವಾಗಿ ಬೆಳಯಲಿದೆ. ನಮ್ಮ ಸಂಘದ ಅಧ್ಯಕ್ಷರಾಗಿ ಸಮರ್ಥರು ಎಂದರೆ ರಘುನಾಥ್ ರವರು. ಉತ್ತಮ ಸಂಘಟಕರು, ವಿಪ್ರರ ಅಭಿವೃದ್ದಿಗೆ ಶ್ರಮಿಸುತ್ತಿರುವ ಎಸ್.ರಘುನಾಥ್ ರವರಿಗೆ ಎಲ್ಲರು ಬೆಂಬಲಿಸಬೇಕು ಎಂದು ಹೇಳಿದರು.


ಉದಯವಾಹಿನಿ ಚಿತ್ರ

ಬೃಹತ್ ಪ್ರಚಾರ ಸಭೆ

ಆರ್.ಲಕ್ಷ್ಮಿಕಾಂತ್ ರವರು ಮಾತನಾಡಿ ಎಸ್. ರಘುನಾಥ್ ರವರು ಅಧ್ಯಕ್ಷರಾಗಬೇಕು ಎಂದು ಎಲ್ಲರು ಸಂಕಲ್ಪ ಮಾಡಿದ್ದಾರೆ.

ಬಿ.ಎನ್.ವಿ.ಸುಬ್ರಮಣ್ಯ, ಸಿ.ವಿಎಲ್.ಶಾಸ್ತ್ರಿ ಮತ್ತು ಎಂ.ಆರ್.ವಿ.ಪ್ರಸಾದ್ ರವರು ಉತ್ತಮ ಸೇವೆ ಮತ್ತು ಕೊಡುಗೆ ನೀಡಿದ್ದಾರೆ. ನಾನು ಮತ್ತು ರಘುನಾಥ್ ರವರು 20ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಪ್ರವಾಸ ಮಾಡಿದ್ದೇವೆ, ಎಲ್ಲಾ ಜಿಲ್ಲೆಗಳಲ್ಲಿ ಉತ್ತಮ ಬೆಂಬಲ, ಸಹಕಾರ ನೀಡುತ್ತಿದ್ದಾರೆ, ಬದಲಾವಣೆ ಸಮಯ ಬಂದಿದೆ ಎಂದು ಹೇಳಿದರು.

ಕೆ.ಪಿ.ಪುತ್ತುರಾಯರವರು ಮಾತನಾಡಿ ದೇಶದ ಸಂಸ್ಕೃತಿ, ಸಂಪ್ರದಾಯ ಉಳಿಸುವಲ್ಲಿ ಬ್ರಾಹ್ಮಣರ ಶ್ರಮವಿದೆ. ಭಾನುಪ್ರಕಾಶ್ ರವರು ಗಣ್ಯಮಹನೀಯರುಗಳ ಅಂತ್ಯ ಸಂಸ್ಕಾರ ಮಾಡಿದ್ದಾರೆ ಅದರೆ ಬ್ರಾಹ್ಮಣ ಮಹಾಸಭಾದ ಅಂತ್ಯ ಸಂಸ್ಕಾರ ಮಾಡಬೇಡಿ.

ಎಸ್.ರಘುನಾಥ್ ರವರು ಸರಳತೆಯಲ್ಲಿ ಸರಳರು ಅವರು ಎಲ್ಲರ ಜೊತೆಗೂಡಿ ಕೆಲಸ ಮಾಡಬಲ್ಲರು ಅದರಿಂದ ವಿಪ್ರ ಬಂಧುಗಳು ಮತ ನೀಡಿ ಎಂದು ಹೇಳಿದರು.

ಬಿ.ಎಸ್.ರವಿಶಂಕರ್ ರವರು ಮಾತನಾಡಿ ಬ್ರಾಹ್ಮಣರ ಗೌರವ, ಪ್ರತಿಷ್ಟೆಯ ಚುನಾವಣೆಯಾಗಿದೆ. ಎಸ್.ರಘುನಾಥ್, ಆರ್.ಲಕ್ಷ್ಮಿಕಾಂತ್‌ರವರು ಜೋಡೆತ್ತು ರೀತಿಯಲ್ಲಿ ರಾಜ್ಯಾದ್ಯಂತ ಪ್ರವಾಸ ಮಾಡಿ ಯಶ್ವಸಿಯಾಗಿ ಚುನಾವಣೆ ಪ್ರಚಾರ ಮಾಡಿದ್ದಾರೆ. ಎಲ್ಲುಮೈ ಮರೆಯಬಾರದು, ಪ್ರತಿ ಮತದಾರರನ್ನು ಭೇಟಿ ಮಾಡಬೇಕು. ಎಸ್.ರಘುನಾಥ್‌ರವರ ಸಂಘಟನೆ, ಸಾಧನೆ, ಯೋಜನೆಗಳನ್ನು ತಿಳಿಸಿ ಮತಯಾಚನೆ ಮಾಡಬೇಕು ಎಂದು ಹೇಳಿದರು.

ಎನ್.ಎಲ್.ಚಿದಾನಂದ್‌ರವರು ಮಾತನಾಡಿ ರಾಜ್ಯಾದ್ಯಂತ ಎಲ್ಲಾ ವಿಪ್ರ ಬಂಧುಗಳು ಎಸ್.ರಘುನಾಥ್ ರವರ ಪರ ಅಪಾರ ಒಲವು ಹೊಂದಿದ್ದಾರೆ. ಎಲ್ಲರ ಕೈಗೆ ಸಿಗುವ ಮತ್ತು ಕಷ್ಟ, ಸುಖದಲ್ಲಿ ನಿಲ್ಲುವ ವ್ಯಕ್ತಿತ್ವ, ಸರಳ ಸಜ್ಜನ ಎಸ್.ರಘುನಾಥ್ ರವರು ಮನೆ, ಮನೆಗೆ ತೆರಳಿ ಮತ ನೀಡುವಂತೆ ಮನವಿ ಮಾಡಿ ಎಂದು ಹೇಳಿದರು.

ದತ್ತಾತ್ರಿ ರವರು ಮಾತನಾಡಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಚುನಾವಣೆಯಲ್ಲಿ ರಾಜ್ಯಾದ್ಯಂತ ವಿಪ್ರರು ಎಸ್. ರಘುನಾಥ್ ರವರಿಗೆ ಅಭೂತಪೂರ್ವ ಬೆಂಬಲ ನೀಡಿದ್ದಾರೆ, ಕಳೆದ ಮೂರು ವರ್ಷಗಳಿಂದ ವಿಪ್ರರ ಜೊತೆಯಲ್ಲಿ ಸತತ ಒಡನಾಟ, ವಿಪ್ರರ ಸೇವೆ ಮಾಡುವಲ್ಲಿ ಎಸ್.ರಘುನಾಥ್ ರವರು ಹಗಲಿರುಳು ಶ್ರಮಿಸುತ್ತಿದ್ದಾರೆ.

ಬೆಂಗಳೂರು ದಕ್ಷಿಣದಲ್ಲಿ ಅತಿ ಹೆಚ್ಚು ಮತದಾರರು ಇದ್ದಾರೆ ಇಲ್ಲಿ ಅತ್ಯಧಿಕ ಲೀಡ್ ಪಡೆಯಬೇಕು ಎಂದು ಹೇಳಿದರು.

> ಜಯ, ವಿಜಯ, ದಿಗ್ವಿಜಯ ಎಸ್. ರಘುನಾಥ್‌ರವರಿಗೆ ಲಭಿಸಲಿ ರಘುನಾಥ್ ರವರಿಗೆ ಹಾರೈಸುತ್ತಾನೆ. ಸಾಧಿಸುವ ಛಲ, ಸತ್ಯದ ಕಡೆ ದಿಟ್ಟ ಹೆಜ್ಜೆ ಇಡುವ ವ್ಯಕ್ತಿತ್ವವಿರುವ ಎಸ್.ರಘುನಾಥ್‌ರವರು. ಇಡಿ ಬ್ರಾಹ್ಮಣ ಸಮುದಾಯದ ಅಭಿವೃದ್ದಿಗೆ ಶ್ರಮಿಸುವ ವ್ಯಕ್ತಿತ್ವವಿರುವ ಎಸ್.ರಘುನಾಥ್‌ರವರು ವಿಪ್ರ ಸಮುದಾಯದ ಅಮೂಲರತ್ನ. ಸಂಸ್ಕಾರವಂತ, ವಿದ್ಯಾವಂತ ಮತ್ತು ವಿಪ್ರರ ಕುರಿತು ಒಗ್ಗೂಡಿಸಿಕೊಂಡು ಹೋಗುವ, ಎಲ್ಲರ ಸುಲಭವಾಗಿ ಸಿಗುವ ಎಸ್.ರಘುನಾಥ್ ರವರಿಗೆ ಯಶ್ವಸಿ ಸಿಗಲಿ ಎಂದು ಶುಭಾ ಕೋರುತ್ತೇನೆ
>
> –ಅರುಳು ಮಲ್ಲಿಗೆ ಪಾರ್ಥಸಾರಥಿ



ಶ್ರೀ. ಮೋಹನ್ ಗೌಡ

• ಉದಯವಾಹಿನಿ, ವಿಶೇಷ

# ಸರ್ಕಾರ ಹಿಂದೂ ಸಮುದಾಯಕ್ಕಾದ ಅನ್ಯಾಯಕ್ಕೂ ಪರಿಹಾರ ನೀಡಲಿ – ಹಿಂದೂ ಜನಜಾಗೃತಿ ಸಮಿತಿ

## ವಕ್ಫ್ ತಿದ್ದುಪಡಿ ಮಸೂದೆ ಅಪೂರ್ಣ

ಕೇಂದ್ರ ಸರ್ಕಾರ ಮಂಡಿಸಿದ ವಕ್ಫ್ ಮಸೂದೆಯಲ್ಲಿ ವಕ್ಫ್ ಮಂಡಳಿಗೆ ನೀಡಲಾದ ಅಪರಿಮಿತ ಅಧಿಕಾರಗಳನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಲಾಗಿದ್ದರೂ, ಮಸೂದೆಯು ಹಿಂದೂ ಸಮುದಾಯದ ಭೂಮಿಯ ರಕ್ಷಣೆಯನ್ನು ಸಂಪೂರ್ಣವಾಗಿ ಖಾತರಿಪಡಿಸುವುದಿಲ್ಲ. ಪ್ರಸ್ತುತ ವಕ್ಫ್ ಮಸೂದೆ ಅಪೂರ್ಣವಾಗಿದೆ ಮತ್ತು ಹಿಂದೂ ಸಮುದಾಯದ ಹಕ್ಕುಗಳನ್ನು ಸಂಪೂರ್ಣವಾಗಿ ರಕ್ಷಿಸಲು ಅಸಮರ್ಥವಾಗಿದೆ.

ಹಿಂದೂಗಳ ಹಕ್ಕಿನ ಭೂಮಿಯ ಮೇಲಿನ ಅನ್ಯಾಯ ದೂರಗೊಳಿಸಲು ಹಿಂದೂ ಪಕ್ಷವು ಜಂಟಿ ಸಂಸದೀಯ ಸಮಿತಿಯ ಮುಂದೆ ಮಂಡಿಸಿದ ಅಂಶಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು ಮತ್ತು ಹಿಂದೂ ಸಮಾಜದ ಹಕ್ಕುಗಳ ಮೇಲಾಗುತ್ತಿರುವ ಅನ್ಯಾಯ ದೂರಗೊಳಿಸಬೇಕು ಎಂದು ಹಿಂದೂ ಜನಜಾಗೃತಿ ಸಮಿತಿ ಒತ್ತಾಯಿಸಿದೆ.

ಪ್ರಸ್ತಾವಿತ ಮಸೂದೆಯ ಕೆಲವು ವಿಭಾಗಗಳಾದ ಸೆಕ್ಷನ್ 40, 104, 107 ಮತ್ತು 108 ಈ ಭೀಕರ ಕಲಂ ರದ್ದತಿಯನ್ನು ಹಿಂದೂ ಜನಜಾಗೃತಿ ಸಮಿತಿ ಸಂಪೂರ್ಣವಾಗಿ ಬೆಂಬಲಿಸುತ್ತದೆ. ಸೆಕ್ಷನ್ 3(ಸಿ) ಪ್ರಕಾರ, ಸರ್ಕಾರಿ ಭೂಮಿಯನ್ನು ಮಾತ್ರ ತನಿಖೆ ಮಾಡಲಾಗುತ್ತದೆ ಮತ್ತು ಹಿಂದೆ ವಕ್ಫ್ ಆಸ್ತಿಗಳೆಂದು ಘೋಷಿಸಲಾದ ಭೂಮಿಗಳ ಬಗ್ಗೆ ಮಾಹಿತಿಯನ್ನು ಕೋರಲಾಗಿದೆ; ಆದರೆ, ಹಿಂದೂ ದೇವಾಲಯ, ಸಮುದಾಯಗಳ ಜಮೀನುಗಳು, ಟ್ರಸ್ಟ್ ಜಮೀನುಗಳು, ಇತರ ಸಮುದಾಯಗಳ ಒಡೆತನದ ಜಮೀನುಗಳು, ಭಾರತೀಯ ಪುರಾತತ್ವ ಸಮೀಕ್ಷೆಯ ವ್ಯಾಪ್ತಿಯಲ್ಲಿರುವ ಜಮೀನುಗಳನ್ನು ವಕ್ಫ್ ಆಸ್ತಿಗಳೆಂದು ಘೋಷಿಸಿದ್ದರೆ, ಅವುಗಳ ಮೇಲೆ ಯಾವುದೇ ಪೂರ್ವಾನ್ವಯ ಪರಿಣಾಮ ಬೀರುವುದಿಲ್ಲ. ಆದ್ದರಿಂದ, ಈ ಭೂಮಿಯನ್ನು ಹಿಂದೂ ಸಮುದಾಯಕ್ಕೆ ಹಿಂತಿರುಗಿಸಲಾಗುವುದು ಎಂಬುದಕ್ಕೆ ಈ ಮಸೂದೆಯಲ್ಲಿ ಯಾವುದೇ ಗ್ಯಾರಂಟಿ ಇಲ್ಲ.



ಉದಯವಾಹಿನಿ ಚಿತ್ರ


ಈ ಹಿನ್ನೆಲೆಯಲ್ಲಿ, ಹಿಂದೂ ಸಮುದಾಯದ ಹಕ್ಕುಗಳ ಸಂಪೂರ್ಣ ರಕ್ಷಣೆಯನ್ನು ಖಚಿತಪಡಿಸಿಕೊಳ್ಳಲು ಈ ಮಸೂದೆಗೆ ಮತ್ತಷ್ಟು ತಿದ್ದುಪಡಿಗಳು ಅವಶ್ಯಕವಾಗಿದೆ. ಈ ಹಿಂದೆ ವಕ್ಫ್ ಆಸ್ತಿಗಳೆಂದು ಘೋಷಿಸಲಾದ ಎಲ್ಲಾ ಭೂಮಿಯನ್ನು ತನಿಖೆ ಮಾಡಬೇಕು, ಹಿಂದೂ ದೇವಾಲಯಗಳು, ಟ್ರಸ್ಟ್‌ಗಳು, ಇತರ ಸಂಘಗಳು ಮತ್ತು ಭಾರತೀಯ ಪುರಾತತ್ವ ಸಮೀಕ್ಷೆಯ ಭೂಮಿಗಳ ಮೇಲೆ ಮಾಡಲಾದ ಅನ್ಯಾಯದ ವಕ್ಫ್ ಹಕ್ಕುಗಳನ್ನು ತಕ್ಷಣವೇ ರದ್ದುಗೊಳಿಸಬೇಕು ಮತ್ತು ವಕ್ಫ್ ಮಂಡಳಿಗೆ ನೀಡಲಾದ ವಿಶೇಷ ಅಧಿಕಾರಗಳನ್ನು ಸಂಪೂರ್ಣವಾಗಿ ತೆಗೆದುಹಾಕಬೇಕು ಎಂದು ಹಿಂದೂ ಸಮುದಾಯ ಒತ್ತಾಯಿಸುತ್ತಿದೆ. ಹಿಂದೂ ಸಮುದಾಯದ ಹಕ್ಕುಗಳಿಗಾಗಿ ಈ ಹೋರಾಟ ಮುಂದುವರಿಯುತ್ತದೆ.

ಹಿಂದೂ ಸಮುದಾಯವು ಒಗ್ಗೂಡಿ ತಮ್ಮ ಭೂಮಿಯನ್ನು ರಕ್ಷಿಸಲು ಧ್ವನಿ ಎತ್ತುವ ಅಗತ್ಯವಿದೆ ಎಂದು ಸಮಿತಿ ಹೇಳಿದೆ.

# ಈರುಳ್ಳಿ ಸೇವನೆ ಹೃದಯದ ಆರೋಗ್ಯಕ್ಕೂ ಚರ್ಮಕ್ಕೂ ಒಳ್ಳೆಯದೇ?

ಈರುಳ್ಳಿಯನ್ನು ಸಾಮಾನ್ಯವಾಗಿ ಅಡುಗೆಯ ರುಚಿ ಹೆಚ್ಚಿಸುವ ಸಲುವಾಗಿ ಬಳಸಲಾಗುತ್ತದೆ. ಆದರೆ ಈರುಳ್ಳಿಯು ಆರೋಗ್ಯಕ್ಕೂ ಹೆಚ್ಚಿನ ಪ್ರಯೋಜನವನ್ನು ನೀಡುತ್ತದೆ. ಇವು ಮೂಳೆಗಳು, ಹೃದಯ ಹಾಗೂ ಚರ್ಮದ ಆರೋಗ್ಯಕ್ಕೂ ಉತ್ತಮ ಎನ್ನಲಾಗುತ್ತಿದೆ ಇನ್‌ಸ್ಟಾಗ್ರಾಮ್ ಪೋಸ್ಟ್‌ವೊಂದು. ಆದರೆ ಈ ಪೋಸ್ಟ್‌ನಲ್ಲಿ ತಿಳಿಸಲಾಗಿರುವ ವಿಚಾರಗಳು ಸರಿಯೋ ತಪ್ಪೋ ಎನ್ನುವುದನ್ನು ತಿಳಿಯುವುದು ಮುಖ್ಯ.

**ವೈದ್ಯರು ಏನಂತಾರೆ?:** ಈ ಪೋಸ್ಟ್‌ನಲ್ಲಿ ತಿಳಿಸಲಾಗಿರುವ ಮಾಹಿತಿ ನಿಜವೋ ಎನ್ನುವುದನ್ನು ತಿಳಿಯಲು ಸಜಗ್ ಫ್ಯಾಕ್ಟ್ ಚೆಕ್ ತಂಡವು ವೈದ್ಯರನ್ನು ಸಂಪರ್ಕಿಸಿದೆ. ನವದೆಹಲಿಯ ಲಜಪತ್ ನಗರದ ಎಲಾಂಟಿಸ್ ಹೆಲ್ತ್‌ಕೇರ್‌ನ ಚರ್ಮರೋಗ ವೈದ್ಯ ಮತ್ತು ಸೌಂದರ್ಯಶಾಸ್ತ್ರಜ್ಞರಾದ ಡಾ. ಚಾಂದನಿ ಜೈನ್ ಗುಪ್ತಾ ಅವರು ಈರುಳ್ಳಿ ಮೂಳೆಗಳು, ಹೃದಯ ಮತ್ತು ಚರ್ಮ ಸೇರಿದಂತೆ ಒಟ್ಟಾರೆ ಆರೋಗ್ಯಕ್ಕೆ ಪ್ರಯೋಜನಕಾರಿ ಎಂದು ತಿಳಿಸಿದ್ದಾರೆ. ಈರುಳ್ಳಿಯಲ್ಲಿ ಕ್ವೆರ್ಸೆಟಿನ್ ಎಂಬ ಉತ್ಕರ್ಷಣ ನಿರೋಧಕವಿದೆ, ಇದು ಉರಿಯೂತವನ್ನು ಕಡಿಮೆ ಮಾಡುವ ಮೂಲಕ ಹೃದಯವನ್ನು ಆರೋಗ್ಯಕರವಾಗಿಸುತ್ತದೆ ಎಂದು ಅವರು ಹೇಳುತ್ತಾರೆ.



# ಮುಖಕ್ಕೆ ಅರಿಶಿನ ಮತ್ತು ರೋಸ್ ವಾಟರ್ ಹಚ್ಚುವುದರಿಂದ ಏನು ಪ್ರಯೋಜನ?

ಬೇಸಿಗೆಯಲ್ಲಿ ತ್ವಚೆಯ ಸಮಸ್ಯೆ ಸಾಮಾನ್ಯ. ಸೆಕೆ, ಬಿಸಿಲಿನಿಂದ ಚರ್ಮ ಹಾನಿಗೊಳಗಾಗುತ್ತದೆ. ಹಾನಿಯಾದ ಚರ್ಮದ ಮೇಲೆ ಪುನಃ ರಾಸಾಯನಿಕ ಉತ್ಪನ್ನಗಳನ್ನು ಬಳಸುವುದರಿಂದ ಚರ್ಮಕ್ಕೆ ಮತ್ತಷ್ಟು ಹಾನಿಯಾಗುತ್ತದೆ. ಅಂತಹ ಪರಿಸ್ಥಿತಿಯಲ್ಲಿ, ರೋಸ್ ವಾಟರ್ ಮತ್ತು ಅರಿಶಿನದಂತಹ ನೈಸರ್ಗಿಕ ವಸ್ತುಗಳನ್ನು ಚರ್ಮದ ಮೇಲೆ ಹಚ್ಚುವ ಮೂಲಕ ನೀವು ತ್ವಚೆಯ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು.

ಅರಿಶಿನ ಬಹಳ ಹಿಂದಿನ ಕಾಲದಿಂದಲೂ ತ್ವಚೆಯ ಸಮಸ್ಯೆಗೆ ಪರಿಹಾರವಾಗಿ ಬಳಸಲಾಗುತ್ತಿದೆ. ಅರಶಿನವನ್ನು ನಮ್ಮ ಅಜ್ಜಿಯಂದಿರು ಸೌಂದರ್ಯ ವರ್ಧಕ ಉತ್ಪನ್ನವಾಗಿ ಬಳಸುತ್ತಿದ್ದರು. ಅರಿಶಿನವು ಔಷಧೀಯ ಗುಣಗಳಿಂದ ಸಮೃದ್ಧವಾಗಿದೆ, ಉರಿಯೂತದ, ಆಂಟಿಆಕ್ಸಿಡೆಂಟ್ ಮತ್ತು ಬ್ಯಾಕ್ಟೀರಿಯಾ ವಿರೋಧಿ ಗುಣಗಳನ್ನು ಹೊಂದಿದೆ, ಇದು ಚರ್ಮಕ್ಕೆ ಪ್ರಯೋಜನಕಾರಿಯಾಗಿದೆ. ಹಾಗೆಯೇ ರೋಸ್ ವಾಟರ್ ಪ್ರತಿಯೊಂದು ಚರ್ಮದ ಪ್ರಕಾರಕ್ಕೂ ಪ್ರಯೋಜನಕಾರಿ ಎಂದು ಸಾಬೀತಾಗಿದೆ. ರೋಸ್ ವಾಟರ್ ತ್ವಚೆಯನ್ನು ಹೈಡ್ರೇಟಿಕರಿಸುತ್ತದೆ ಮತ್ತು ತ್ವಚೆಯ ಆರೈಕೆಗಾಗಿ ಇದನ್ನು ಸೀರಮ್ ಮತ್ತು ಟೋನರ್ ರೂಪದಲ್ಲೂ ಬಳಸಲಾಗುತ್ತದೆ. ಇದು ಚರ್ಮದಿಂದ ಹೆಚ್ಚುವರಿ ಎಣ್ಣೆ ಮತ್ತು ಕೊಳೆಯನ್ನು ತೆಗೆದು ಹಾಕಲು ಸಹಾಯ ಮಾಡುತ್ತದೆ. ಚರ್ಮವನ್ನು ಸ್ವಚ್ಛವಾಗಿರಿಸುತ್ತದೆ ಹಾಗೂ ತ್ವಚೆಯನ್ನು ನಯವಾಗಿ ಆರೋಗ್ಯಕರವನ್ನಾಗಿ ಕಾಣುವಂತೆ ಮಾಡುತ್ತದೆ. ಇವೆರಡನ್ನು ಬೆರೆಸಿ ಚರ್ಮಕ್ಕೆ ಹಚ್ಚುವುದರಿಂದ ಚರ್ಮವು ಹೊಳಪನ್ನು ಪಡೆಯುತ್ತದೆ.



**ಅರಿಶಿನ-ಗುಲಾಬಿ ನೀರನ್ನು ಹೇಗೆ ಬಳಸುವುದು:** 2 ಚಿಟಿಕೆ ಅರಿಶಿನ ಪುಡಿಯನ್ನು ತೆಗೆದುಕೊಂಡು ಅದಕ್ಕೆ 3–4 ಚಮಚ ರೋಸ್ ವಾಟರ್ ಮತ್ತು ಸ್ವಲ್ಪ ಜೇನುತುಪ್ಪ ಸೇರಿಸಿ. ಈಗ ಅದನ್ನು ಮುಖಕ್ಕೆ ಹಚ್ಚಿ. 15 ನಿಮಿಷಗಳ ನಂತರ, ತಣ್ಣೀರಿನಿಂದ ಮುಖವನ್ನು ಸ್ವಚ್ಛಗೊಳಿಸಿ.

**ಬಿಸಿಲಿನಿಂದ ಪರಿಹಾರ:** ಬೇಸಿಗೆಯಲ್ಲಿ ಅರಿಶಿನ ಮತ್ತು ರೋಸ್ ವಾಟರ್ ಅನ್ನು ಮುಖಕ್ಕೆ ಹಚ್ಚುವುದರಿಂದ ಚರ್ಮ ತಂಪಾಗುತ್ತದೆ. ಸೂರ್ಯನ ಬೆಳಕಿನಿಂದ ಸುಟ್ಟ ಚರ್ಮಕ್ಕೆ ರೋಸ್ ವಾಟರ್ ಪರಿಹಾರ ಮತ್ತು ಆರಾಮ ನೀಡುವಲ್ಲಿ ಪರಿಣಾಮಕಾರಿಯಾಗಿದೆ. ಬೇಸಿಗೆಯಲ್ಲಿ ಇವುಗಳನ್ನು ನಿಮ್ಮ ಚರ್ಮದ ಮೇಲೆ ಹಚ್ಚುವುದರಿಂದ ಬಹಳಷ್ಟು ಪ್ರಯೋಜನಗಳಿವೆ.



**ಮೊಡವೆಗಳನ್ನು ಕಡಿಮೆ ಮಾಡುತ್ತದೆ:** ರೋಸ್ ವಾಟರ್ ನಲ್ಲಿ ಬ್ಯಾಕ್ಟೀರಿಯಾ ವಿರೋಧಿ ಅಂಶಗಳು ಕಂಡು ಬರುತ್ತವೆ. ಈ ಗುಣಗಳು ಚರ್ಮದ ಉರಿಯೂತವನ್ನು ಕಡಿಮೆ ಮಾಡುವುದರ ಜೊತೆಗೆ ಚರ್ಮವನ್ನು ಆರೋಗ್ಯಕರವಾಗಿಸುತ್ತದೆ. ರೋಸ್ ವಾಟರ್ ಚರ್ಮವನ್ನು ಆಳವಾಗಿ ಸ್ವಚ್ಛಗೊಳಿಸುತ್ತದೆ, ಆರೋಗ್ಯಕರವಾಗಿಸುತ್ತದೆ. ಅರಿಶಿನದಲ್ಲಿರುವ ಬ್ಯಾಕ್ಟೀರಿಯಾ ವಿರೋಧಿ ಗುಣಗಳು ಮೊಡವೆಗಳನ್ನು ಉಂಟುಮಾಡುವ ಬ್ಯಾಕ್ಟೀರಿಯಾವನ್ನು ಕೊಲ್ಲಲು ಸಹಾಯ ಮಾಡುತ್ತದೆ. ಇದರೊಂದಿಗೆ, ಇದು ಊತ ಮತ್ತು ಕೆಂಪು ಬಣ್ಣವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

**ಮೃದು ಚರ್ಮ:** ಸನ್ ಟ್ಯಾನಿಂಗ್ ನಿಂದಾಗಿ ಒರಟು ಮತ್ತು ಒಣಗಿದ ಚರ್ಮವನ್ನು ಮೃದುಗೊಳಿಸಲು, ನೀವು ರೋಸ್ ವಾಟರ್ ಮತ್ತು ಅರಿಶಿನ ಮಿಶ್ರಣವನ್ನು ನಿಮ್ಮ ಮುಖಕ್ಕೆ ಹಚ್ಚಬಹುದು. ರೋಸ್ ವಾಟರ್ ನೈಸರ್ಗಿಕ ಚರ್ಮದ ಟೋನರ್ ಆಗಿ ಕಾರ್ಯನಿರ್ವಹಿಸುತ್ತದೆ, ಇದು ಚರ್ಮದ ಜಿಡ್ಡನ್ನು ಕಡಿಮೆ ಮಾಡುತ್ತದೆ ಮತ್ತು ಚರ್ಮದ ಬಣ್ಣವನ್ನು ಸುಧಾರಿಸುತ್ತದೆ.

**ಸೋಂಕುಗಳಿಗೆ ಚಿಕಿತ್ಸೆ :** ರೋಸ್ ವಾಟರ್ ಬ್ಯಾಕ್ಟೀರಿಯಾ ವಿರೋಧಿ ಗುಣಲಕ್ಷಣಗಳನ್ನು ಹೊಂದಿದ್ದು, ಚರ್ಮದ ಗಾಯಗಳನ್ನು ವೇಗವಾಗಿ ವಾಸಿ ಮಾಡಲು ಸಹಾಯ ಮಾಡುತ್ತದೆ. ರೋಸ್ ವಾಟರ್ ಉರಿಯೂತ ವಿರೋಧಿ ಲಕ್ಷಣವನ್ನು ಹೊಂದಿದೆ. ಇದರ ರೋಸಾಸಿಯಾ ಅಂಶ ಚರ್ಮದ ಕಿರಿಕಿರಿಯನ್ನು ಶಮನಗೊಳಿಸಲು ಸಹಾಯ ಮಾಡುತ್ತದೆ.

**ಕಲೆಗಳನ್ನು ಕಡಿಮೆ ಮಾಡುತ್ತದೆ:** ಅರಶಿನ ಫ್ರೀ ರಾಡಿಕಲ್‌ಗಳಿಂದ ಉಂಟಾಗುವ ಹಾನಿಯಿಂದ ಚರ್ಮವನ್ನು ರಕ್ಷಿಸುತ್ತದೆ. ಇದು ಚರ್ಮದ ಕೋಶಗಳನ್ನು ಪುನರುತ್ಪಾದಿಸಲು ಮತ್ತು ಚರ್ಮವನ್ನು ಕಾಂತಿಯುತಗೊಳಿಸಲು ಸಹಾಯ ಮಾಡುತ್ತದೆ. ಅರಿಶಿನವು ಕಲೆಗಳನ್ನು ಕಡಿಮೆ ಮಾಡಲು ಸಹ ಸಹಾಯ ಮಾಡುತ್ತದೆ. ಇದು ಚರ್ಮವನ್ನು ಬಿಗಿಗೊಳಿಸಲು ಮತ್ತು ಸುಕ್ಕುಗಳನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

# ಶ್ರೀರಾಮನ ಜನ್ಮ ಪ್ರೀತ್ಯರ್ಥವಾಗಿ ಶ್ರೀರಾಮ ನವಮಿ

ಶ್ರೀ. ವಿನೋದ್ ಕಾಮತ್

ಶ್ರೀವಿಷ್ಣುವಿನ ಏಳನೆಯ ಅವತಾರನಾದ ಶ್ರೀರಾಮನ ಜನ್ಮ ಪ್ರೀತ್ಯರ್ಥವಾಗಿ ಶ್ರೀರಾಮ ನವಮಿಯನ್ನು ಆಚರಿಸುತ್ತಾರೆ. ಈ ದಿನ ಪುನರ್ವಸು ನಕ್ಷತ್ರದಲ್ಲಿ, ಮಧ್ಯಾಹ್ನದಲ್ಲಿ, ಕರ್ಕ ಲಗ್ನದಲ್ಲಿ ಸೂರ್ಯಾದಿ ಐದು ಗ್ರಹಗಳಿದ್ದಾಗ ಅಯೋಧ್ಯೆಯಲ್ಲಿ ಶ್ರೀರಾಮಚಂದ್ರನ ಜನ್ಮವಾಯಿತು.

**ಶ್ರೀರಾಮನವಮಿಯ ಆಧ್ಯಾತ್ಮಿಕ ಲಾಭವನ್ನು ಪಡೆಯಿರಿ:** ದೇವತೆಗಳು ಮತ್ತು ಅವತಾರಗಳ ಜನ್ಮತಿಥಿಯಂದು ಭೂಮಿಯ ಮೇಲೆ ಅವರ ತತ್ತ್ವವು ಹೆಚ್ಚು ಪ್ರಮಾಣದಲ್ಲಿ ಕಾರ್ಯನಿರತವಾಗಿರುತ್ತದೆ. ಶ್ರೀರಾಮ ನವಮಿಗೆ ಶ್ರೀರಾಮತತ್ತ್ವವು ಎಂದಿಗಿಂತ 1000 ಪಟ್ಟು ಹೆಚ್ಚು ಕಾರ್ಯನಿರತವಾಗಿರುತ್ತದೆ. ಶ್ರೀರಾಮ ನವಮಿಗೆ 'ಶ್ರೀರಾಮ ಜಯ ರಾಮ ಜಯ ಜಯ ರಾಮ ।' ನಾಮಜಪ, ಹಾಗೆಯೇ ಶ್ರೀರಾಮನ ಇತರ ಉಪಾಸನೆಗಳನ್ನು ಭಾವಪೂರ್ಣವಾಗಿ ಮಾಡುವುದರಿಂದ ಶ್ರೀರಾಮತತ್ತ್ವದ ಲಾಭವನ್ನು ಆದಷ್ಟು ಹೆಚ್ಚು ಪಡೆಯಲು ಸಹಾಯವಾಗುತ್ತದೆ.

ಶ್ರೀರಾಮ ಜಯ ರಾಮ ಜಯ ಜಯ ರಾಮ

**ಶ್ರೀರಾಮನವಮಿಯನ್ನು ಆಚರಿಸುವ ಪದ್ಧತಿ:** ಅನೇಕ ರಾಮ ಮಂದಿರಗಳಲ್ಲಿ ಚೈತ್ರ ಶುಕ್ಲ ಪ್ರತಿಪದೆಯಿಂದ ಒಂಭತ್ತು ದಿನಗಳ ಕಾಲ ಈ ಉತ್ಸವವು ನಡೆಯುತ್ತದೆ. ರಾಮಾಯಣದ ಪಾರಾಯಣ, ಹರಿಕಥೆ ಮತ್ತು ರಾಮನ ಮೂರ್ತಿಗೆ ವಿವಿಧ ಶೃಂಗಾರ ಮುಂತಾದವುಗಳೊಂದಿಗೆ ಈ ಉತ್ಸವವನ್ನು ಆಚರಿಸುತ್ತಾರೆ. ನವಮಿಯಂದು ಮಧ್ಯಾಹ್ನ ರಾಮಜನ್ಮದ ಕೀರ್ತನೆಯಾಗುತ್ತದೆ. ಮಧ್ಯಾಹ್ನ ಕುಂಚಿಗೆ ಹಾಕಿದ ತೆಂಗಿನಕಾಯಿಯನ್ನು ತೊಟ್ಟಿಲಿನಲ್ಲಿಟ್ಟು ತೂಗುತ್ತಾರೆ. ಭಕ್ತರು ಅದರ ಮೇಲೆ, ಗುಲಾಲು ಮತ್ತು ಹೂವುಗಳನ್ನು ಅರ್ಪಿಸುತ್ತಾರೆ.' (ಕೆಲವು ಕಡೆಗಳಲ್ಲಿ ತೆಂಗಿನ ಕಾಯಿಯ ಬದಲು ಶ್ರೀರಾಮನ ಮೂರ್ತಿಯನ್ನು ತೊಟ್ಟಿಲಿನಲ್ಲಿ ಇಡುತ್ತಾರೆ.) ಈ ಸಂದರ್ಭದಲ್ಲಿ ಶ್ರೀರಾಮನ ಜನ್ಮದ ಗೀತೆಯನ್ನು ಹೇಳಲಾಗುತ್ತದೆ. ಅದರ ನಂತರ ಶ್ರೀರಾಮನ ಮೂರ್ತಿಯನ್ನು ಪೂಜಿಸುತ್ತಾರೆ ಮತ್ತು ಪ್ರಸಾದವೆಂದು ಶುಂಠಿಚೂರ್ಣವನ್ನು ಕೊಡುತ್ತಾರೆ. ಕೆಲವು ಕಡೆಗಳಲ್ಲಿ ಶುಂಠಿಚೂರ್ಣದೊಂದಿಗೆ ಮಹಾಪ್ರಸಾದವನ್ನೂ ನೀಡುತ್ತಾರೆ.



**ಶ್ರೀರಾಮನವಮಿಯ ಮಹತ್ವ:** ತ್ರೇತಾಯುಗದಲ್ಲಿ ರಾಮನ ಜನ್ಮವಾದಾಗ ಕಾರ್ಯನಿರತವಾಗಿದ್ದ ಶ್ರೀವಿಷ್ಣುವಿನ ಸಂಕಲ್ಪ, ತ್ರೇತಾಯುಗದಲ್ಲಿನ ಅಯೋಧ್ಯಾವಾಸಿಗಳ ಭಕ್ತಿಭಾವ ಮತ್ತು ಪೃಥ್ವಿಯಲ್ಲಿನ ಸಾತ್ತ್ವಿಕ ವಾತಾವರಣದಿಂದಾಗಿ ಪ್ರಭು ಶ್ರೀರಾಮನ ಜನ್ಮದಿಂದ ಶೇ. 100 ರಷ್ಟು ಪರಿಣಾಮವಾಗಿತ್ತು. ಅನಂತರ ಪ್ರತಿವರ್ಷ ಬರುವಂತಹ ಚೈತ್ರ ಶುಕ್ಲ ನವಮಿಗೆ ಬ್ರಹ್ಮಾಂಡದಲ್ಲಿನ ವಾತಾವರಣದಲ್ಲಿ ರಾಮತತ್ತ್ವವು ಪ್ರಕ್ಷೇಪಿಸಿ ವಾತಾವರಣವನ್ನು ಸಾತ್ತ್ವಿಕ ಮತ್ತು ಚೈತನ್ಯಮಯವನ್ನಾಗಿಸಲು ವಿಷ್ಣುಲೋಕದಿಂದ ಶ್ರೀರಾಮತತ್ತ್ವಯುಕ್ತ ವಿಷ್ಣುತತ್ತ್ವವು ಭೂಲೋಕದ ದಿಕ್ಕಿನತ್ತ ಪ್ರಕ್ಷೇಪಿತವಾಗುತ್ತದೆ ಮತ್ತು ಆ ದಿನ ಶ್ರೀರಾಮನ ಅಂಶಾತ್ಮಕ ಜನ್ಮವಾಗುತ್ತದೆ.

ಇದರ ಪರಿಣಾಮ ಇಡೀ ವರ್ಷವಿದ್ದು ಬ್ರಹ್ಮಾಂಡದಲ್ಲಿ ರಾಮ ತತ್ತ್ವಯುಕ್ತ ಸಾತ್ತ್ವಿಕತೆ ಮತ್ತು ಚೈತನ್ಯದ ಪ್ರಕ್ಷೇಪಣೆಯಾಗುತ್ತದೆ.

ರಾಮ ತತ್ತ್ವಯುಕ್ತ ಸಾತ್ತ್ವಿಕತೆ ಮತ್ತು ಚೈತನ್ಯವನ್ನು ಬ್ರಹ್ಮಾಂಡದಲ್ಲಿನ ಪ್ರತಿಯೊಂದು ಸಜೀವ ಮತ್ತು ನಿರ್ಜೀವ ವಸ್ತುಗಳು ಗ್ರಹಿಸಿಕೊಳ್ಳುತ್ತವೆ ಮತ್ತು ಅದರಿಂದ ಅವುಗಳಿಗೆ ತಮ್ಮ ಕಾರ್ಯವನ್ನು ಒಳ್ಳೆಯ ರೀತಿಯಿಂದ ಮಾಡಲು ಸಾಧ್ಯವಾಗುತ್ತದೆ.

**ರಾಮಭಕ್ತರ ಮಹತ್ವ :** ಶ್ರೀರಾಮನಂತೂ ಶ್ರೇಷ್ಠ ಮತ್ತು ಪೂಜನೀಯನಾಗಿದ್ದನು, ಅಲ್ಲದೆ ಅವನ ಭಕ್ತರೂ ಅಷ್ಟೇ ವಂದನೀಯರಾಗಿದ್ದರು. ಕಲಿಯುಗದಲ್ಲಿ ಶ್ರೀರಾಮನು ಪುನಃ ಅವತಾರ ತಾಳಬಹುದು. ಆದರೆ ಶ್ರೀರಾಮನ ಸೀಮಾತೀತ ಭಕ್ತಿಯನ್ನು ಮಾಡುವಂತಹ ಉಚ್ಚ ಮಟ್ಟದ ಭಕ್ತರು ಸಿಗುವುದು ಕಠಿಣವಾಗಿದೆ. ಸಾಧಕರು ಶ್ರೀರಾಮನ ಭಕ್ತರ ಗುಣಗಳನ್ನು ಅಂಗೀಕರಿಸಿ ಅದಕ್ಕನುಸಾರ ಸಾಧನೆ ಮಾಡಿದರೆ ಅವರ ಮೇಲೆ ಗುರುರೂಪೀ ಶ್ರೀರಾಮನ ಕೃಪೆಯಾಗಿ ಅವರಿಗೆ ಅಂತರ್ಬಾಹ್ಯ ಕ್ಷಾತ್ರಧರ್ಮ ಹೋರಾಟವನ್ನು ಯಶಸ್ವಿಯಾಗಿ ನಡೆಸಲು ಆಗುವುದು ಮತ್ತು ಅವರಲ್ಲಿ ಅಂತರ್ಬಾಹ್ಯ ರಾಮರಾಜ್ಯವು ಖಂಡಿತವಾಗಿಯೂ ಸ್ಥಾಪನೆಯಾಗುವುದು.

# ಕುಟುಂಬ ರಾಜಕೀಯ ವಿರುದ್ಧ ಮಾತನಾಡಿದ್ದೆ ತಪ್ಪಾಯಿತಾ?

## ಬಸನಗೌಡ ಪಾಟೀಲ್ ಯತ್ನಾಳ ಉಚ್ಚಾಟನೆ ಖಂಡಿಸಿ ಏ. 7 ರಂದು ಬೃಹತ್ ಪ್ರತಿಭಟನೆ

• **ಉದಯವಾಹಿನಿ, ಮುದ್ದೇಬಿಹಾಳ**

ಬಿಜೆಪಿ ಪಕ್ಷದ ಶಾಸಕ ಮಾಜಿ ಸಚಿವ ಬಸನಗೌಡ ಪಾಟೀಲ್ ಯತ್ನಾಳ ಅವರನ್ನು ಕೇಂದ್ರ ಬಿಜೆಪಿ ವರಿಷ್ಠರು ಪಕ್ಷದಿಂದ 6 ವರ್ಷ ಉಚ್ಚಾಟನೆ ಮಾಡಿದ್ದು ತಪ್ಪು ಇದನ್ನು ಖಂಡಿಸಿ ಏಪ್ರಿಲ್ 7 ಸೋಮವಾರ ಮುದ್ದೇಬಿಹಾಳ ಪಟ್ಟಣದಲ್ಲಿ ಪಂಚಮಸಾಲಿ ಸಮಾಜದಿಂದ ಬೃಹತ್ ಪ್ರತಿಭಟನಾ ರ್‍ಯಾಲಿ ಹಮ್ಮಿಕೊಳ್ಳಲಾಗಿದೆ ಈ ಪ್ರತಿಭಟನೆಯಲ್ಲಿ ಸಮಾಜದ ಭಾಂದವರು ತಾಲ್ಲೂಕಿನ ವಿವಿಧ ಗ್ರಾಮಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಪಂಚಮಸಾಲಿ ಸಮಾಜದ ತಾಲ್ಲೂಕು ಅಧ್ಯಕ್ಷ ಅಮರೇಶ ಗೂಳಿ ಕರೆ ನೀಡಿದರು ಪಟ್ಟಣದ ಎಪಿಎಂಸಿಯಲ್ಲಿ ಬಸಲಿಂಗಪ್ಪ ರಕ್ಕಸಗಿ ಅಡತಿ ಅಂಗಡಿಯಲ್ಲಿ ಸಮಾಜದ ವತಿಯಿಂದ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದರು.

ಈ ವೇಳೆ ಮಾತನಾಡಿದ ಸಮಾಜದ ಮುಖಂಡರಾದ ಅರವಿಂದ ಕೊಪ್ಪ ಪುರಸಭೆ ಸದಸ್ಯ ವಿರೇಶ ಹಡಲಗೇರಿ ಕೇಂದ್ರ ಬಿಜೆಪಿ ಸರಕಾರ, ಕೇಂದ್ರ ಬಿಜೆಪಿ ನಾಯಕರು ಯಾವಾಗಲೂ ಕುಟುಂಬ ರಾಜಕೀಯದ ವಿರುದ್ಧ


ಉದಯವಾಹಿನಿ ಚಿತ್ರ

ಮಾತನಾಡುತ್ತಾರೆ, ಆ ವಿಷಯವಾಗಿ ಹೋರಾಟ ಮಾಡುತ್ತಾರೆ ಅದೇ ಕುಟುಂಬ ರಾಜಕೀಯ ವಿಷಯವಾಗಿ ರಾಜ್ಯದಲ್ಲಿ ಯಡಿಯೂರಪ್ಪ, ಅವರ ಮಗನ ಕುಟುಂಬ ರಾಜಕೀಯ ಅವರ ಭ್ರಷ್ಟಾಚಾರ ಕುರಿತು ಹೋರಾಟ ಮಾಡಿದ ಬಸನಗೌಡ ಪಾಟೀಲ್ ಯತ್ನಾಳರನ್ನು ಪಕ್ಷ ಉಚ್ಚಾಟನೆ ಮಾಡಿದೆ ಕುಟುಂಬ ರಾಜಕೀಯ ವಿರುದ್ಧ ಮಾತನಾಡಿದ್ದೇ ತಪ್ಪಾಯಿತಾ? ಈ ಬಗ್ಗೆ ಕೇಂದ್ರ ಬಿಜೆಪಿ ನಾಯಕರು ಸ್ಪಷ್ಟಪಡಿಸ ಬೇಕು ಯತ್ನಾಳರ ಉಚ್ಚಾಟನೆಯನ್ನು ಹಿಂದೂಪರ

**ಏನೆಲ್ಲಾ ತಪ್ಪಾಗಿದೆ ಪರೀಶಿಲಿಸ ಬೇಕು**

ಸಂಘಟನೆಗಳು ಅಭಿವೃದ್ಧಿ ಪರ ಚಿಂತಕರು ಖಂಡನೆ ಮಾಡಿದ್ದಾರೆ ಕೇಂದ್ರ ಬಿಜೆಪಿ ನಾಯಕರು ತಪ್ಪನ್ನು ಸರಿ ಪಡಿಸಿಕೊಂಡು ಯತ್ನಾಳರನ್ನು ಗೌರವದಿಂದ ಮರಳಿ ಬಿಜೆಪಿ ಪಕ್ಷಕ್ಕೆ ಸೇರಿಸಿಕೊಂಡು ಉನ್ನತ ಸ್ಥಾನ ನೀಡಬೇಕು ಇಲ್ಲದ ಪಕ್ಷದಲ್ಲಿ ರಾಜ್ಯದಲ್ಲಿ ಬಿಜೆಪಿಗೆ ತಕ್ಕ ಪಾಠ ಕಲಿಸಬೇಕಾಗುತ್ತದೆ ಎಂದರು.

ಪಂಚಮಸಾಲಿ 2ಎ ಮೀಸಲಾತಿ ಹೋರಾಟಗಾರ ಕಸಪಾ ಅಧ್ಯಕ್ಷ ಕಾಮರಾಜ ಬಿರಾದಾರ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ತಾಲ್ಲೂಕ ಅಧ್ಯಕ್ಷ ಸಮಾಜದ ಹಿರಿಯ ಮುಖಂಡ ಶಿವಶಂಕರಗೌಡ ಹಿರೇಗೌಡರ ಮಾತನಾಡಿ ಬಸನಗೌಡ ಪಾಟೀಲ್ ಯತ್ನಾಳರನ್ನು ಕೈ ಬಿಟ್ಟರೆ ರಾಜ್ಯದಲ್ಲಿ ಬಿಜೆಪಿ ಪಕ್ಷಕ್ಕೆ ಹಿನ್ನಡೆಯಾಗುತ್ತದೆ ಅದರ ಲಾಭವನ್ನು ಅನ್ಯ ಪಕ್ಷಗಳು ಪಡೆಯುತ್ತವೆ ಕೇಂದ್ರ ಬಿಜೆಪಿ ನಾಯಕರು ಇತ್ತ ಲಕ್ಷ್ಯ ವಹಿಸಬೇಕು ರಾಜ್ಯದಲ್ಲಿ ಬಿಜೆಪಿ ನಾಯಕರಿಂದ ಏನೆಲ್ಲಾ ತಪ್ಪಾಗಿದೆ ಎಂದು ಪರೀಶಿಲಿಸಬೇಕು ಬಸನಗೌಡರು ಅವರು ರಾಷ್ಟ್ರಮಟ್ಟದ ಹಿಂದೂ ನಾಯಕರು ಅವರನ್ನು ಮರಳಿ ಬಿಜೆಪಿ ಪಕ್ಷಕ್ಕೆ ಬರಮಾಡಿಕೊಳ್ಳಬೇಕು ಎಂದ ಅವರು ಬಸನಗೌಡರು 2ಎ ಮೀಸಲಾತಿ ಕುರುಬ ಸಮಾಜದ ಎಸ್ ಟಿ ಮೀಸಲಾತಿ ಸೇರಿದಂತೆ ಅನೇಕ ಹೋರಾಟದಲ್ಲಿ ಪಾಲ್ಗೊಂಡು ಬೆಂಬಲ ನೀಡಿದ್ದಾರೆ.

**ಸೋಮವಾರ ಪ್ರತಿಭಟನೆ**

**ಹೀಗಾಗಿ ಸೋಮವಾರ ನಡೆಯುವ ಹೋರಾಟದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಎಲ್ಲಾ ನಾಗರಿಕರು ಯತ್ನಾಳರ ಬೆಂಬಲಿಗ ಅಭಿಮಾನಿಗಳು ಪಾಲ್ಗೊಳ್ಳಬೇಕು. ಸೋಮವಾರ ಬೆಳಗ್ಗೆ 10 ಪಟ್ಟಣದ ಬನಶಂಕರಿ ದೇವಾಲಯದಿಂದ ಬೃಹತ್ ಆರಂಭಿಸಿ ಗ್ರಾಮದೇವತೆ ಕಟ್ಟೆಯ ಮಾರ್ಗವಾಗಿ ಬಸವೇಶ್ವರ ವೃತ್ತದಲ್ಲಿ ಪ್ರತಿಭಟನೆ ರ್‍ಯಾಲಿ ಉದ್ದೇಶಿಸಿ ಸಮಾಜದ ಮುಖಂಡರಿಂದ ಹಿಂದೂಪರ ಸಂಘಟನೆಯವರಿಂದ ಮಾತನಾಡಲಿದ್ದಾರೆ ಅಲ್ಲಿಂದ ಹುಡ್ಕೊ ಗೇಟ್ ಬಳಿಯ ಕಿತ್ತೂರ ರಾಣಿ ಚೆನ್ನಮ್ಮ ವೃತ್ತದವರೆ ಪ್ರತಿಭಟನಾ ಮೆರವಣಿಗೆ ಮಾಡಲಾಗುತ್ತದೆ.**

ಪತ್ರಿಕಾಗೋಷ್ಠಿಯಲ್ಲಿ ಕಿತ್ತೂರ ರಾಣಿ ಚೆನ್ನಮ್ಮ ಯುವ ಘಟಕದ ತಾಲ್ಲೂಕ ಅಧ್ಯಕ್ಷ ರವಿ ಕಮತ್ ಪಂಚಮಸಾಲಿ ಸಮಾಜದ ಮುಖಂಡರಾದ ಬಸಲಿಂಗಪ್ಪ ರಕ್ಕಸಗಿ, ಸಂಗಮೇಶ ಹಾರಿವಾಳ, ಶರಣು ಸಾಲವಾಡಗಿ, ಅನಿಲ್ ಪಾಟೀಲ್, ವಿನೋದ ವಾಂಗಿ, ವಿರೇಶ ಬಲದಿನ್ನಿ, ಸಚಿನ್ ಚಿನ್ನಾಪೂರ, ಶೆಟ್ಟಪ್ಪ ರಕ್ಕಸಗಿ ಅಮರೇಶ ಕೋಳೂರ ಭಾಗವಹಿಸಿದ್ದರು.

## ಒಲ್ಲೈಕೆ ರಾಜಕಾರಣದ ವಿರುದ್ಧ ಬಿಎಸ್ಪಿ ಹೋರಾಟ

• **ಉದಯವಾಹಿನಿ, ಕಡೂರು**

ಬಿಜೆಪಿ-ಕಾಂಗ್ರೆಸ್ ಎರಡೂ ಪಕ್ಷಗಳು ಹೊಂದಾಣಿಕೆ ನೀತಿಯಿಂದ ಜನರ ಕಣ್ಣಿಗೆ ಮಣ್ಣೆರಚುತ್ತಿವೆ. ಈ ಓಲೈಕೆ ರಾಜಕಾರಣದ ವಿರುದ್ಧ ಹೋರಾಡಿ ಜನರಿಗೆ ನ್ಯಾಯ ಒದಗಿಸುವ ಧೈಯ ಬಹುಜನ ಸಮಾಜ ಪಕ್ಷದ್ದು ಎಂದು ಪಕ್ಷದ ರಾಜ್ಯ ಉಸ್ತುವಾರಿ ಗಂಗಾಧರ ಬಹುಜನ ಹೇಳಿದರು. ಕಡೂರಿನಲ್ಲಿ ಗುರುವಾರ ಬಿಎಸ್‌ಪಿ ಪಕ್ಷದ ತಾಲ್ಲೂಕು ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿದರು.

ಸರ್ಕಾರ ಉಳ್ಳವರ ಪರವಾಗಿ ನೀತಿಗಳನ್ನು ರೂಪಿಸುತ್ತಿವೆ. ದುಡಿಯುವ ಕೈಗಳಿಗೆ ಉದ್ಯೋಗವಿಲ್ಲ. ಬೆಲೆಯೇರಿಕೆಯಿಂದ ಜನ ತತ್ತರಿಸಿದ್ದಾರೆ. ಬಹುಜನ ಸಮಾಜ ಪಕ್ಷದ ಆಶಯವೇ ಪ್ರಜಾಪ್ರಭುತ್ವ ವ್ಯವಸ್ಥೆ ಬಗ್ಗೆ ಜನಸಾಮಾನ್ಯರಲ್ಲಿ ಅರಿವು ಮೂಡಿಸುವುದು. ಈಗಿರುವ ರಾಜಕೀಯ ಪಕ್ಷಗಳಿಂದ ಸಾಮಾಜಿಕ ನ್ಯಾಯ ಒದಗಿಸಲು ಸಾಧ್ಯವಿಲ್ಲ. ಪರ್ಯಾಯ ಪಕ್ಷವಾಗಿ ಬಿಎಸ್‌ಪಿ ದೇಶದ ಆಶಾಕಿರಣವಾಗಿದೆ ಎಂದರು. ರಾಜ್ಯ ಕಾರ್ಯದರ್ಶಿ ಕೆ.ಟಿ.ರಾಧಾಕೃಷ್ಣ ಮಾತನಾಡಿ, ಸಂವಿಧಾನವನ್ನು ಆಳುವ ಪಕ್ಷಗಳು


ಉದಯವಾಹಿನಿ ಚಿತ್ರ

ದುರ್ಬಳಕೆ ಮಾಡಿಕೊಳ್ಳುತ್ತಿವೆ. ಸಾಮಾಜಿಕ ಆರ್ಥಿಕ ಪರಿಸ್ಥಿತಿ ಆಧಾರದಲ್ಲಿ ಮೀಸಲಾತಿ, ಒಳ ಮೀಸಲಾತಿ ಜಾರಿಯಾಗಬೇಕು ಎಂಬ ಧ್ಯೆಯದೊಂದಿಗೆ ಬಿಎಸ್‌ಪಿ' ಕಾರ್ಯನಿರ್ವಹಿಸುತ್ತಿದೆ ಎಂದರು.

ಪಕ್ಷದ ತಾಲ್ಲೂಕು ಘಟಕದ ಅಧ್ಯಕ್ಷರಾಗಿ ಎನ್. ಜಿ. ಕೊಪ್ಪಲು ಚಂದ್ರಶೇಖರನಾಯ್ಕ, ತಾಲ್ಲೂಕು ಸಂಚಾಲಕರಾಗಿ ಕುಮಾರಸ್ವಾಮಿ ಅವರನ್ನು ಆಯ್ಕೆ ಮಾಡಲಾಯಿತು. ರಾಜ್ಯ ಘಟಕದ ಉಪಾಧ್ಯಕ್ಷ ಝಾಕೀರ್ ಹುಸೇನ್, ಹಾಸನ ಉಸ್ತುವಾರಿ ಕೆ.ಪಿ ಮಲ್ಲಯ್ಯ, ರಾಜ್ಯ ಘಟಕದ ಕಾರ್ಯದರ್ಶಿ ಸುಧಾ, ಜಿಲ್ಲಾ ಉಪಾಧ್ಯಕ್ಷೆ ಮಂಜುಳಾ, ಜಿಲ್ಲಾ ಉಪಾಧ್ಯಕ್ಷ ಜಗದೀಶ್, ಜಿಲ್ಲಾ ಕಾರ್ಯದರ್ಶಿ ಪಿ.ಎಂ. ನಾರಾಯಣ ಮೂರ್ತಿ, ಬಿದರಿಕೆರೆ ಶ್ರೀನಿವಾಸ್, ಬಿ.ಈಶ್ವರಪ್ಪ, ಗಂಗಾಧರ್, ವೇಲಾಯುಧನ್ ಇದ್ದರು.

## ಯತ್ನಾಳ ಉಚ್ಚಾಟನೆ ಖಂಡಿಸಿ ಪ್ರತಿಭಟನೆ ರ್‍ಯಾಲಿ

• **ಉದಯವಾಹಿನಿ, ಕಾರಟಗಿ**

ನಗರದಲ್ಲಿ, ವಿವಿಧ ಹಿಂದೂ ಸಂಘಟನೆಗಳ ಮತ್ತು ತಾಲ್ಲೂಕ್ ಪಂಚಮಸಾಲಿ ಸಮಾಜ ಇವರ ನೇತೃತ್ವದಲ್ಲಿ, ಹಿಂದೂ ಹುಲಿ ಕರ್ನಾಟಕ ಹೃದಯ ಸಾಮ್ರಾಟ ಜನಪ್ರಿಯ ಶಾಸಕರಾದ ಬಸನಗೌಡ ಪಾಟೀಲ್ ಯತ್ನಾಳ್ ಅವರ ಉಚ್ಚಾಟನೆ ಕ್ರಮವನ್ನು ಖಂಡಿಸಿ, ಮತ್ತು ಅವರ ಉಚ್ಚಾಟನೆ ಕ್ರಮವನ್ನು ರಾಷ್ಟ್ರೀಯ ನಾಯಕರು ಮರುಪರಿಶೀಲನೆ ಮಾಡಿ ಪಕ್ಷಕ್ಕೆ ಆದಷ್ಟು ಬೇಗನೆ ವಾಪಸ್ ಕರೆದುಕೊಳ್ಳಬೇಕೆಂದು ಒತ್ತಾಯಿಸಿ, ಬೃಹತ್ ಪ್ರತಿಭಟನೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಹಿಂದೂ ಸಮಾಜದ ಮುಖಂಡರಾದ, ಪಂಪನಗೌಡ ಜಂತಗಲ್, ಬಸವರಾಜ್ ಎತ್ತಿನಮನಿ, ಅಮರೀಶ್ ಕುಳಗಿ, ಕಳಕನ ಗೌಡ ಪಾಟೀಲ್ ಕಲ್ಲೂರ್, ರವಿಕುಮಾರ್ ತಿಮ್ಮಾಪುರ್ ಪಂಪನಗೌಡ ಕೋಲ್ಕಾರ್ ವಿನೋದ್ ಕುಳಗಿ, ಮಲ್ಲನಗೌಡ ಮಾಲಿಪಾಟೀಲ್ ಪರಮೇಶಪ್ಪ ಕೋಲ್ಕಾರ್, ಅನೇಕ ಹಿಂದೂ ಮುಖಂಡರು ಮಾತ ನಾಡಿದರು, ಮಾರ್ಕಂಡೇಶ್ ಮರಳಿ, ಬಸವರಾಜ್, ಪಾಟೀಲ್, ಸೋಮಶೇಖರ ಗೌಡ ಮುಷ್ಟೂರ್, ಶ್ರೀಕಾಂತ್


ಉದಯವಾಹಿನಿ ಚಿತ್ರ

ಚನ್ನಬಸವ ಮರಳಿ, ದುರ್ಗೇಶ್ ಹೊಸ್ಕೇರ ಬಸರಾಜ್ ಶೆಟ್ಟರ್ ಪ್ರಭುರಾಜ್ ಬೂದಿ, ವಿರುಪಾಕ್ಷಪ್ಪ ಕಟಾಮ್ಳಿ. ಬಸವರಾಜ ಕಡೆಮನಿ ಶಿವಶರಣಪ್ಪ ಶಿವಪೂಜಿ, ಶಿವಶಕ್ತಿ ಬಸವರಾಜ್, ಶರಣಪ್ಪ ರಮೇಶ್ ಅಯೋಧ್ಯ, ಶರಣೆಗೌಡ ಯುವ ಬ್ರಿಗೇಡ್, ಸಂಗನಗೌಡ,ತೆಂಗಿನಕಾಯಿ ಬಸನಗೌಡ,ಗುಂಡಪ್ಪ ಕುಳಗಿ, ವಿರುಪಾಕ್ಷಿ ತಿಮ್ಮಾಪುರ, ವೀರನಗೌಡ ಪಟೇಲ್ ವಿರುಪಾಕ್ಷಿ ಜಂತಗಲ್, ಬಸವರಾಜ ಕುರ್ತುಕೋಟಿ ಬದ್ರ ಗೌಡ ಪನ್ನಾಪುರ, ಪರನ್ ಗೌಡ ಸಿದ್ದಾಪುರ ರವಿಕುಮಾರ್ ಗುಂಡೂರ್, ವಸಂತ್ ಸಿಂಗ್, ಹೇರೂರು ಮೋದಿ ಇರುಪ್ಪನಗೌಡ ಕಂಡ್ರಿ,ಮೇಟಿ ಸಿದ್ದನಗೌಡ ವೀರನಗೌಡ ಪಾಟೀಲ್, ಶಿವಕುಮಾರ್ ಗೋನಾಳ್, ಆನಂದ್, ಚನ್ನಬಸವ ಶೆಟ್ಟರ್, ಪ್ರಭುಸ್ವಾಮಿ ಹಿರೇಮಠ, ಶರಣಬಸವ ನಾಯಕ್, ರಾಘು ಭೋವಿ,ಮಣಿ, ಮಲ್ಲಿಕಾರ್ಜುನ್ ಚಿಕ್ ಜಂತಕಲ್, ಶರಣಪ್ಪ ಹೆಬ್ಬಾಳ ನರಸಾಪುರ್, ಅಯ್ಯನ್ ಗೌಡ ನರಸಾಪುರ್, ಹೊಸಮನಿ ಶರಣಪ್ಪ ಎರಡೋಣ, ವೀರೇಶ್ ಬಜಾರ್, ವೀರೇಶ್ ಜಂತಕಲ್, ಇನ್ನು ಮುಂತಾದ ಅನೇಕ ಎಂದು ಕಾರ್ಯಕರ್ತರು ಸರ್ವ ಸಮಾಜದ ಬಾಂಧವರು ಯತ್ನಾಳ್ ಅಭಿಮಾನಿಗಳು, ಮಹಿಳೆಯರು ಭಾಗವಹಿಸಿದ್ದರು

## ಎಸ್‌ಎಸ್‌ಎಲ್‌ಸಿ ಪರೀಕ್ಷೆ: ಶೇ 100ರಷ್ಟು ಹಾಜರಾತಿ ಇರಲಿ

• **ಉದಯವಾಹಿನಿ, ಚಿತ್ರದುರ್ಗ**

ಮುಂಬರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆ-2ರಲ್ಲಿ ಶೇ 100ರಷ್ಟು ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗುವಂತೆ ಕ್ರಿಯಾಯೋಜನೆ ರೂಪಿಸಬೇಕು. ಹಾಜರಾತಿಯನ್ನು ಸಮರ್ಪಕವಾಗಿ ನಿರ್ವಹಣೆ ಮಾಡಬೇಕು ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಕೆ.ನಾಗಣ್ಣಗೌಡ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾ ಬಾಲಭವನ ಸಭಾಂಗಣದಲ್ಲಿ ಗುರುವಾರ ಸಮಾಜ ಕಲ್ಯಾಣ ಇಲಾಖೆ ಮತ್ತು ಶಿಕ್ಷಣ ಇಲಾಖೆಯ ಅಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು. ಎಸ್‌ಎಸ್‌ಎಲ್‌ಸಿ ಪರೀಕ್ಷೆ- 1ರಲ್ಲಿ ಹೆಚ್ಚು ವಿದ್ಯಾರ್ಥಿಗಳು ಗೈರಾಗಿದ್ದಾರೆ. ಪರೀಕ್ಷೆ ಉತ್ತೀರ್ಣರಾಗದಿದ್ದರೆ ಮುಂದಿನ ಆ ಮಕ್ಕಳ ಭವಿಷ್ಯದ ಗತಿ ಏನು? ಶಾಲೆಯಿಂದ ಹೊರಗುಳಿದರೆ ಬಾಲ್ಯವಿವಾಹ, ಬಾಲಕಾರ್ಮಿಕ ಪದ್ಧತಿ ಸೇರಿ ಹಲವಾರು ಸಮಸ್ಯೆಗಳು ಎದುರಾಗಲಿವೆ. ಹಾಗಾಗಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ವಿದ್ಯಾರ್ಥಿಗಳು ಗೈರಾಗದಂತೆ ಅಗತ್ಯ ಕ್ರಮವಹಿಸಲು ಸಂಬಂಧಪಟ್ಟ ಶಾಲೆಯ ಮುಖ್ಯ ಶಿಕ್ಷಕರಿಗೆ ಜವಾಬ್ದಾರಿಗಳನ್ನು ನಿಗದಿಪಡಿಸಬೇಕು. ಶೇ 100ರಷ್ಟು ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗುವಂತೆ ಕ್ರಮವಹಿಸಬೇಕು' ಎಂದು ಸೂಚಿಸಿದರು.

ಗೈರಾದ ವಿದ್ಯಾರ್ಥಿಗಳಿಗೆ ಯಾವುದೇ ಕಾರಣಕ್ಕೂ ಹಾಜರಾತಿ ಕೊಡಬಾರದು. ಇದರಿಂದ ಶಾಲೆಯಿಂದ ಹೊರಗುಳಿದ ವಿದ್ಯಾರ್ಥಿಗಳು ಮಾಹಿತಿ


ಉದಯವಾಹಿನಿ ಚಿತ್ರ

ಸಮರ್ಪಕವಾಗಿ ಸಿಗುವುದಿಲ್ಲ. ಈ ಕುರಿತು ಕಾಲಕಾಲಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಜರಾತಿ ಪರಿಶೀಲನೆ ನಡೆಸಿ, ಸಮರ್ಪಕವಾಗಿ ನಿರ್ವಹಣೆ ಮಾಡಬೇಕು' ಎಂದು ಸೂಚನೆ ನೀಡಿದರು.

'ಸಮಾಜ ಕಲ್ಯಾಣ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಭಾಷಾ ಕಲಿಕೆಯ ಸಮಸ್ಯೆ ಇದೆ. ಹಾಗಾಗಿ 3ರಿಂದ 6 ತಿಂಗಳವರೆಗೆ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಸ್ಪೋಕನ್ ಇಂಗ್ಲಿಷ್ ಕೋರ್ಸ್ ಆರಂಭಿಸಿ, ಸಂಪನ್ಮೂಲ ವ್ಯಕ್ತಿಗಳಿಂದ ಉತ್ತಮ ತರಬೇತಿ ನೀಡಬೇಕು ಎಂದು ಸೂಚಿಸಿದರು.

'ಮಕ್ಕಳ ಸುರಕ್ಷತೆ ದೃಷ್ಟಿಯಿಂದ ಜಿಲ್ಲೆಯ ಎಲ್ಲಾ ಶಾಲಾ- ಕಾಲೇಜುಗಳಲ್ಲಿ ಮಕ್ಕಳ ರಕ್ಷಣಾ ನೀತಿಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬೇಕು. ಎಲ್ಲಾ ಶಾಲೆಗಳು ಹಾಗೂ ಪದವಿಪೂರ್ವ ಕಾಲೇಜುಗಳಲ್ಲಿ ಕಡ್ಡಾಯವಾಗಿ ಮಕ್ಕಳ ಸಹಾಯವಾಣಿ 1098, ಪೊಲೀಸ್ ತುರ್ತು ಸೇವೆ 112 ಸಂಖ್ಯೆಯನ್ನು ಬರೆಸಬೇಕು. ಶಾಲೆ, ವಸತಿ ನಿಲಯ, ವಿದ್ಯಾರ್ಥಿ ನಿಲಯಗಳಲ್ಲಿ ಉತ್ತಮ ಗುಣಮಟ್ಟದ ಆಹಾರ ಹಾಗೂ ಶುದ್ಧ ಕುಡಿಯುವ ನೀರು ಪೂರೈಸಬೇಕು ಎಂದು ಸೂಚಿಸಿದರು.

ಜಿಲ್ಲಾ ಪಂಚಾಯಿತಿ ಸಿಇಒ ಎಸ್.ಜೆ.ಸೋಮಶೇಖರ್ ಮಾತನಾಡಿ, ಶಾಲೆಯಿಂದ ಹೊರಗುಳಿದ ವಿದ್ಯಾರ್ಥಿಗಳನ್ನು ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ವಿಶೇಷ ಆಂದೋಲನಾ ನಡೆಸಬೇಕು. ಮುಖ್ಯವಾಹಿನಿಗೆ ತರಲು ಅಗತ್ಯ ಕ್ರಮವಹಿಸಲಾಗುವುದು. ಗೈರು ಹಾಜರಾತಿಗೆ ಸಂಬಂಧಿಸಿದಂತೆ ಶಿಕ್ಷಣ ಇಲಾಖೆ ಅಧಿಕಾರಿಗಳ ತಂಡ ರಚಿಸಿ, ಪರಿಶೀಲನೆ ನಡೆಸಬೇಕು' ಎಂದರು. ಸಭೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ಭಾರತಿ ಆರ್ ಬಣಕಾರ್, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ.ಆರ್.ಮಂಜುನಾಥ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸಿ.ಸವಿತಾ, ದಿವಾಕರ್ ಇದ್ದರು.

## ಆಲ್ಲೂರಿನಲ್ಲಿ ಮಳೆ ಅಬ್ಬರ; ಮನೆಗೆ ನುಗ್ಗಿದ ನೀರು

• **ಉದಯವಾಹಿನಿ, ಆಲ್ಲೂರು**

ಪಟ್ಟಣ ವ್ಯಾಪ್ತಿಯಲ್ಲಿ ಗುರುವಾರ ಮಧ್ಯಾಹ್ನ ಒಂದು ಗಂಟೆ ಮಳೆ ಅರ್ಭಟಿಸಿದ್ದು, ಕಾಫಿ ಬೆಳೆಗಾರರಲ್ಲಿ ಹರ್ಷ ಮೂಡಿದೆ. 'ಈಗ ಮಳೆ ಬಂದಿರುವುದು ಕಾಫಿ ಕಾಯಿ ಕಟ್ಟಲು ಸಹಕಾರಿಯಾಗಿದೆ' ಎಂದು ಕಾಫಿ ಬೆಳೆಗಾರ ರವಿಕುಮಾರ್ ಎಚ್. ಎಲ್ ಹೇಳಿದರು. ಹೊಸಳ್ಳಿ ಗ್ರಾಮ, ಬನ್ನೂರು, ಯಲಗುಡಿಗೆ, ದೋಣಗುಡಿಗೆ ಮುಂತಾದ ಕಡೆಗಳಲ್ಲಿ ಉತ್ತಮ ಮಳೆಯಾಗಿದೆ. ಮಳೆಯಿಂದ ಪಟ್ಟಣದ ಪ್ರಾಥ ಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ನೀರು ನಿಂತು ಜನರು ತೊಂದರೆ ಅನುಭವಿಸಿದರು. ಆಸ್ಪತ್ರೆ ಎದುರಿನ ಚರಂಡಿಗೆ ಕಸ ಹಾಕಿರುವುದರಿಂದ, ಮಳೆ ನೀರು ನೇರವಾಗಿ ಆಸ್ಪತ್ರೆ ಆವರಣಕ್ಕೆ ನುಗ್ಗುತ್ತದೆ. ಇದರಿಂದ ಆಸ್ಪತ್ರೆಗೆ ಬರುವವರು, ಅಲ್ಲಿನ ಸಿಬ್ಬಂದಿ ತೊಂದರೆ ಅನುಭವಿಸುವಂತಾಗಿದೆ ಎಂದು ಸ್ಥಳೀಯರು ದೂರಿದರು.

ಕೆಲವೆಡೆ ಚರಂಡಿಗಳು ಕಟ್ಟಿಕೊಂಡಿದ್ದರಿಂದ


ಉದಯವಾಹಿನಿ ಚಿತ್ರ

ಮಳೆ ನೀರು ರಸ್ತೆ ಮೇಲೆ ಹರಿಯಿತು. ವಗರ್ ರಸ್ತೆ ವಾರ್ಡ್ ರಾಘವೇಂದ್ರ ಎಂಬುವರ ಮನೆಗೆ ಚರಂಡಿ ನೀರು ನುಗ್ಗಿ ತೊಂದರೆ ಅನುಭವಿಸಿದರು. ವಾರ್ಡ್ ನಿವಾಸಿ ಹರೀಶ್ ಮಾತನಾಡಿ, ಚರಂಡಿ ವ್ಯವಸ್ಥೆ ಇಲ್ಲದಿರುವುದರಿಂದ ಮಳೆ ಬಂದಾಗ ಅಕ್ಕಪಕ್ಕದ ಮನೆಗಳಿಗೆ ಚರಂಡಿ ನೀರು ನುಗ್ಗುತ್ತದೆ. ಈ ಬಗ್ಗೆ ಆಲ್ಲೂರು ಪಂಚಾಯಿತಿಗೆ ಸಾಕಷ್ಟು ಬಾರಿ ಮನವಿ ಸಲ್ಲಿಸಿದರೂ ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ದೂರಿದರು.

## ವಿದ್ಯುತ್ ಸ್ಪರ್ಶ
## ತಾಯಿ- ಮಗು ಸಾವು

• **ಉದಯವಾಹಿನಿ, ಮೊಳಕಾಲ್ಮುರು:**



ವಿದ್ಯುತ್ ಸ್ಪರ್ಶದಿಂದ ತಾಯಿ ಮತ್ತು ಮಗ ಮೃತ ಪಟ್ಟಿರುವ ಘಟನೆ ಗುರುವಾರ ಮಧ್ಯಾಹ್ನ ತಾಲ್ಲೂಕಿನ ತುಮಕೂರ್ಲಹಳ್ಳಿಯಲ್ಲಿ ನಡೆದಿದೆ. ಅದೇ ಗ್ರಾಮದ ಬೋರಮ್ಮ (25) ಹಾಗೂ ಮಗ ಪ್ರಣೀತ್ ಗೌಡ (5) ಮೃತರು.

ಮಧ್ಯಾಹ್ನ 2.45ರ ಸಮಯದಲ್ಲಿ ಬೋರಮ್ಮ ಮಗನನ್ನು ಎತ್ತಿಕೊಂಡು ಬಚ್ಚಲು ಮನೆಗೆ ಹೋಗುವಾಗ ಮೊದಲು ಪ್ರಣೀತ್ ಗೌಡನಿಗೆ ಆಕಸ್ಮಿಕವಾಗಿ ವಿದ್ಯುತ್ ತಂತಿ ಸ್ಪರ್ಶಿಸಿದ್ದು, ನಂತರ ತಾಯಿಗೂ ಸ್ಪರ್ಶವಾಗಿ ಇಬ್ಬರೂ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಸ್ಥಳಕ್ಕೆ ಡಿವೈಎಸ್‌ಪಿ ರಾಜಣ್ಣ ಮತ್ತು ಪಿಎಸ್‌ಐ ಜಿ. ಪಾಂಡುರಂಗಪ್ಪ ಭೇಟಿ ನೀಡಿದ್ದರು.

ಮೊಳಕಾಲ್ಮುರಿನ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## 1.13 ಕೋಟಿ ಮೌಲ್ಯದ ಚಿನ್ನಾಭರಣ ಕಳವು

• **ಉದಯವಾಹಿನಿ, ದಾವಣಗೆರೆ**

ಆಭರಣ ಖರೀದಿಯ ನೆಪದಲ್ಲಿ ಚಿನ್ನಾಭರಣ ಮಳಿಗೆಗೆ ಬಂದ ಗುಂಪೊಂದು ಸಿಬ್ಬಂದಿಯ ಗಮನ ಬೇರೆಡೆ ಸೆಳೆದು 1.13 ಕೋಟಿ ಮೌಲ್ಯದ 1 ಕೆ.ಜಿ 400 ಗ್ರಾಂ ಚಿನ್ನಾಭರಣವನ್ನು ಕಳವು ಮಾಡಿದ ಘಟನೆ ಮಂಡಿಪೇಟೆಯಲ್ಲಿ ನಡೆದಿದೆ. ಮಂಡಿಪೇಟೆಯ ರವಿ ಜ್ಯುವೆಲರಿ ಅಂಗಡಿಯಲ್ಲಿ ಮಾರ್ಚ್ 26ರಂದು ಈ ಘಟನೆ ನಡೆದಿದೆ. ಪರಿಶೀಲನೆಯ ವೇಳೆ ಚಿನ್ನಾಭರಣ ಕಡಿಮೆ ಇರುವುದನ್ನು ಗಮನಿಸಿದಾಗ ಕಳವು ನಡೆದಿರುವುದು ಖಚಿತವಾಗಿದೆ.

ಚಿನ್ನಾಭರಣ ಅಂಗಡಿಗೆ ಬುರ್ಖಾ ಧರಿಸಿದ ಐವರು ಮಹಿಳೆಯರು ಹಾಗೂ ಟೋಪಿ ಧರಿಸಿದ ವ್ಯಕ್ತಿಯೊಬ್ಬ ಮಾರ್ಚ್ 26ರಂದು ಮಧ್ಯಾಹ್ನ 1ಕ್ಕೆ ಬಂದಿದ್ದಾರೆ. ಅಂಗಡಿಯಲ್ಲಿದ್ದ ಐವರು ಸಿಬ್ಬಂದಿಯಲ್ಲಿ ಮೂವರು ಊಟಕ್ಕೆ ತೆರಳಿದ್ದರು. ಬೆಳ್ಳಿ ಲೋಟ, ಆಭರಣ ಖರೀದಿಗೆ ಬಂದಿದ್ದಾಗಿ ಪರಿಚಯಿಸಿಕೊಂಡ ಗುಂಪು, ಕೆಲ ಹೊತ್ತು ಕಾಲಾಹರಣ ಮಾಡಿ ಕಳವಿಗೆ ಹೊಂಚು ಹಾಕಿದೆ. ತೋರಿಸಿದ ಆಭರಣಗಳನ್ನು ಮಹಿಳೆಯರು ಒಪ್ಪದಿದ್ದಾಗ ಕೆಲಸಗಾರರು ಅವುಗಳನ್ನು ಸ್ವಸ್ಥಾನಕ್ಕೆ ಇಡುತ್ತಿದ್ದರು. ಈ ವೇಳೆ ಮಹಿಳೆಯೊಬ್ಬರು ಚಿನ್ನಾಭರಣದ ಪೆಟ್ಟಿಗೆಯೊಂದನ್ನು ಎತ್ತಿಕೊಂಡು ಬುರ್ಖಾದಲ್ಲಿ ಇಟ್ಟುಕೊಂಡಿದ್ದಾರೆ. ಅನುಮಾನ ಬಾರದಂತೆ ವರ್ತಿಸಿ ಹೊರನಡೆದಿದ್ದಾರೆ. ಈ ದೃಶ್ಯ ಸಿ.ಸಿ.ಟಿವಿಯಲ್ಲಿ ಸೆರೆಯಾಗಿದೆ. ವಾರಕ್ಕೊಮ್ಮೆ ಚಿನ್ನಾಭರಣಗಳ ಲೆಕ್ಕ ಪಡೆಯುತ್ತೇವೆ. ಈ ವೇಳೆ ಒಂದು ಕೆ.ಜಿ.ಗೂ ಅಧಿಕ ಚಿನ್ನಾಭರಣ ಕಡಿಮೆ ಇರುವುದು ಗಮನಕ್ಕೆ ಬಂದಿತು. ಸಿ.ಸಿ.ಟಿವಿ ಪರಿಶೀಲಿಸಿದಾಗ ಮಹಿಳೆ ಕಳವು ಮಾಡಿದ್ದು ಗೊತ್ತಾಯಿತು. ಹೀಗಾಗಿ, ದೂರು ನೀಡಲು ವಿಳಂಬವಾಗಿದೆ' ಎಂದು ಅಂಗಡಿಯ ಮಾಲಕಿ ರೇಖಾ ರವಿಕುಮಾರ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಕಳುವಾದ ಚಿನ್ನಾಭರಣದ ಪೆಟ್ಟಿಗೆಯಲ್ಲಿ 100ಕ್ಕೂ ಅಧಿಕ ಓಲೆ, ಜುಮುಕಿ ಸೇರಿ ಇತರ ಚಿನ್ನಾಭರಣಗಳಿದ್ದವು. ಕಳವು ಕೃತ್ಯ ತಡವಾಗಿ ಗೊತ್ತಾಗಿದ್ದರಿಂದ ಕೆಲ ಸಾಕ್ಷ್ಯಗಳು ನಾಶವಾಗಿವೆ. ಬಸವನಗರ ಠಾಣೆಯ ಇನ್‌ಸ್ಪೆಕ್ಟರ್ ನಂಜುಂಡಸ್ವಾಮಿ ನೇತತ್ವದಲ್ಲಿ ತನಿಖಾ ತಂಡವನ್ನು ರಚಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

### ವಚನ ಸಾಹಿತ್ಯ ರಚನೆಗೆ ಮುನ್ನುಡಿ ಹಾಕಿದ ದೇವರ ದಾಸಿಮಯ್ಯ: ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ


## ಉತ್ತಮ ಸ್ಥಾನಗಳಿಸಲು ಅನುಕೂಲವಾಗುವಂತೆ ಕೌಶಲ್ಯ ತರಬೇತಿ ನೀಡಿ

• **ಉದಯವಾಹಿನಿ, ಚಿತ್ರದುರ್ಗ**

ಹತ್ತನೇ ಶತಮಾನದಲ್ಲಿ ಸಂಸ್ಕೃತ, ಹಳೆಗನ್ನಡದ ಶಿಷ್ಟಭಾಷೆಯಲ್ಲಿ ಸಾಹಿತ್ಯ ರಚನೆ ಮಾಡಲಾಗುತ್ತಿತ್ತು. ಇದು ಕೇವಲ ಪಂಡಿತರಿಗೆ ಮಾತ್ರ ಅರ್ಥವಾಗುತ್ತಿತ್ತು. ಆದರೆ ಜನರ ಆಡುನುಡಿಯಾದ ಕನ್ನಡ ಭಾಷೆಯಲ್ಲಿ ವಚನಗಳನ್ನು ರಚಿಸುವ ಮೂಲಕ ದೇವರ ದಾಸಿಮಯ್ಯ ವಚನ ಸಾಹಿತ್ಯ ರಚನೆಗೆ ಮುನ್ನುಡಿ ಹಾಕಿಕೊಟ್ಟರು, ಹೀಗಾಗಿಯೇ ಅವರನ್ನು ಆದ್ಯ ವಚನಕಾರರು ಎಂದು ಕರೆಯಲಾಗುತ್ತದೆ ಎಂಬುದಾಗಿ ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತ್, ಕನ್ನಡ, ಸಂಸ್ಕೃತಿ ಇಲಾಖೆ, ನಗರ ಸಭೆ ಸಹಯೋಗದಲ್ಲಿ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾದ ಆದ್ಯ ವಚನಕಾರ ದೇವರ ದಾಸಿಮಯ್ಯ ಜಯಂತಿ ಕಾರ್ಯಕ್ರಮದಲ್ಲಿ, ದೇವರ ದಾಸಿಮಯ್ಯ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಅವರು ಮಾತನಾಡಿದರು. ಪಂಡಿತರ ಸಾಹಿತ್ಯವನ್ನು ಪಾಮರರ ಭಾಷೆಯಲ್ಲಿ ಹೇಳಿದವರು ದೇವರ ದಾಸಿಮಯ್ಯ ಎಂದರೆ ತಪ್ಪಾಗಲಾರದು. ನೇಕಾರ ವೃತ್ತಿ ಮಾಡುತ್ತಲೇ ವಚನಗಳನ್ನು ರಚಿಸಿದರು. ಸಮಾಜದ ಅಂಕು ಡೊಂಕು, ಕಂದಾಚಾರ, ಮೂಢನಂಬಿಕೆಗಳನ್ನು ತಿದ್ದಿದರು. ಭಕ್ತಿ, ಜ್ಞಾನ, ಅನ್ನ ದಾಸೋಹ ಎಂಬ ತ್ರಿವಿಧ ದಾಸೋಹಗಳನ್ನು ಮಾಡಿದರು.

ಈ ಮೂಲಕ ಸಮಾಜ ಸೇವೆ ಕೈಗೊಂಡರು.


ಉದಯವಾಹಿನಿ ಚಿತ್ರ

ಮಹಾನುಭಾವರನ್ನು ಒಂದು ಜಾತಿ ಸೀಮಿತ ಮಾಡುವ ಪ್ರವೃತ್ತಿ ಹೆಚ್ಚಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಬೇಸರ ವ್ಯಕ್ತಪಡಿಸಿದರು. ನೇಕಾರ ಸಮುದಾಯ ಸಂಖ್ಯೆಯಲ್ಲಿ ಕಡಿಮೆ ಇದ್ದರೂ, ಶ್ರಮಜೀವಿಗಳಾಗಿದ್ದಾರೆ. ಕಾಯಕದಲ್ಲಿಯೇ ತಮ್ಮ ಬದುಕನ್ನು ಕಟ್ಟಿಕೊಂಡಿದ್ದಾರೆ. ಆಧುನಿಕ ಯುಗದ ತಂತ್ರಜ್ಞಾನದಲ್ಲಿ ಕೈಮಗ್ಗಗಳು ಮೂಲೆ ಸೇರುವಂತಾಗಿವೆ. ನೇಕಾರರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಬೇಕು. ಸರ್ಕಾರ ನೇಕಾರರಿಗೆ ವಿವಿಧ ಕ್ಷೇತ್ರಗಳಲ್ಲಿ ಮೀಸಲಾತಿ ನೀಡಿದೆ, ಇದರ ಸದಪಯೋಗ ಪಡೆದುಕೊಳ್ಳಬೇಕು. ಮಕ್ಕಳು ಸ್ಪರ್ಧಾತ್ಮಕ ಜಗತ್ತಿನಲ್ಲಿ ಉತ್ತಮ ಸ್ಥಾನಗಳಿಸಲು ಅನುಕೂಲವಾಗುವಂತೆ ಕೌಶಲ್ಯ ತರಬೇತಿ ನೀಡಬೇಕು ಎಂದರು.

ದಾವಣಗೆರೆ ಸಿದ್ಧಗಂಗಾ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಸಂತೋಷ್ ಮಾತನಾಡಿ, ವಿಶ್ವಸಾಹಿತ್ಯಕ್ಕೆ ಕನ್ನಡದ ಶ್ರೇಷ್ಠ ಕೊಡುಗೆ ಎಂದರೆ ವಚನ ಸಾಹಿತ್ಯ, ಇಂತಹ ಸಾಹಿತ್ಯ ರಚನೆಗೆ ಮುನ್ನುಡಿ ಬರೆದವರು ದೇವರ ದಾಸಿಮಯ್ಯನವರಾಗಿದ್ದಾರೆ. ವಚನ ಸಾಹಿತ್ಯ ವೇದ ಉಪನಿಷತ್‌ಗಳ ಸಾರವಲ್ಲ. ಅಂದಿನ ಸಮಾಜದಲ್ಲಿನ ಮೂಢನಂಬಿಕೆ, ಕಂದಾಚಾರ, ಜಾತಿವ್ಯವಸ್ಥೆ ಹಾಗೂ ಮೇಲ್ವರ್ಗದ ಯಜಮಾನಿಕೆಯ ವಿರುದ್ಧ ಹುಟ್ಟಿಕೊಂಡ ದೇಸಿ ಸಾಹಿತ್ಯವಾಗಿದೆ. ಅರಮನೆಯ ರಾಜಮನೆತನಗಳಿಗೆ ಸೀಮಿತವಾಗಿದ್ದ, ಸಾಹಿತ್ಯ, ಸಂಸ್ಕೃತಿ, ಉತ್ತಮ ಜೀವನ ಪದ್ಧತಿಯನ್ನು ಜನಸಾಮಾನ್ಯರಿಗೆ ವಚನ ಸಾಹಿತ್ಯ ದೊರಕಿಸಿತು.

ಆದ್ಯ ವಚನಕಾರರಾಗಿ ದೇವರ ದಾಸಿಮಯ್ಯ, ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿಗೆ ಪ್ರೇರಣೆಯಾಗಿದ್ದರು. ದೇವರ, ಜೇಡರ ದಾಸಿಮಯ್ಯ

**ದೇವರ ದಾಸಿಮಯ್ಯನವರು 10ನೇ ಶತಮಾನಕ್ಕೆ ಸೇರಿದ ಶ್ರೇಷ್ಠ ವಚನಕಾರರಾಗಿದ್ದಾರೆ. ಸಮಾಜಕ್ಕೆ ಅಂಟಿಕೊಂಡ ಜಡತ್ವ ತೆಗೆದುಹಾಕಿ ಉತ್ತಮ ಸಮಾಜ ನಿರ್ಮಾಣ ಮಾಡುವುದರೊಂದಿಗೆ, ಮಹಿಳೆಯರ ಸ್ಥಾನಮಾನ ಹೆಚ್ಚಿಸುವಲ್ಲಿ ಶ್ರಮ ವಹಿಸಿದರು**

**- ಎಂ. ಗೋವಿಂದಪ್ಪ , ಜಿಲ್ಲಾ ನೇಕಾರರ ಒಕ್ಕೂಟದ ಅಧ್ಯಕ್ಷ**

ಬೇರೆ ಬೇರೆ ಎನ್ನುವ ಸಾಕಷ್ಟು ವಾದಗಳು ಸಾಹಿತ್ಯ ವಲಯದಲ್ಲಿ ಇದ್ದವು. ಆದರೆ ಬಹುತೇಕ ವಿದ್ವಾಂಸರು ದೇವರ, ಜೇಡರ ದಾಸಿಮಯ್ಯ ಇಬ್ಬರು ಒಂದೇ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಎಂದು ಹೇಳಲಾಗಿದೆ. ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಮುದನೂರಿನಲ್ಲಿ ರಾಮಯ್ಯ ಹಾಗೂ ಶಂಕರಿ ಎಂಬುವವರ ಪುತ್ರರಾಗಿ ದೇವರ ದಾಸಿಮಯ್ಯ ಜನಿಸಿದರು. ನೇಕಾರ ಕಾಯಕ ಮಾಡುತ್ತಾ ಶಿವಭಕ್ತರಾಗಿ ದೇವರ ದಾಸಿಮಯ್ಯ ತಮ್ಮ ನಡೆ ಹಾಗೂ ವ್ಯಕ್ತಿತ್ವವನ್ನು ರೂಪಿಸಿಕೊಂಡರು. ದೇವರ ದಾಸಿಮಯ್ಯವರ ಘನತೆ ಕುರಿತು ಬಸವಣ್ಣನವರು 18 ವಚನಗಳಲ್ಲಿ ತಿಳಿಸಿದ್ದಾರೆ.

ದೇವರ ದಾಸಿಮಯ್ಯ 'ರಾಮನಾಥ' ಎಂಬ ಅಂಕಿತ ನಾಮದೊಂದಿಗೆ ವಚನಗಳನ್ನು ರಚಿಸಿದ್ದಾರೆ.

**ಜಿಲ್ಲಾ ನೇಕಾರ ಒಕ್ಕೂಟ ಚಿತ್ರದುರ್ಗ ನಗರದಲ್ಲಿ ವಿದ್ಯಾರ್ಥಿ ನಿಲಯ, ನೇಕಾರಿಕೆ ಉದ್ದಿಮೆ ಕೈಗೊಳ್ಳಲು ನಿವೇಶನ, ಯಾದಗಿರಿಯ ಮುದನೂರು ಗ್ರಾಮದಲ್ಲಿ ದೇವರದಾಸಿಮಯ್ಯ ಪ್ರಾಧಿಕಾರ ರಚನೆ ಬಗ್ಗೆ ಮಾಡಿದ ಮನವಿಯನ್ನು ಸರ್ಕಾರಕ್ಕೆ ಕಳುಹಿಸಿಕೊಡಲಾಗುವುದು. ನಗರದ ಒಂದು ರಸ್ತೆಗೆ ದೇವರ ದಾಸಿಮಯ್ಯ ಹೆಸರು ಇಡಲು ನಗರಸಭೆ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಲಾಗುವುದು**

**-ಬಿ.ಟಿ.ಕುಮಾರಸ್ವಾಮಿ ಅಪರ ಜಿಲ್ಲಾಧಿಕಾರಿ**

ಇದುವರೆಗೂ ಅವರ 176ಕ್ಕೂ ವಚನಗಳು ಲಭ್ಯವಾಗಿವೆ ಎಂದರು. ಹೊಸದುರ್ಗದ ಶಬೀನಾ ಬಾನು ಅವರ ಕಲಾ ತಂಡ ಗೀತಗಾಯನ ಹಾಗೂ ನಾಡಗೀತೆಯನ್ನು ಪ್ರಸ್ತುತ ಪಡಿಸಿದರು. ಕೃಷಿ ಇಲಾಖೆ ಜಂಟಿ ನಿರ್ದೇಶಕ ಮಂಜುನಾಥ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಬಿ.ಎಂ.ಗುರುನಾಥ್, ಜಿಲ್ಲಾ ನೇಕಾರರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಸುರೇಶ್, ಸೇರಿದಂತೆ ಮುಖಂಡರಾದ ಚಂದ್ರಶೇಖರ್, ನಾರಾಯಣ್, ಎನ್.ಆರ್.ಶಶಿಧರ್, ಹೊಂಬಕ್ಕ, ಶ್ರೀದೇವಿ, ರಘು, ಮಂಜುನಾಥ ಉಪಸ್ಥಿತರಿದ್ದರು.

## ಮಿನಿ ನ್ಯೂಸ್

### ವಲಸೆ ಹೋಗುವುದು ತಪ್ಪಿಸಲು ನರೇಗಾ ಕೂಲಿ ಹೆಚ್ಚಳ


ಉದಯವಾಹಿನಿ ಚಿತ್ರ

• **ಉದಯವಾಹಿನಿ,ಚಿಂಚೋಳಿ**

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಗ್ರಾಮೀಣ ಭಾಗದ ಕೂಲಿ ಕೆಲಸ ಮಾಡುವ ಕೂಲಿಕಾರರ ದಿನ ಕೂಲಿ ದರವನ್ನು 21ರೂ.ಹೆಚ್ಚಳ ಮಾಡಿ ಸರಕಾರ ಆದೇಶವನ್ನು ಹೊರಡಿಸಿದೆ ಎಂದು ತಾಲ್ಲೂಕಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಶಂಕರ್ ರಾಠೋಡ್ ತಿಳಿಸಿದ್ದಾರೆ.

**ಕೂಲಿ ಕಾರ್ಮಿಕರು ಹರ್ಷ**

ತಾಲ್ಲೂಕಿನ ಕೋಳ್ಳೂರ ಕೆರೆ,ದೋಟಿಕೋಳ ಕೆರೆಯಲ್ಲಿ ನರೇಗಾ ಕಾಮಗಾರಿ ನಡೆಯುತ್ತಿರುವುದು ವಿಕ್ಷಿಸಿ ಮಾತನಾಡಿದ ಅವರು,ನರೇಗಾ ಯೋಜನೆಯಡಿ 2024-25ನೇ ಸಾಲಿನಲ್ಲಿರುವ 349ರೂ. ಕೂಲಿ ನೀಡಲಾಗುತ್ತಿದ್ದು ಇದನ್ನು 2025-26ನೆ ಸಾಲಿಗೆ 370ಕ್ಕೆ ಹೆಚ್ಚಿಸಿ ಆರ್ಥಿಕ ವರ್ಷ ಏಪ್ರಿಲ್ 1ರಿಂದ ಜಾರಿಗೊಳಿಸಲು ಸರಕಾರ ನಿರ್ದೇಶನ ನೀಡಿದೆ ಎಂದು ತಿಳಿಸಿದಾಗ ಕೂಲಿಕಾರ್ಮಿಕರು ಹರ್ಷ ವ್ಯಕ್ತಪಡಿಸಿದ್ದಾರೆ. ಕನಕಪೂರ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ 500ಜನ ಕೂಲಿಕಾರ್ಮಿಕರು ಕೆಲಸ ಮಾಡುತ್ತಾರೆ, ಗಾರಂಪಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ 300ಜನ ಕೂಲಿಕಾರ್ಮಿಕರು ಕೆಲಸ ಆಡುತ್ತಾರೆ,ಐನೋಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ 200ಜನ ಕೆಲಸ ಮಾಡುತ್ತಾರೆ, ಅತಿಹೆಚ್ಚು ಕೂಲಿಕಾರ್ಮಿಕರು ಕೆಲಸ ಮಾಡುವ ಗ್ರಾಮ ಪಂಚಾಯತ್ ಕುಂಚಾವರಂ ವ್ಯಾಪ್ತಿಯಲ್ಲಿ ಅಂದಾಜು 800 ಜನರಿದ್ದಾರೆ ಎಂದು ಹೇಳಿದರು. ಕೂಲಿಕಾರ್ಮಿಕರಿಗೆ ನರೇಗಾ ಯೋಜನೆಯ ಕಾಮಗಾರಿ ಬಗ್ಗೆ ಸಮಗ್ರ ಮಾಹಿತಿಯನ್ನು ನೀಡಿ ನಮೂನೆ 06 ಅರ್ಜಿಯನ್ನು ತೆಗೆದುಕೊಂಡು ಜನರಿಗೆ ಜಾಗೃತಿ ಮೂಡಿಸುವಲ್ಲಿ ನರೇಗಾ ಕ್ಷೇತ್ರ ಸಹಾಯಕ ಶ್ರೀಧರ ವಗ್ಗಿ ಉತ್ತಮ ಕೆಲಸ ನಿರ್ವಹಿಸುತ್ತಿದ್ದು ಕೂಲಿ ಕಾರ್ಮಿಕರ ಜೋತೆಗೂಡಿ ಹರ್ಷ ವ್ಯಕ್ತಪಡಿಸಿದ್ದಾರೆ.

### ಕುಡಿಯುವ ನೀರಿಗೆ ತೊಂದರೆಯಾಗದಂತೆ ಕ್ರಮವಹಿಸಿ: ಎಸಿ ಅನುರಾಧಾ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಇಂಡಿ**

ಬೇಸಿಗೆಯಲ್ಲಿ ಕುಡಿಯುವ ನೀರು ಸಮರ್ಪಕವಾಗಿ ಒದಗಿಸಲು ಯಾವುದೇ ಅಡೆ ತಡೆ ಉಂಟಾಗದಂತೆ ನೋಡಿಕೊಳ್ಳಬೇಕು. ಅದರಂತೆ ಜನ ಜಾನುವಾರುಗಳಿಗೆ ಯಾವದೇ ರೀತಿಯ ನೀರಿನ ಅಭಾವ ವಾಗದಂತೆ ಕುಡಿಯುವ ನೀರು ಪೂರೈಸಬೇಕು ಎಂದು ಕಂದಾಯ ಉಪವಿಬಾಗಾಧಿಕಾರಿ ಅನುರಾಧಾ ವಸ್ತ್ರದ ಹೇಳಿದರು.

ತಾ.ಪಂ ಕಾರ್ಯಾಲಯದಲ್ಲಿ ನಡೆದ ತಾಲ್ಲೂಕಿನ ಎಲ್ಲಾ ಪಂಚಾಯತ ಅಭಿವೃದ್ಧಿ ಅಧಿಕಾರಿಗಳ ಮತ್ತು ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡುತ್ತಿದ್ದರು. ತಾ.ಪಂ ಕಾರ್ಯ ನಿರ್ವಾಹಕ ಅಧಿಕಾರಿ ನಂದೀಪ ರಾಠೋಡ ಮಾತನಾಡಿ ಕುಡಿಯುವ ನೀರಿನ ಅನುದಾನ ಮಾಹಿತಿ ಪಡೆದು, ಗ್ರಾಮ, ವಸತಿಗಳಿಗೆ ಕುಡಿಯುವ ನೀರಿನ ಸಮಸ್ಯೆ ಆಗದಂತೆ ಸೂಕ್ತ ಕ್ರಮ ಕೈಕೊಳ್ಳಲು ಸೂಚನೆ ನೀಡಿದರು. ತಾಲ್ಲೂಕಿನ ಬಸನಾಳ ಪಿಡಿಒ ಮಲ್ಲಿಕಾರ್ಜುನ ನಿಲಂಗಿ ಮಾತನಾಡಿ ಬಸನಾಳ, ಅಗಸನಾಳ, ಕ್ಯಾತನಕೇರಿ, ಹಾಗೂ ತಾಂಡಾಗಳ ಕುಡಿಯುವ ನೀರಿನ ಸಮಸ್ಯೆ ಕುರಿತು ಮಾತನಾಡಿದರು. ಎಸಿ ವಸ್ತ್ರದ ಅವರು ಮಾತನಾಡಿ ಗ್ರಾಮಗಳಿಗೆ ಖುದ್ದು ಭೇಟಿ ನೀಡಿ ನೀರಿನ ತೊಂದರೆ ಆಗದಂತೆ ಕ್ರಮವಹಿಸಲಾಗುವದು ಎಂದರು.

ಸಭೆಯಲ್ಲಿ ಸಹಾಯಕ ನಿರ್ದೇಶಕ ಪ್ರಕಾಶ ರಾಠೋಡ, ಪಿಡಿಒ ಬಸವರಾಜ ಬಬಲಾದ, ಸಿದರಾಯ ಬಿರಾದಾರ, ಜಬ್ಬಾರಲಿ ಹಳ್ಳಿ, ಮಹೇಶ ನಾಯಕ, ಮಹೇಶ ರಾಠೋಡ, ಶಿವು ಪೂಜಾರಿ, ಶೋಭಾ ಹೊರಪೇಟೆ, ಆಶಾ ನಾಯಕ ಮತ್ತಿತರಿದ್ದರು.

### ಅರ್ಜಿ ತ್ವರಿತ ವಿಲೇವಾರಿಗೆ ಡಿಸಿ ಸೂಚನೆ

• **ಉದಯವಾಹಿನಿ, ಮಂಗಳೂರು**

ಜಮೀನು ದಾಖಲೆಗಳ 1-5 ಪ್ರಕರಣಗಳ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡಬೇಕು ಎಂದು ಜಿಲ್ಲಾಧಿಕಾರಿ ಮುಲ್ಯೆ ಮುಗಿಲನ್ ಸೂಚಿಸಿದರು. ಬಂಟ್ವಾಳ ತಾಲ್ಲೂಕು ಕಚೇರಿಗೆ ಗುರುವಾರ ಭೇಟಿ ನೀಡಿದ ಅವರು ಕಡತಗಳನ್ನು ಪರಿಶೀಲಿಸಿದರು. ಭೂ ಮಂಜೂರಾತಿ ನಂತರ ಸಾರ್ವಜನಿಕರು 1-5 ಮಾಡಲು ಸಲ್ಲಿಸಿರುವ ಸಾಕಷ್ಟು ಅರ್ಜಿಗಳು ಬಾಕಿ ಇವೆ. ಇದರಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವ ಬಗ್ಗೆ ದೂರು ಬಂದಿವೆ ಎಂದರು. ತಾಲ್ಲೂಕು ಕಚೇರಿಯ ರೆಕಾರ್ಡ್ ರೂಂಗೆ ಭೇಟಿ ನೀಡಿದ ಅವರು, ದಾಖಲೆಗಳ ಡಿಜಿಟಲೀಕರಣ ಪ್ರಕ್ರಿಯೆ ವೀಕ್ಷಿಸಿದರು. ಸರ್ವೆ ಇಲಾಖೆ ಕಚೇರಿಗೆ ಭೇಟಿ ನೀಡಿದ ಡಿಸಿ, ಕಡತಗಳ ಸಂಗ್ರಹ ಪರಿಶೀಲಿಸಿ, ಯಾವುದೇ ಕಾರಣಕ್ಕೂ ಸರ್ವೆ ಕಾರ್ಯ ವಿಳಂಬ ಮಾಡಬಾರದು ಎಂದು ಸೂಚಿಸಿದರು. ಪ್ರಸಾದಿನಿ, ಸಹಾಯಕ ನಿರ್ದೇಶಕ ನಿಸಾರ್ ಅಹಮದ್, ಉಪ ತಹಶೀಲ್ದಾರ್ ನರೇಂದ್ರನಾಥ್ ಭಟ್ ಇದ್ದರು.

### ವಸಂತ ವಿಹಾರ ಉಚಿತ ಬೇಸಿಗೆ ಶಿಬಿರ

• **ಉದಯವಾಹಿನಿ, ಶಿವಮೊಗ್ಗ**

ಶಿವಮೊಗ್ಗದ ರಾಮಕೃಷ್ಣ ವಿವೇಕಾನಂದ ಆಶ್ರಮದ ಮಾರ್ಗದರ್ಶನದಲ್ಲಿ ವಿನೋಬ ನಗರದ ಮೂರನೇ ಹಂತದ 8ನೇ ತಿರುವಿನಲ್ಲಿರುವ ಶಾರದಾದೇವಿ ಸತ್ಸಂಗ ಕೇಂದ್ರದಲ್ಲಿ ಏಪ್ರಿಲ್ 14ರಿಂದ 20ರವರೆಗೆ 5 ರಿಂದ 9ನೇ ತರಗತಿ ವಿದ್ಯಾರ್ಥಿಗಳಿಗೆ ಒಂದು ವಾರದ ವಿಶೇಷ ಬೇಸಿಗೆ ಶಿಬಿರ 'ವಸಂತ ವಿಹಾರ 2025' ಆಯೋಜಿಸಲಾಗಿದೆ.

ಪ್ರತಿದಿನ ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ರವರೆಗೆ ಶಿಬಿರ ನಡೆಯಲಿದೆ. ಧ್ಯಾನ, ದಿವ್ಯತ್ರಯರ ದಿವ್ಯ ಜೀವನ, ಸಂಸ್ಕೃತ ಶ್ಲೋಕಗಳು, ರಾಮಾಯಣ, ಮಹಾಭಾರತದ ಕಥೆಗಳು, ಚಿತ್ರಕಲೆ, ಆರ್ಟ್ ಅಂಡ್ ಕ್ರಾಫ್ಟ್, ಸಂಗೀತ ಮತ್ತು ಭಜನೆ, ಸ್ವಾತಂತ್ರ್ಯ ಹೋರಾಟ, ಮಹಾಪುರುಷರ ಜೀವನ, ಆಟಗಳು, ಕ್ವಿಜ್, ಸೈನಿಕರು ಇವೆಲ್ಲವುಗಳ ಸಂಕ್ಷಿಪ್ತ ಪರಿಚಯವನ್ನು ನುರಿತ ಸಂಪನ್ಮೂಲ ವ್ಯಕ್ತಿಗಳು ಮಾಡಿಕೊಡುವರು. ಉಚಿತ ಶಿಬಿರ ಇದಾಗಿರುತ್ತದೆ. ಮೊದಲು ನೋಂದಾಯಿಸಿದ 30 ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶ ಇರುತ್ತದೆ. 8317443637 ಮೊಬೈಲ್ ಸಂಖ್ಯೆಗೆ ವಾಟ್ಸ್ ಆ್ಯಪ್ ಮಾಡಿ ಹೆಸರು ನೋಂದಾಯಿಸಿಕೊಳ್ಳಬಹುದಾಗಿದೆ.

ಉದಯ ವಾಹಿನಿ

ಪ್ರಾದೇಶಿಕ

ಶುಕ್ರವಾರ 04 ಏಪ್ರಿಲ್ 2025



# ವಕ್ಫ್ ತಿದ್ದುಪಡಿ ಮಸೂದೆ ವಿರುದ್ಧ ತಮಿಳು ನಾಡು ಸಮರ

## ವಕ್ಫ್ ತಿದ್ದುಪಡಿ ಮಸೂದೆ ಅಂಗೀಕಾರ; ಸುಪ್ರೀಂ ಕದ ತಟ್ಟಲು ತಮಿಳುನಾಡು ಸರ್ಕಾರ ನಿರ್ಧಾರ: ಕಪ್ಪುಪಟ್ಟಿ ಧರಿಸಿ ಸ್ಟಾಲಿನ್ ಸಮರ

**ಚೆನ್ನೈ:** ಲೋಕಸಭೆಯಲ್ಲಿ ಬುಧವಾರ ಅಂಗೀಕಾರವಾದ ವಕ್ಫ್ ತಿದ್ದುಪಡಿ ಮಸೂದೆಯನ್ನು ಗುರುವಾರ ರಾಜ್ಯಸಭೆಯಲ್ಲಿ ಮಂಡಿಸಲಾಯಿತು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ ತಮಿಳುನಾಡಿನ ಮುಖ್ಯಮಂತ್ರಿ ಮತ್ತು ಡಿಎಂಕೆ ಅಧ್ಯಕ್ಷ ಎಂ.ಕೆ. ಸ್ಟಾಲಿನ್ ತಮ್ಮ ಪಕ್ಷ ಸುಪ್ರೀಂ ಕೋರ್ಟ್‌ನಲ್ಲಿ ಮೊಕದ್ದಮೆ ಹೂಡಲಿದೆ ಎಂದು ಹೇಳಿದ್ದಾರೆ. ವಕ್ಫ್ ತಿದ್ದುಪಡಿ ಮಸೂದೆಯನ್ನು ಕೇಂದ್ರ ಸರ್ಕಾರವು ಲೋಕಸಭೆಯಲ್ಲಿ ಮಂಡಿಸಿದೆ. ವಿರೋಧ ಪಕ್ಷಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿವೆ. ಮುಸ್ಲಿಂ ಸಂಘಟನೆಗಳಲ್ಲಿ ಕೆಲವು ವಿರೋಧ ವ್ಯಕ್ತಪಡಿಸಿದ್ದಾರೆ. ಈ ಮಧ್ಯೆ ತಮಿಳುನಾಡು ಸರ್ಕಾರ ಲೋಕಸಭೆಯಲ್ಲಿ ಮಸೂದೆ ಅಂಗೀಕಾರ ವಿರೋಧಿಸಿ ವಿಧಾನಸಭೆಯಲ್ಲಿ ಕಪ್ಪು ಪಟ್ಟಿ ಧರಿಸುವ ಮೂಲಕ ಕಲಾಪಕ್ಕೆ ಹಾಜರಾಗಿ ಪ್ರತಿಭಟಿಸಿದರು.

- ವಕ್ಫ್ ತಿದ್ದುಪಡಿ ಮಸೂದೆ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಮೊಕದ್ದಮೆ
- ಕಪ್ಪು ಪಟ್ಟಿ ಧರಿಸಿ ವಿಧಾನಸೌಧದಲ್ಲಿ ಎಂ.ಕೆ.ಸ್ಟಾಲಿನ್ ಪ್ರೊಟೆಸ್ಟ್

**ವಕ್ಫ್ ತಿದ್ದುಪಡಿ ಮಸೂದೆ ಧಾರ್ಮಿಕ ಸಾಮರಸ್ಯ ಮೇಲೆ ಪರಿಣಾಮ:** ವಕ್ಫ್ ಆಸ್ತಿ ವಿಚಾರವಾಗಿ ತಮಿಳುನಾಡು ಇದರ ವಿರುದ್ಧ ಹೋರಾಡಾಲಿದೆ. ಈ ಹೋರಾಟದಲ್ಲಿ ನಮಗೆ ಜಯ ಸಿಗಲಿದೆ.



ತಮಿಳುನಾಡು ವಿಧಾನಸಭೆಯು ಮಾರ್ಚ್ 27ರಂದು ವಕ್ಫ್ ತಿದ್ದುಪಡಿ ಮಸೂದೆಯನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಿ ನಿರ್ಣಯವನ್ನು ಅಂಗೀಕರಿಸಿತ್ತು. ಈ ವಕ್ಫ್ ತಿದ್ದುಪಡಿ ಮಸೂದೆ ಧಾರ್ಮಿಕ ಸಾಮರಸ್ಯವನ್ನು ಕೆಡುವುತ್ತದೆ. ಮುಸ್ಲಿಂ ಸಮುದಾಯದ ಮೇಲೆ ಪರಿಣಾಮ ಬೀರಲಿದೆ. ಕೆಲವು ಸಮ್ಮಿಶ್ರ ಪಕ್ಷಗಳ ಬೆಂಬಲದೊಂದಿಗೆ ನಸುಕಿನ ಜಾವ 2 ಗಂಟೆಗೆ ಮಸೂದೆಯನ್ನು ಅಂಗೀಕರಿಸುವುದು ಸಂವಿಧಾನದ ಮೇಲೆ ದಾಳಿ ನಡೆಸಿದಂತೆ. ನಾವು ಕಾನೂನು ಕ್ರಮಗಳ ಮೂಲಕ ಮಸೂದೆ ಹಿಂಪಡೆಯುವಂತೆ ಮಾಡುತ್ತೇವೆಎಂದು ಸ್ಟಾಲಿನ್ ಕಲಾಪದಲ್ಲಿ ಹೇಳಿದರು. ದೇಶದ ಬಹುತೇಕ ರಾಜಕೀಯ ಪಕ್ಷಗಳು ಈ ಮಸೂದೆಗೆ ವಿರೋಧ ವ್ಯಕ್ತಪಡಿಸಿದ್ದವು. ಆದರೂ, ಇದನ್ನು ಲೋಕಸಭೆಯಲ್ಲಿ ಅಂಗೀಕರಿಸಲಾಗಿದೆ.

> **ವಕ್ಫ್ ತಿದ್ದುಪಡಿ ಮಸೂದೆಯನ್ನು ಕೇಂದ್ರ ಸರ್ಕಾರವು ಲೋಕಸಭೆಯಲ್ಲಿ ಮಂಡಿಸಿದೆ. ವಿರೋಧ ಪಕ್ಷಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿವೆ. ಮುಸ್ಲಿಂ ಸಂಘಟನೆಗಳಲ್ಲಿ ಕೆಲವು ವಿರೋಧ ವ್ಯಕ್ತಪಡಿಸಿದ್ದಾರೆ. ಈ ಮಧ್ಯೆ ತಮಿಳುನಾಡು ಸರ್ಕಾರ ಲೋಕಸಭೆಯಲ್ಲಿ ಮಸೂದೆ ಅಂಗೀಕಾರ ವಿರೋಧಿಸಿ ವಿಧಾನಸಭೆಯಲ್ಲಿ ಕಪ್ಪು ಪಟ್ಟಿ ಧರಿಸುವ ಮೂಲಕ ಕಲಾಪಕ್ಕೆ ಹಾಜರಾಗಿ ಪ್ರತಿಭಟಿಸಿದರು. ವಕ್ಫ್ ಮಸೂದೆವಿಚಾರವಾಗಿ ತಮಿಳುನಾಡು ಇದರ ವಿರುದ್ಧ ಹೋರಾಡಾಲಿದೆ. ಈ ಹೋರಾಟದಲ್ಲಿ ನಮಗೆ ಜಯ ಸಿಗಲಿದೆ**
> -ಎಂ.ಕೆ ಸ್ಟಾಲಿನ್, ಸಿಎಂ

### ರಾಜ್ಯಸಭೆಯಲ್ಲಿ ವಕ್ಫ್ ಮಸೂದೆ ಮಂಡನೆ

ಲೋಕಸಭೆಯಲ್ಲಿ ಅಂಗೀಕಾರ ಪಡೆದುಕೊಂಡ ಬಳಿಕ ಇಂದು ರಾಜ್ಯಸಭೆಯಲ್ಲೂ ವಕ್ಫ್ (ತಿದ್ದುಪಡಿ) ಮಸೂದೆ 2025 ಅನ್ನು ಕೇಂದ್ರ ಸಚಿವ ಕಿರಣ್ ರಿಜಿಜು ಮಂಡಿಸಿದರು. ಆನಂತರ ಮಾತನಾಡಿದ ಸಚಿವ ರಿಜಿಜು ಈ ಮಸೂದೆಯು ಮುಸ್ಲಿಮರ ವಿರುದ್ಧವಾಗಿಲ್ಲ. ಅವರ ಧಾರ್ಮಿಕ ಭಾವನೆಗಳನ್ನು ನೋಯಿಸುವ ಉದ್ದೇಶವನ್ನು ಹೊಂದಿಲ್ಲ. ಇದು ವಕ್ಫ್ ಆಸ್ತಿಗಳ ಕಾರ್ಯನಿರ್ವಹಣೆಯನ್ನು ಸುಧಾರಿಸಲು, ಸಮಸ್ಯೆಗಳನ್ನು ಪರಿಹರಿಸಲು, ಪಾರದರ್ಶಕತೆಯನ್ನು ಕಾಪಾಡಲು, ತಂತ್ರಜ್ಞಾನ-ಚಾಲಿತ ನಿರ್ವಹಣೆಯನ್ನು ಉದ್ದೇಶದಿಂದ ಪರಿಚಯಿಸಲಾಗಿದೆ ಎಂದು ಹೇಳಿದರು.


ಮಸೂದೆ ಅಂಗೀಕಾರವಾದರೂ ಮಸೂದೆ ವಿರುದ್ಧ ಚಲಾವಣೆಯಾದ ಮತಗಳ ಸಂಖ್ಯೆಯನ್ನು ನಿರ್ಲಕ್ಷಿಸಬಾರದು ಎಂದು ಹೇಳಿದರು.

**ತಮಿಳುನಾಡು ಸರ್ಕಾರದ ವಿರೋಧವಿದೆ:** ಲೋಕಸಭೆಯಲ್ಲಿ ಅಂಗೀಕರಿಸಲಾದ ವಕ್ಫ್ ತಿದ್ದುಪಡಿ ಮಸೂದೆಯ ಕುರಿತು ತಮಿಳುನಾಡು ಉಪ ಮುಖ್ಯಮಂತ್ರಿ ಉದಯನಿಧಿ ಸ್ಟಾಲಿನ್ ಮಾತನಾಡಿ, ನಾವು ವಕ್ಫ್ ಮಸೂದೆಯನ್ನು ವಿರೋಧಿಸುತ್ತಿದ್ದೇವೆ.



ಸಿಎಂ ಎಂ.ಕೆ.ಸ್ಟಾಲಿನ್ ಅವರು ಈಗಾಗಲೇ ಅದರ ವಿರುದ್ಧ ನಿರ್ಣಯವನ್ನು ಅಂಗೀಕರಿಸಿದ್ದಾರೆ ಎಂದು ಹೇಳಿದರು. ಜಂಟಿ ಸಂಸದೀಯ ಸಮಿತಿ (ಜೆಪಿಸಿ) ಪರಿಶೀಲಿಸಿ ಪುನರ್ ರಚಿಸಿದ ಮಸೂದೆಯನ್ನು ಮೇಲ್ಮನೆಯಲ್ಲಿ ಮಂಡಿಸಿದ ಸಚಿವರು, ಈ ಮಸೂದೆ ಕೇವಲ ಆಸ್ತಿಗಳೊಂದಿಗೆ ಮಾತ್ರ ವ್ಯವಹರಿಸುತ್ತದೆ ಎಂದು ಅವರು, 2004 ರಲ್ಲಿ 4.9 ಲಕ್ಷ ಇದ್ದ ವಕ್ಫ್ ಆಸ್ತಿಗಳ ಸಂಖ್ಯೆ ಇದೀಗ ಅವು 8.72 ಲಕ್ಷಕ್ಕೆ ಏರಿದೆ ಎಂದು ಮಾಹಿತಿ ನೀಡಿದ ಅವರು, ಮಸೂದೆ ಅಂಗೀಕರಿಸಲು ವಿರೋಧ ಪಕ್ಷದ ಬೆಂಬಲ ಕೋರಿದರು.

## ಟ್ರಂಪ್ ಸುಂಕ ನೀತಿ ವಿರೋಧಿಸಿದ ಭಾರತೀಯರು



**ನ್ಯೂಯಾರ್ಕ್:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿಧಿಸಿರುವ ಪರಸ್ಪರ ಸುಂಕ ಗಳನ್ನು ಟೀಕಿಸಿರುವ ಅಮೆರಿಕ ಕಾಂಗ್ರೆಸ್‌ನ ಭಾರತೀಯ-ಅಮೆರಿಕನ್ ಸದಸ್ಯರು, ವಲಸಿಗ ಸಮುದಾಯವು, ಅವುಗಳನ್ನು ಅಜಾಗರೂಕ ಮತ್ತು ಸ್ವಯಂ ವಿನಾಶಕಾರಿ ಎಂದು ಕರೆದಿದ್ದು, ಈ ಸವಾಲುಗಳನ್ನು ಎದುರಿಸಲು ಮಾತುಕತೆಯಲ್ಲಿ ತೊಡಗುವಂತೆ ಉಭಯ ದೇಶಗಳ ನಾಯಕರನ್ನು ಒತ್ತಾಯಿಸಿದ್ದಾರೆ.

ಟ್ರಂಪ್ ಭಾರತದ ಮೇಲೆ ಶೇ. 26 ರಷ್ಟು ರಿಯಾಯಿತಿ ಪರಸ್ಪರ ಸುಂಕ ವಿಧಿಸಿದರು. ಭಾರತವು ನಮಗೆ ಶೇ. 52 ರಷ್ಟು ಶುಲ್ಕ ವಿಧಿಸುತ್ತದೆ, ಆದ್ದರಿಂದ ನಾವು ಅದರ ಅರ್ಧದಷ್ಟು ಶೇ. 26 ರಷ್ಟು ಶುಲ್ಕ ವಿಧಿಸುತ್ತೇವೆ ಎಂದು ಅವರು ಹೇಳಿದ್ದಾರೆ. ಜಾಗತಿಕವಾಗಿ ವಿಧಿಸಲಾದ ಅಮೆರಿಕದ ಉತ್ಪನ್ನಗಳ ಮೇಲಿನ ಹೆಚ್ಚಿನ ಸುಂಕವನ್ನು ಎದುರಿಸುವ ಐತಿಹಾಸಿಕ ಕ್ರಮದಲ್ಲಿ ಅಧ್ಯಕ್ಷ ಟ್ರಂಪ್, ಸುಮಾರು 60 ದೇಶಗಳ ಮೇಲೆ ಪರಸ್ಪರ ಸುಂಕವನ್ನು ಘೋಷಿಸಿದ್ದಾರೆ.ಟ್ರಂಪ್ ಅವರ ಸುಂಕಗಳು ಭಾರತೀಯ ಸರಕುಗಳನ್ನು ಕಡಿಮೆ ಸ್ಪರ್ಧಾತ್ಮಕವಾಗಿಸುತ್ತದೆ ಎಂದು ಸಂಸದರು ಅಭಿ ಪ್ರಾಯಪಟ್ಟಿದ್ದಾರೆ. ಟ್ರಂಪ್ ಅವರ ಸುಂಕವು ದುಡಿಯುವ ಕುಟುಂಬಗಳ ಮೇಲಿನ ತೆರಿಗೆಯಾಗಿದ್ದು, ಇದರಿಂದ ಅವರು ಶ್ರೀಮಂತ ಅಮೆರಿಕನ್ನರಿಗೆ ತೆರಿಗೆಗಳನ್ನು ಕಡಿತ ಗೊಳಿಸಬಹುದು ಎಂದು ಕಾಂಗ್ರೆಸ್ ಸದಸ್ಯ ರಾಜಾ ಕೃಷ್ಣಮೂರ್ತಿ ಹೇಳಿದರು. ಈ ಇತ್ತೀಚಿನ ವಿಮೋಚನಾ ದಿನ ಸುಂಕಗಳು ಅಜಾಗರೂಕ ಮತ್ತು ಸ್ವಯಂ- ವಿನಾಶಕಾರಿಯಾಗಿದ್ದು, ಆರ್ಥಿಕ ನೋವನ್ನುಂಟುಮಾಡುತ್ತವೆ ಎಂದು ಅವರು ಮಾಹಿತಿ ನೀಡಿದ್ದಾರೆ.

## ವಕ್ಫ್ ಆಸ್ತಿ ಕಬಳಿಸಿದ್ದು ಸಾಬೀತಾದರೆ ರಾಜಕೀಯ ನಿವೃತ್ತಿ: ಮಲ್ಲಿಕಾರ್ಜುನ ಖರ್ಗೆ

**ನವದೆಹಲಿ:** ವಕ್ಫ್ ಭೂಮಿಯನ್ನು ಕಬಳಿಸಿದ್ದಾರೆ ಎಂಬ ಬಿಜೆಪಿ ಸಂಸದ ಅನುರಾಗ್ ಠಾಕೂರ್ ಅವರ ಆರೋಪಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ರಾಜ್ಯಸಭೆಯಲ್ಲಿ ಪುಷ್ಪಾ ಚಿತ್ರದ ಸಂಭಾಷಣೆಯನ್ನು ಉಲ್ಲೇಖಿಸಿ ತಿರುಗೇಟು ನೀಡಿದ್ದಾರೆ. ಲೋಕಸಭೆಯಲ್ಲಿ ವಕ್ಫ್ ಮಸೂದೆಯ ಮೇಲಿನ ಚರ್ಚೆಯ ಸಂದರ್ಭದಲ್ಲಿ ಠಾಕೂರ್ ಅವರು ಖರ್ಗೆ ಕುಟುಂಬದವರು ವಕ್ಫ್ ಆಸ್ತಿ ಕಬಳಿಸಿದ್ದಾರೆ ಎಂದು ಮಾಡಿದ್ದ ಆರೋಪಕ್ಕೆ ಖರ್ಗೆ ಅವರು ಸಿನಿಮೀಯ ಪ್ರತ್ಯುತ್ತರ ನೀಡಿದ್ದಾರೆ. ಠಾಕೂರ್ ಹೇಳಿಕೆಯನ್ನು ಆಧಾರರಹಿತವೆಂದು ತಳ್ಳಿಹಾಕಿದ್ದಲ್ಲದೆ, ಕ್ಷಮೆಯಾಚಿಸುವಂತೆ ಒತ್ತಾಯಿಸಿದ್ದಾರೆ.

ರಾಜಕೀಯ ದಾಳಿಗೆ ತಲೆಬಾಗುವುದಿಲ್ಲ ಎಂದು ಸ್ಪಷ್ಟಪಡಿಸಿದ ಅವರು. ನೀವು ನನ್ನನ್ನು ಪ್ರೀತಿಸಿದರೆ ನಾನು ನಿನ್ನನ್ನು ಪ್ರೀತಿಸುತ್ತೇನೆ. ಯಾದ್ ರಖೋ, ಮೈ ದಾರಾನೆ ಸೆ ದರ್ನೆ ವಾಲಾ ನಹೀ (ಬಿಜೆಪಿ ನಾಯಕರು ನನ್ನನ್ನು ಹೆದರಿಸಲು ಬಯಸಿದರೆ, ನಾನು ಎಂದಿಗೂ ತಲೆಬಾಗುವುದಿಲ್ಲ ಎಂದು ಗುಡುಗಿದ್ದಾರೆ. ನೆನಪಿಡಿ,



ನಾನು ಬೆದರಿಕೆಗೆ ಹೆದರುವ ವ್ಯಕ್ತಿಯಲ್ಲ. ನನ್ನ ಜೀವನ ಯಾವಾಗಲೂ ತೆರೆದ ಪುಸ್ತಕವಾಗಿದೆ. ನನ್ನ ಜೀವನ ಹೋರಾಟಗಳಿಂದ ತುಂಬಿದೆ ಎಂದಿದ್ದಾರೆ. ಸುಮಾರು 60 ವರ್ಷಗಳ ಕಾಲ ರಾಜಕೀಯದಲ್ಲಿ ಸೇವೆ ಸಲ್ಲಿಸಿದ ನಾನು ಇದಕ್ಕೆ ಅರ್ಹನಲ್ಲ. ನಿನ್ನೆ ಲೋಕಸಭೆಯಲ್ಲಿ ಅನುರಾಗ್ ಠಾಕೂರ್ ಅವರು ನನ್ನ ಮೇಲೆ ಸಂಪೂರ್ಣ ಸುಳ್ಳು ಮತ್ತು ಆಧಾರರಹಿತ ಆರೋಪಗಳನ್ನು ಹೊರಿಸಿದ್ದರು.

ನನ್ನ ಸಹೋದ್ಯೋಗಿಗಳು ಪ್ರಶ್ನಿಸಿದಾಗ, ಅವರು ತಮ್ಮ ಹೇಳಿಕೆಗಳನ್ನು ಹಿಂತೆಗೆದುಕೊಳ್ಳಬೇಕಾಯಿತು. ಆದರೆ ಅವರು ಹಾಗೇ ಮಾಡದಿರುವುದರಿಂದ ನನಗೆ ಹಾನಿಯಾಗಿದೆ ಎಂದು ಅವರು ಹೇಳಿದರು. ಅನುರಾಗ್ ಠಾಕೂರ್ ಅವರ ದಾಳಿಯು ತಮ್ಮ ರಾಜಕೀಯ ಜೀವನದ ಮೇಲೆ ಭಾರಿ ಕಳಂಕವನ್ನುಂಟು ಮಾಡಿದೆ ಎಂದು ಖರ್ಗೆ ಹೇಳಿದ್ದಾರೆ ಮತ್ತು ಬಿಜೆಪಿ ಕ್ಷಮೆಯಾಚಿಸಬೇಕು ಎಂದು ಒತ್ತಾಯಿಸಿದರು.ತಮ್ಮ ದಾಳಿಯನ್ನು ತೀವ್ರಗೊಳಿಸಿದ ಕಾಂಗ್ರೆಸ್ ಮುಖ್ಯಸ್ಥರು, ಮಾಜಿ ಕೇಂದ್ರ ಸಚಿವರಿಗೆ ತಮ್ಮ ಆರೋಪಗಳನ್ನು ಸಾಬೀತುಪಡಿಸಲು ಸಾಧ್ಯವಾಗದಿದ್ದರೆ ಸಂಸತ್ತಿನಲ್ಲಿ ಕುಳಿತುಕೊಳ್ಳುವ ಹಕ್ಕಿಲ್ಲ ಎಂದು ಹೇಳಿದರು. ಅವರು ರಾಜೀನಾಮೆ ನೀಡಬೇಕು. ಆದರೆ ಅವರ ಆರೋಪ ಸಾಬೀತಾದರೆ ನಾನು ರಾಜೀನಾಮೆ ನೀಡುತ್ತೇನೆ. ವಕ್ಫ್ ಭೂಮಿಯ ಒಂದು ವಿಷಯದಲ್ಲಾದರೂ ನಾನು ಅಥವಾ ನನ್ನ ಮಕ್ಕಳು ಆಕ್ರಮಿಸಿಕೊಂಡಿದ್ದೇವೆ ಎಂದು ಅವರು ಸಾಬೀತುಪಡಿಸಿದರೆ, ನಾನು ರಾಜೀನಾಮೆ ನೀಡುತ್ತೇನೆ. ನಾನು ಈ ವಿಷಯಗಳಿಗೆ ಹೆದರುವುದಿಲ್ಲ. ನಾನು ಒಬ್ಬ ಕಾರ್ಮಿಕನ ಮಗ ಎಂದು ಅವರು ಹೇಳಿದರು.

## ಎಲಾನ್ ವಿಶ್ವದ ಶ್ರೀಮಂತ ಉದ್ಯಮಿ

**ನ್ಯೂಯಾರ್ಕ್:** ವಿಶ್ವದ ಶ್ರೀಮಂತರ ಪಟ್ಟಿ ಅಮೆರಿಕದ ಎಲಾನ್ ಮಸ್ಕ್ ಮೊದಲ ಸ್ಥಾನ ಪಡೆದಿದ್ದಾರೆ. ಫೋರ್ಬ್ಸ್ ಮ್ಯಾಗಜಿನ್ ಬಿಡುಗಡೆ ಮಾಡಿರುವ ಪಟ್ಟಿಯಲ್ಲಿ ಉದ್ಯಮಿ ಹಾಗು ಅಮೆರಿದ ಟ್ರಂಪ್ ಸರ್ಕಾರದ ಸಚಿವ ಎಲಾನ್ ಮಸ್ಕ್ 29 ಲಕ್ಷ ಕೋಟಿ ರು.ಆಸ್ತಿ ಒಡೆಯನಾಗಿದ್ದು ವಿಶ್ವದ ಶ್ರೀಮಂತ ವ್ಯಕ್ತಿ ಎಂದು ಹೆಸರಿಸಿದೆ. ಫೇಸ್‌ಬುಕ್ ಮಾರ್ಕ್ ಜುಗರಬರ್ಗ್ 19 ಲಕ್ಷ ಕೋಟಿ ರು.ನೊಂದಿಗೆ 2ನೇ ಸ್ಥಾನದಲ್ಲಿದ್ದರೆ. ಜೆಫ್ ಬೆಜೋಸ್ 18 ಲಕ್ಷ ಕೋಟಿ ರು. ಆಸ್ತಿಯೊಂದಿಗೆ 3ನೇ ಸ್ಥಾನ ಪಡೆದಿದ್ದಾರೆ. ಇನ್ನು ಭಾರತದ ಮುಕೇಶ್ ಅಂಬಾನಿ ಟಾಪ್ 10ರ ಪಟ್ಟಿಯಿಂದ ಹೊರಬಿದ್ದಿದ್ದಾರೆ.



ಪ್ರಸ್ತುತ 7.85 ಲಕ್ಷ ಕೋಟಿ ರು. ಆಸ್ತಿಯೊಂದಿಗೆ 18ನೇ ಸ್ಥಾನ ಪಡೆದಿದ್ದಾರೆ. ಉಳಿದಂತೆ 4.8 ಲಕ್ಷ ಕೋಟಿ ರು. ಆಸ್ತಿ ಹೊಂದಿರುವ ಗೌತಮ್ ಅದಾನಿ 28ನೇ ಸ್ಥಾನ, 4.7 ಲಕ್ಷ ಕೋಟಿ ರು. ಆಸ್ತಿ ಹೊಂದಿರುವ ಸಾವಿತ್ರಿ ಜಿಂದಾಲ್ 56ನೇ ಸ್ಥಾನ ಪಡೆದಿದ್ದಾರೆ. ವರದಿ ಅನ್ವಯ ವಿಶ್ವದಲ್ಲಿ 3028 ಶತಕೋಟ್ಯಧಿಪತಿಗಳಿದ್ದಾರೆ. ಇವರ ಒಟ್ಟು ಸಂಪತ್ತು 1,368 ಲಕ್ಷ ಕೋಟಿ ರು. ಆಗಿದೆ. ಪಟ್ಟಿಯಲ್ಲಿ ಅಮೆರಿಕ (902 ಶ್ರೀಮಂತರು) ಅಗ್ರಸ್ಥಾನದಲ್ಲಿದೆ, ಚೀನಾ (516) ಮತ್ತು ಭಾರತ (205) 2 ಮತ್ತು 3ನೇ ಸ್ಥಾನದಲ್ಲಿವೆ.

## ವಿದ್ಯಾರ್ಥಿ ವೇತನಕ್ಕಾಗಿ ನಕಲಿ ದಾಖಲೆ: ವಿದ್ಯಾರ್ಥಿಗಳಿಗೆ ನೋಟಿಸ್

**ಅಗರ್ತಲಾ:** ವಿದ್ಯಾರ್ಥಿ ವೇತನ ಪಡೆಯಲು ಸುಳ್ಳು ಆದಾಯ ಪ್ರಮಾಣ ಪತ್ರಗಳನ್ನು ಸಲ್ಲಿಸಿದ್ದಕ್ಕಾಗಿ 34 ಎಸ್‌ಟಿ ವಿದ್ಯಾರ್ಥಿಗಳಿಗೆ ತ್ರಿಪುರಾ ಸರ್ಕಾರ ಶೋಕಾಸ್ ನೋಟಿಸ್ ನೀಡಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. 2023-24ನೇ ಶೈಕ್ಷಣಿಕ ವರ್ಷದಲ್ಲಿ ರಾಷ್ಟ್ರೀಯ ವಿದ್ಯಾರ್ಥಿ ವೇತನ ಪೋರ್ಟಲ್, ಮೂಲಕ 35,665 ಎಸ್‌ಟಿ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಸಲ್ಲಿಸಿದ್ದರು ಎಂದು ಬುಡಕಟ್ಟು ಕಲ್ಯಾಣ ಇಲಾಖೆಯ ನಿರ್ದೇಶಕ ಸುಭಾಶಿಶ್ ದಾನ್ ಹೇಳಿದ್ದಾರೆ.

ಅಧಿಕಾರಿಗಳು ನಡೆಸಿದ ವಿಚಾರಣೆಯಲ್ಲಿ 34 ಎಸ್‌ಟಿ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನಕ್ಕಾಗಿ ರಾಷ್ಟ್ರೀಯ ವಿದ್ಯಾರ್ಥಿ ವೇತನ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಿದ್ದು, ನಕಲಿ ಆದಾಯ ಪ್ರಮಾಣಪತ್ರಗಳನ್ನು ಅಪ್‌ಲೋಡ್ ಮಾಡಿದ್ದಾರೆ ಎಂದು ತಿಳಿದುಬಂದಿದೆ ಎಂದು ಅವರು ತಿಳಿಸಿದ್ದಾರೆ. ವಿದ್ಯಾರ್ಥಿ ವೇತನ ಪಡೆಯಲು ಇಂತಹ ನಕಲಿ ಆದಾಯ ಪ್ರಮಾಣಪತ್ರಗಳನ್ನು ಸಲ್ಲಿಸುವುದು ಕ್ರಿಮಿನಲ್ ಅಪರಾಧವಾಗಿದೆ.

ಈ ಕುರಿತು ಎಫ್‌ಐಆರ್ ಏಕೆ ದಾಖಲಿಸಬಾರದು ಎಂದು ಕಾರಣ ಕೇಳಿ ವಿದ್ಯಾರ್ಥಿಗಳಿಗೆ ನೋಟಿಸ್ ನೀಡಲಾಗಿದೆ. ಏಪ್ರಿಲ್ 16ರೊಳಗೆ ನೋಟಿಸ್‌ಗೆ ಉತ್ತರಿಸುವಂತೆ ತಿಳಿಸಲಾಗಿದೆ.

## ಮಮತಾ ಬ್ಯಾನರ್ಜಿ ಸರ್ಕಾರಕ್ಕೆ ತೀವ್ರ ಮುಖಭಂಗ

**ಕೋಲ್ಕತಾ:** ಶಿಕ್ಷಕರ ಆಯ್ಕೆ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪಗಳ ನಡುವೆಯೇ ಪಶ್ಚಿಮ ಬಂಗಾಳ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಶಾಕ್ ನೀಡಿದ್ದು, 25,000 ಶಿಕ್ಷಕರನ್ನು ಗುರುವಾರ ವಜಾಗೊಳಿಸಿದೆ. ಹೌದು.. ಸರ್ಕಾರಿ ಮತ್ತು ಅನುದಾನಿತ ಶಾಲೆಗಳಿಗೆ 25,000 ಶಿಕ್ಷಕರು ಮತ್ತು ಬೋಧಕೇತರ ಸಿಬ್ಬಂದಿಗಳ ನೇಮಕಾತಿಯನ್ನು ರದ್ದುಗೊಳಿಸಿದ್ದ ಕೋಲ್ಕತ್ತಾ ಹೈಕೋರ್ಟ್ ಆದೇಶವನ್ನು ಸುಪ್ರೀಂ ಕೋರ್ಟ್ ಗುರುವಾರ ಎತ್ತಿ ಹಿಡಿದಿದೆ. ಸುಪ್ರೀಂ ಕೋರ್ಟ್ ನಿರ್ಧಾರ ಇದೀಗ ಸಿಎಂ ಮಮತಾ ಬ್ಯಾನರ್ಜಿ ಸರ್ಕಾರಕ್ಕೆ ಆಘಾತ ನೀಡಿದೆ.



**25,000 ಶಿಕ್ಷಕರ ವಜಾ**

ಸರ್ಕಾರಿ ಮತ್ತು ಅನುದಾನಿತ ಶಾಲೆಗಳಿಗೆ 25,753 ಶಿಕ್ಷಕರು ಮತ್ತು ಸಹಾಯಕ ಸಿಬ್ಬಂದಿಯನ್ನು ನೇಮಕ ಮಾಡಿದ್ದ ಶಾಲಾ ಸೇವಾ ಆಯೋಗದ(ಎಸ್‌ಎಸ್‌ಸಿ) ಪ್ರಕ್ರಿಯೆಯನ್ನು ಕೋಲ್ಕತ್ತಾ ಹೈಕೋರ್ಟ್ ರದ್ದುಗೊಳಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ಪಶ್ಚಿಮ ಬಂಗಾಳ ಸರ್ಕಾರ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಇದೀಗ ಸುಪ್ರೀಂ ಕೋರ್ಟ್‌ನಲ್ಲೂ ದೀದಿ ಸರ್ಕಾರಕ್ಕೆ ಹಿನ್ನಡೆಯಾಗಿದೆ. ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿ ಪಿವಿ ಸಂಜಯ್ ಕುಮಾರ್ ಅವರ ಪೀಠ, ಪಶ್ಚಿಮ ಬಂಗಾಳ ಶಾಲಾ ಸೇವಾ ಆಯೋಗದ ಅಡಿಯಲ್ಲಿ ನೇಮಕಗೊಂಡ 25,000ಕ್ಕೂ ಅಧಿಕ ಶಿಕ್ಷಕರು ಮತ್ತು ಬೋಧಕೇತರ ಸಿಬ್ಬಂದಿಗಳ ನೇಮಕಾತಿ ಆಯ್ಕೆ ಪ್ರಕ್ರಿಯೆಯು ಸಂಪೂರ್ಣ ವಂಚನೆಯಿಂದ ಕೂಡಿದೆ ಎಂದು ಹೇಳಿದ ಪೀಠ ಇಡೀ ನೇಮಕಾತಿ ಪ್ರಕ್ರಿಯೆಯನ್ನೇ ರದ್ದುಗೊಳಿಸಿದೆ.

ಹೈಕೋರ್ಟ್ ನೀಡಿರುವ ಆದೇಶದಲ್ಲಿ ಮಧ್ಯಪ್ರವೇಶಿಸಲು ಯಾವುದೇ ಸೂಕ್ತ ಕಾರಣ ನಮಗೆ ಕಂಡು ಬಂದಿಲ್ಲ ಎಂದು ಸುಪ್ರೀಂ ಕೋರ್ಟ್ ಪೀಠವು ಹೇಳಿದ್ದು, ಮೂರು ತಿಂಗಳೊಳಗೆ ಹೊಸ ಆಯ್ಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸುವಂತೆ ರಾಜ್ಯ ಸರ್ಕಾರಕ್ಕೆ ಸೂಚಿಸಿದೆ. ಅಂತೆಯೇ ಈ ಹೊಸ ಪ್ರಕ್ರಿಯೆಯನ್ನು ಪೂರ್ಣಗೊಳಿಸುವವರು 2016 ರಲ್ಲಿ ನೇಮಕಗೊಂಡಾಗಿನಿಂದ ಪಡೆದ ಸಂಬಳವನ್ನು ಹಿಂದಿರುಗಿಸಬೇಕಾಗಿಲ್ಲ. ಆದರೆ ಪಾವತಿಸದವರು ಅದನ್ನು ಮರುಪಾವತಿಸಬೇಕು ಎಂದೂ ಹೇಳಿದೆ. ಆದರೆ ಇದರಲ್ಲಿ ನ್ಯಾಯಾಲಯವು ಅಂಗವಿಕಲರಿಗೆ ಸಡಿಲಿಕೆ ನೀಡಿದ್ದು, ಅವರು ತಮ್ಮ ಪ್ರಸ್ತುತ ಹುದ್ದೆಯಲ್ಲಿ ಮುಂದುವರಿಯಬಹುದು ಎಂದು ಹೇಳಿದೆ.

## ದರೋಡೆ ಪ್ರಕರಣ ಭೇದಿಸಲು ಪೊಲೀಸರಿಗೆ ನೆರವಾದ ಮದುವೆ ಆಮಂತ್ರಣ ಪತ್ರಿಕೆ

**ಪಾಲ್ಘರ್:** ಮಹಾರಾಷ್ಟ್ರದ ಪಾಲ್ಘರ್ ಜಿಲ್ಲೆಯಲ್ಲಿ ನಡೆದ ದರೋಡೆ ಪ್ರಕರಣವನ್ನು ಭೇದಿಸುವಲ್ಲಿ ಪೊಲೀಸರಿಗೆ ಮದುವೆ ಆಮಂತ್ರಣ ಪತ್ರಿಕೆ ನೆರವಾಗಿದೆ. ಸಂತ್ರಸ್ತನ ಸಹೋದರ ಅಪರಾಧದಲ್ಲಿ ಭಾಗಿಯಾಗಿರುವುದು ಕಂಡುಬಂದಿದೆ ಎಂದು ಅಧಿಕಾರಿಯೊಬ್ಬರು ಗುರುವಾರ ತಿಳಿಸಿದ್ದಾರೆ. ಮಾರ್ಚ್ 28ರಂದು ಜನ್ವಾರ್‌ನ ವಾವರ್ ಗ್ರಾಮದ ಬಳಿ ದರೋಡೆ ನಡೆದಿತ್ತು ಎಂದು ಅವರು ಹೇಳಿದ್ದಾರೆ.

ಇಲ್ಲಿನ ಮೊಖಡಾ ತಾಲ್ಲೂಕಿನ ಖೋಡಾಲಾ ನಿವಾಸಿ ಬೋರು ಖಂಡು ಬಿನ್ನಾರ್ (30) ಪಿಕಪ್ ವ್ಯಾನ್‌ನಲ್ಲಿ ಪ್ರಯಾಣಿಸುತ್ತಿದ್ದಾಗ, ಮೂವರು ಅಪರಿಚಿತ ವ್ಯಕ್ತಿಗಳು ತಮ್ಮ ಮೋಟಾರ್‌ಬೈಕ್ ಕೆಟ್ಟುಹೋಗಿದೆ ಎಂಬ ನೆಪದಲ್ಲಿ ಅವರನ್ನು ಅಡ್ಡಗಟ್ಟಿದ್ದರು. ವ್ಯಾನ್ ನಿಲ್ಲಿಸಿ ಸಹಾಯಕ್ಕೆ




ಹೋದಾಗ ದರೋಡೆಕೋರರು ಆ ವ್ಯಕ್ತಿ, ವ್ಯಾನ್ ಚಾಲಕನ ಕಣ್ಣಿಗೆ ಮೆಣಸಿನ ಪುಡಿ ಎಸೆದು, ಚಾಲಕನ ಸೀಟಿನ ಹಿಂದೆ ಇಟ್ಟಿದ್ದ 6,85,500 ಹಣವನ್ನು ದೋಚಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಾಲಾಸಾಹೇಬ್ ಪಾಟೀಲ್ ತಿಳಿಸಿದ್ದಾರೆ. ಓಡಿಹೋಗುವ ಮೊದಲು ಭೀಕರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ಆ ವ್ಯಕ್ತಿಗೆ ದರೋಡೆಕೋರರು ಬೆದರಿಕೆ ಹಾಕಿದ್ದರು ಎಂದೂ ಅಧಿಕಾರಿ ತಿಳಿಸಿದ್ದಾರೆ.

ಜವಾಹರ್ ಪೊಲೀಸರು ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 309(4), 3(5) ಅಡಿಯಲ್ಲಿ ಪ್ರಕರಣ ದಾಖಲಿಸಿದ್ದರು. ಅಪರಾಧ ಸ್ಥಳದಲ್ಲಿ ತನಿಖೆ ನಡೆಸಿದಾಗ, ಪೊಲೀಸರಿಗೆ ಮೆಣಸಿನ ಪುಡಿಯನ್ನು ಸುತ್ತಿಡಲಾಗಿದ್ದ ಮದುವೆಯ ಆಮಂತ್ರಣ ಪತ್ರಿಕೆ ಸಿಕ್ಕಿತ್ತು. ಆಹ್ವಾನ ಪತ್ರಿಕೆಯಲ್ಲಿ ಹೆಸರು ಉಲ್ಲೇಖಿಸಲಾಗಿದ್ದ ವ್ಯಕ್ತಿ ದರೋಡೆಯಲ್ಲಿ ಭಾಗಿಯಾಗಿರುವುದು ಕಂಡುಬಂದಿದೆ. ನಂತರ, ಇತರ ಮೂವರು ಅಪರಾಧಿಗಳನ್ನು ಸಹ ಬಂಧಿಸಲಾಗಿದೆ. ಕಳೆದ ಎರಡು ದಿನಗಳಲ್ಲಿ ನಾಲ್ವರನ್ನು ವಶಕ್ಕೆ ಪಡೆಯಲಾಗಿದೆ ಎಂದು ಅವರು ಹೇಳಿದ್ದಾರೆ. ಅಧಿಕಾರಿಯ ಪ್ರಕಾರ, ಬಂಧಿಸಲಾದ ನಾಲ್ವರಲ್ಲಿ ಹಣ ಕಳೆದುಕೊಂಡ ವ್ಯಕ್ತಿಯ ಸಹೋದರ ಖಂಡು ಬಿನ್ನಾರ್ (34) ದರೋಡೆಯ ರೂವಾರಿ ಎಂದು ತಿಳಿದುಬಂದಿದೆ.


ಮದುವೆ ಆಮಂತ್ರಣ ಪತ್ರಿಕೆಯಲ್ಲಿ ಹೆಸರಿದ್ದ ಮೊಖಡಾ ನಿವಾಸಿ ಕಿರಣ್ ಅನಂತ ಲ್ಯಾಮ್ (23), ನಾಸಿಕ್ ಪರಮೇಶ್ವರ ಕಮಲಾಕರ್ ಜೋಲೆ (24), ದಾದಾ ಬಾಜಿರಾವ್ ಪೆಹ್ರ (24) ಬಂಧಿತ ಇತರ ಮೂವರು ವ್ಯಕ್ತಿಗಳು. ಬಂಧಿತ ವ್ಯಕ್ತಿಗಳಿಂದ ಕದ್ದ ಸಂಪೂರ್ಣ ಹಣವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ ಎಂದು ಅಧಿಕಾರಿ ತಿಳಿಸಿದ್ದಾರೆ.

## ಅಮೆರಿಕ ಸುಂಕ ಹೇರಿಕೆಯಿಂದ ದೇಶದ ಆರ್ಥಿಕತೆ ನಾಶ: ರಾಹುಲ್

**ನವದೆಹಲಿ:** ಭಾರತದ 4,000 ಚದರ ಕಿ.ಮೀ. ಭೂಪ್ರದೇಶವನ್ನು ಚೀನಾ ವಶಪಡಿಸಿಕೊಂಡಿದೆ. ಹಾಗೆಯೇ ಅಮೆರಿಕ ವಿಧಿಸಿರುವ ಆಮದು ಸುಂಕ ಭಾರತದ ಆರ್ಥಿಕತೆಯನ್ನು ಸಂಪೂರ್ಣವಾಗಿ ನಾಶಪಡಿಸಲಿದೆ ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಗುರುವಾರ ಕಳವಳ ವ್ಯಕ್ತಪಡಿಸಿದ್ದಾರೆ.

ಸಂಸತ್ತಿನಲ್ಲಿ ಶೂನ್ಯ ವೇಳೆಯಲ್ಲಿ ಈ ಕುರಿತು ರಾಹುಲ್ ಗಾಂಧಿ ಪ್ರಸ್ತಾಪಿಸಿದ್ದಾರೆ. ಅಮೆರಿಕ ವಿಧಿಸಿರುವ ಸುಂಕಗಳು ಭಾರತೀಯ ಆರ್ಥಿಕತೆಯನ್ನು ವಿಶೇಷವಾಗಿ ವಾಹನ, ಉದ್ಯಮ, ಔಷಧ ಮತ್ತು ಕೃಷಿಯಂತಹ ಕ್ಷೇತ್ರಗಳನ್ನು ಸಂಪೂರ್ಣವಾಗಿ ನಾಶಪಡಿಸಲಿದೆ ಎಂದು ಅವರು ಹೇಳಿದ್ದಾರೆ.

ಚೀನಾ ಜತೆ ರಾಜತಾಂತ್ರಿಕ ಬಾಂಧವ್ಯದ 75ನೇ ವರ್ಷಾಚರಣೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿರುವ ಅವರು ಕೇಂದ್ರದಿಂದ ಉತ್ತರವನ್ನು ಬಯಸಿದ್ದಾರೆ. ಚೀನಾ ನಮ್ಮ ಭೂಪ್ರದೇಶವನ್ನು ವಶಪಡಿಸಿಕೊಂಡಿದೆ. ಆದರೆ ಇತ್ತೀಚಿಗೆ ನಮ್ಮ ವಿದೇಶಾಂಗ ಕಾರ್ಯದರ್ಶಿ



> **ಶೂನ್ಯ ವೇಳೆಯಲ್ಲಿ ಮಾತನಾಡಿದ ರಾಹುಲ್, ಭಾರತದ 4,000 ಚದರ ಕಿ.ಮೀ. ಪ್ರದೇಶವನ್ನು ಚೀನಾ ಅತಿಕ್ರಮಿಸಿದೆ ಎಂಬುದು ಎಲ್ಲರಿಗೂ ತಿಳಿದಿರುವ ಸತ್ಯ. ಹೀಗಿದ್ದರೂ, ವಿದೇಶಾಂಗ ಕಾರ್ಯದರ್ಶಿ ಅವರು ಚೀನಾದ ರಾಯಭಾರಿಯೊಂದಿಗೆ ಕೇಕ್ ಕತ್ತರಿಸಿದ್ದಾರೆ. ಇದು ಆಘಾತಕಾರಿ ಎಂದಿದ್ದಾರೆ.**

ಚೀನಾದ ರಾಯಭಾರಿಯೊಂದಿಗೆ ಕೇಕ್ ಕತ್ತರಿಸುವುದನ್ನು ನೋಡಿ ನನಗೆ ಆಘಾತವಾಯಿತು ಎಂದು ಅವರು ಹೇಳಿದ್ದಾರೆ. 2020ರ ಗಾಲ್ವನ್ ಕಣಿವೆಯಲ್ಲಿ ಚೀನಾ ವಿರುದ್ಧದ ಸಂಘರ್ಷದಲ್ಲಿ 20 ಯೋಧರು ಹುತಾತ್ಮರಾಗಿರುವ ಘಟನೆಯನ್ನು ಪ್ರಸ್ತಾಪಿಸಿರುವ ರಾಹುಲ್, ಹುತಾತ್ಮರ ನೆನಪಿಗಾಗಿ ಕೇಕ್ ಕತ್ತರಿಸುವ ಮೂಲಕ ಸಂಭ್ರಮ ನಡೆಯುತ್ತಿದೆ. ಸಹಜ ಸ್ಥಿತಿಗೆ ಬರುವುದನ್ನು ನಾವು ವಿರೋಧಿಸುತ್ತಿಲ್ಲ.

ಆದರೆ ಗಡಿಯಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಬೇಕು. ನಾವು ನಮ್ಮ ಭೂಭಾಗವನ್ನು ಮರಳಿ ಪಡೆಯಬೇಕು ಎಂದು ಅವರು ಆಗ್ರಹಿಸಿದ್ದಾರೆ.

ನೀವು ಚೀನಾಕ್ಕೆ 4,000 ಚದರ ಕಿ.ಮೀ. ಭೂಮಿಯನ್ನು ನೀಡಿದ್ದೀರಿ. ಮತ್ತೊಂದೆಡೆ ಮಿತ್ರ ರಾಷ್ಟ್ರವಾದ ಅಮೆರಿಕವು ಇದ್ದಕ್ಕಿದ್ದಂತೆ ಸುಂಕ ವಿಧಿಸಲು ನಿರ್ಧರಿಸಿದೆ ಎಂದು ರಾಹುಲ್ ಉಲ್ಲೇಖಿಸಿದ್ದಾರೆ.

**ಪ್ರತಿ ವಿದೇಶಿಗರ ಮುಂದೆ ತಲೆಬಾಗುವ ಬಿಜೆಪಿ, ಆರ್‌ಎಸ್‌ಎಸ್:** ಕೇಂದ್ರದ ವಿರುದ್ಧ ರಾಹುಲ್ ಕಿಡಿ ಚೀನಾ ಅತಿಕ್ರಮಿಸಿರುವ ಭೂ ಪ್ರದೇಶವನ್ನು ಮರಳಿ ಪಡೆಯುವ ನಿಟ್ಟಿನಲ್ಲಿ ಹಾಗೂ 'ಮಿತ್ರ' ಅಮೆರಿಕ ವಿಧಿಸಿರುವ ಶೇ 27ರಷ್ಟು ಸುಂಕದ ವಿಚಾರದಲ್ಲಿ ಯಾವ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವನ್ನು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಪ್ರಶ್ನಿಸಿದ್ದಾರೆ.

ಲೋಕಸಭೆಯಲ್ಲಿ ಗುರುವಾರ ವಾಗ್ದಾಳಿ ನಡೆಸಿರುವ ಅವರು, ಕೇಸರಿ ಪಕ್ಷ (ಬಿಜೆಪಿ), ಆರ್‌ಎಸ್‌ಎಸ್. ಪ್ರತಿಯೊಬ್ಬ ವಿದೇಶಿಗನ ಎದುರು ತಲೆ ಬಾಗುತ್ತವೆ ಎಂದು ತಿವಿದಿದ್ದಾರೆ.

ಗಾಲ್ವನ್ ಕಣಿವೆಯಲ್ಲಿ ನಡೆದ ಸಂಘರ್ಷದ ವೇಳೆ ಭಾರತದ 20 ಯೋಧರು ಹುತಾತ್ಮರಾದ ವಿಚಾರವನ್ನು ಸ್ಮರಿಸಿದ ಅವರು, ಕೇಂದ್ರ ಸರ್ಕಾರವು ಯೋಧರ ಬಲಿದಾನವನ್ನು ಕೇಕ್ ಕತ್ತರಿಸಿ ಸಂಭ್ರಮಿಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

## ವಕ್ಫ್ ಮಂಡಳಿಗಳು ಭೂ ಅತಿಕ್ರಮಣ ಮಾಡಿವೆ ಅದೊಂದು ಮಾಫಿಯಾ: ಯೋಗಿ

**ಪ್ರಯಾಗ್‌ರಾಜ್:** ವಕ್ಫ್ ಮಂಡಳಿಗಳ ವಿರುದ್ಧ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಗುರುವಾರ ತೀವ್ರ ವಾಗ್ದಾಳಿ ನಡೆಸಿದ್ದಾರೆ. ವಕ್ಫ್ ಮಂಡಳಿ ಗಳಿಂದ ಭೂ ಅತಿಕ್ರಮಣವಾಗಿದೆ ಎಂದು ಆರೋಪಿಸಿರುವ ಅವರು, ಸಾರ್ವಜನಿಕ, ಐತಿಹಾಸಿಕ ಸ್ಥಳಗಳ ಮೇಲಿನ ಅದರ ನಿರಂಕುಶ ಹಕ್ಕುಗಳನ್ನು ಇನ್ನುಮುಂದೆ ಸಹಿಸಲಾಗುವುದಿಲ್ಲ ಎಂದು ಹೇಳಿದ್ದಾರೆ. ಪ್ರಯಾಗ್‌ರಾಜ್‌ನಲ್ಲಿ ನಡೆದ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಆದಿತ್ಯನಾಥ್, ವಕ್ಫ್ ಮಂಡಳಿಗಳು ನಗರಗಳಾದ್ಯಂತ ಭೂಮಿಗಳ ಮೇಲೆ ಆಧಾರರಹಿತ ಹಕ್ಕುಗಳನ್ನು ಸಾಧಿಸುತ್ತಿವೆ. ಕುಂಭಮೇಳದ ಸಿದ್ಧತೆಗಳ ಸಮಯದಲ್ಲಿಯೂ ಅವರು ಕಾರ್ಯಕ್ರಮ ಆಯೋಜಿಸಿದ್ದ ಭೂಮಿ ತಮಗೆ ಸೇರಿದ್ದು ಎಂದು ಘೋಷಿಸಿದ್ದರು. ಹೀಗಾಗಿ, ವಕ್ಫ್ ಮಂಡಳಿಯು ಭೂ ಮಾಫಿಯಾವಾಗಿ ಮಾರ್ಪಟ್ಟಿದೆಯೇ? ಎಂಬ ಪ್ರಶ್ನೆಯನ್ನು ನಾವು ಕೇಳಲೇಬೇಕಿದೆ ಎಂದಿದ್ದಾರೆ. ತಮ್ಮ ಸರ್ಕಾರದ ಅಡಿಯಲ್ಲಿ, ಅಂತಹ ಅತಿಕ್ರಮಣಗಳನ್ನು ತೆರವು ಮಾಡಲಾಗಿದೆ.

ಮಾಫಿಯಾಗಳನ್ನು ಉತ್ತರ ಪ್ರದೇಶದಿಂದ ಓಡಿಸಲಾಗಿದೆ ಎಂದು ಅವರು ಒತ್ತಿ ಹೇಳಿದ್ದಾರೆ. ನಿಶಾದ್ ರಾಜ್‌ಗೆ ಸಂಬಂಧಿಸಿದ

> **ವಕ್ಫ್ ತಿದ್ದುಪಡಿ ಮಸೂದೆ 2025 ಲೋಕಸಭೆಯಲ್ಲಿ ಅಂಗೀಕಾರವಾಗಿದ್ದು, ರಾಜ್ಯಸಭೆಯಲ್ಲಿ ಮಂಡಿಸಲಾಗಿದೆ. ರಾಜ್ಯವು ಇನ್ನು ಮುಂದೆ ಅಕ್ರಮವಾಗಿ ವಕ್ಫ್ ಮಂಡಳಿ ಹಕ್ಕು ಸಾಧಿಸುವುದನ್ನು ಸಹಿಸುವುದಿಲ್ಲ. ನಮಗೆ ರಾಷ್ಟ್ರೀಯ ಹಿತಾಸಕ್ತಿ ಮೊದಲು**
> -ಯೋಗಿ ಆದಿತ್ಯನಾಥ್
> ಉತ್ತರ ಪ್ರದೇಶದ ಮುಖ್ಯಮಂತ್ರಿ

ಪವಿತ್ರ ಭೂಮಿ ಸೇರಿದಂತೆ ವಿವಿಧ ಸ್ಥಳಗಳಲ್ಲಿ ವಕ್ಫ್ ಹೆಸರಿನಲ್ಲಿ ಅತಿಕ್ರಮಣಗಳನ್ನು ಮಾಡಲಾಗಿದೆ.

ಆದರೆ, ಇದನ್ನು ಮುಂದುವರಿಸಲು ಬಿಡಲಾಗುವುದಿಲ್ಲ. ಅವರ ಆಕ್ಷೇಪಣೆಗಳ ಹೊರತಾಗಿಯೂ ಭವ್ಯ, ದೈವಿಕ ಕುಂಭಮೇಳವನ್ನು ಆಯೋಜಿಸಲಾಗಿದೆ ಎಂದು ಅವರು ಹೇಳಿದ್ದಾರೆ. ವಕ್ಫ್ ಮಂಡಳಿಯ ಅಕ್ರಮಗಳ ವಿರುದ್ಧ ಕ್ರಮ ಕೈಗೊಂಡಿದ್ದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಮುಖ್ಯಮಂತ್ರಿ ಶ್ಲಾಘಿ ಸಿದ್ದಾರೆ. ರಾಷ್ಟ್ರಕ್ಕೆ ನಿಷ್ಠ ರಾಗಿರುವವರು ಯಾವಾಗಲೂ ತಮ್ಮ ಮುಂದಿನ ಹಾದಿಯನ್ನು ಕಂಡುಕೊಳ್ಳುತ್ತಾರೆ ಎಂದು ಹೇಳಿದ್ದಾರೆ.



## ಮಿನಿ ನ್ಯೂಸ್

### ಥಾಯ್ಲೆಂಡ್‌ಗೆ ಬಂದಿಳಿದ ಪ್ರಧಾನಿ ಮೋದಿ; ಭವ್ಯ ಸ್ವಾಗತ



**ಬ್ಯಾಂಕಾಕ್:** ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಎರಡು ದಿನಗಳ ಭೇಟಿಗಾಗಿ ಗುರುವಾರ ಥಾಯ್ಲೆಂಡ್‌ಗೆ ಬಂದಿಳಿದಿದ್ದಾರೆ. ಈ ಸಂದರ್ಭದಲ್ಲಿ ಭಾರತೀಯ ಸಮುದಾಯದವರು ಪ್ರಧಾನಿ ಮೋದಿಗೆ ಭವ್ಯ ಸ್ವಾಗತವನ್ನು ಕೋರಿದ್ದಾರೆ.

ಎರಡು ದಿನಗಳ ಥಾಯ್ಲೆಂಡ್ ಪ್ರವಾಸದಲ್ಲಿರುವ ಪ್ರಧಾನಿ ಮೋದಿ. 6ನೇ ಬಂಗಾಳ ಕೊಲ್ಲಿ ಬಹುವಲಯ ತಾಂತ್ರಿಕ, ಆರ್ಥಿಕ ಸಹಕಾರ ಸಂಘಟನೆ ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ. ಥಾಯ್ಲೆಂಡ್‌ನ ಪ್ರಧಾನಿ ಪೆಟೊಂತಾರ್ನ್ ಶಿನೊವಾರ್ಥ್ ಅವರನ್ನು ಭೇಟಿಯಾಗಿರುವ ಪ್ರಧಾನಿ ಮೋದಿ ಮಾತುಕತೆ ನಡೆಸಿದ್ದಾರೆ.

ಥಾಯ್ಲೆಂಡ್‌ನ ರಾಜ ಮಹಾ ವಾಜಿರಲೊಂಗ್‌ಕೋರ್ನ್ ಅವರನ್ನು ಪ್ರಧಾನಿ ಮೋದಿ ಭೇಟಿ ಮಾಡಲಿದ್ದಾರೆ. ಭಾರತ-ಥಾಯ್ಲೆಂಡ್ ಪಾಲುದಾರಿಕೆಗೆ ಸಂಬಂಧಿ ಸಿದಂತೆ ಉಭಯ ನಾಯಕರು ವಿಸ್ತೃತ ಚರ್ಚೆಯಲ್ಲಿ ಭಾಗಿಯಾಗಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ. ಈ ಸಂದರ್ಭದಲ್ಲಿ ಥಾಯ್ ರಾಮಾಯಣ ವಿಶೇಷ ಪ್ರದರ್ಶನವನ್ನು ಪ್ರಧಾನಿ ಮೋದಿ ವೀಕ್ಷಿಸಿದ್ದಾರೆ. ಈ ಸಂಬಂಧ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಬರೆದುಕೊಂಡಿದ್ದು, ರಾಮಾಯಣವು ಏಷ್ಯಾದ ಹಲವು ಭಾಗಗಳಲ್ಲಿ ಸಂಪ್ರದಾಯವನ್ನು ಸಂಪರ್ಕಿಸುತ್ತದೆ ಎಂದು ಕೊಂಡಾಡಿದ್ದಾರೆ.

### ಐವರು ಬಾಂಗ್ಲಾದೇಶಿ ನುಸುಳುಕೋರರ ಬಂಧನ; ಗಡೀಪಾರು

**ಗುವಾಹಟಿ:** ಅಸ್ಸಾಂನ ಶ್ರೀಭೂಮಿ ಜಿಲ್ಲೆಯಲ್ಲಿ ಬಾಂಗ್ಲಾದೇಶದ ಐದು ಮಂದಿ ನುಸುಳುಕೋರರನ್ನು ಗುರುವಾರ ಬಂಧಿಸಿ ಗಡೀಪಾರು ಮಾಡಲಾಗಿದೆ ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ತಿಳಿಸಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಒಳನುಸುಳುವಿಕೆ ವಿರುದ್ಧದ ನಿರ್ಣಾಯಕ ಕ್ರಮದಲ್ಲಿ ಶ್ರೀಭೂಮಿ ಪೊಲೀಸರು ಐದು ಬಾಂಗ್ಲಾದೇಶಿ ಪ್ರಜೆಗಳನ್ನು ಬಂಧಿಸಿ, ಗಡೀಪಾರು ಮಾಡಿದ್ದಾರೆ ಎಂದು ಹೇಳಿದ್ದಾರೆ.

ನುಸುಳುಕೋರರನ್ನು ಮೊಹಮ್ಮದ್ ಇಮಾನ್ ಮೀರಾ, ಮೊಹಮ್ಮದ್ ನಯೀಮ್ ಅಹ್ಮದ್, ಮಿಯಾರ್ಘುಕಿ ಮೊಹಮ್ಮದ್ ರಸೆಲ್, ಅಬ್ದುಲ್ ಕಲಾಂ ಮಿಯಾ ಮತ್ತು ಮೊಹಮ್ಮದ್ ಮುನ್ನಾ ಎಂದು ಗುರುತಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಳೆದ ಏಳು ತಿಂಗಳಲ್ಲಿ 320ಕ್ಕೂ ಹೆಚ್ಚು ಒಳನುಸುಳುಕೋರರನ್ನು ಗಡೀಪಾರು ಮಾಡಲಾಗಿದೆ. ಯಾವುದೇ ವ್ಯಕ್ತಿ ಅಕ್ರಮವಾಗಿ ರಾಜ್ಯವನ್ನು ಪ್ರವೇಶಿಸದಂತೆ ಅಸ್ಸಾಂ ಪೊಲೀಸರು ಗಡಿಯುದ್ದಕ್ಕೂ ಹೆಚ್ಚಿನ ಎಚ್ಚರಿಕೆ ವಹಿಸುತ್ತಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

### 17.70ಗ್ರಾಂ ಹೆರಾಯಿನ್ ವಶ: ಮಹಿಳಾ ಕಾನ್‌ಸ್ಟೇಬಲ್ ಬಂಧನ

**ಚಂಡೀಗಢ:** ಪಂಜಾಬ್‌ನ ಬಟಿಂಡಾ ಜಿಲ್ಲೆಯಲ್ಲಿ 17.70 ಗ್ರಾಂ ಹೆರಾಯಿನ್ ಸಾಗಿಸುತ್ತಿದ್ದ ಮಹಿಳಾ ಪೊಲೀಸ್ ಕಾನ್‌ಸ್ಟೇಬಲ್‌ರನ್ನು ಪೊಲೀಸರು ಬಂಧಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಖಚಿತ ಮಾಹಿತಿ ಮೇರೆಗೆ ಮಾದಕ ದ್ರವ್ಯ ನಿಗ್ರಹ ಕಾರ್ಯಾಚರಣೆ ನಡೆಸಿದ ಪೊಲೀಸರು, ಬಟಿಂಡಾದ ಬಾದಲ್ ಮೇಲ್ಸೇತುವೆ ಬಳಿ ಕಾನ್‌ಸ್ಟೇಬಲ್ ಅಮನ್‌ದೀಪ್ ಕೌರ್ ಅವರ ವಾಹನವನ್ನು ತಡೆದು ಶೋಧ ನಡೆಸಿದರು. ಈ ವೇಳೆ 17.70 ಗ್ರಾಂ ಹೆರಾಯಿನ್ ಪತ್ತೆಯಾಗಿದೆ ಎಂದು ಉಪ ಪೊಲೀಸ್ ವರಿಷ್ಠಾಧಿಕಾರಿ ಹರ್ಬನ್ಸ್ ಸಿಂಗ್ ಹೇಳಿದ್ದಾರೆ. ಕಾನ್‌ಸ್ಟೇಬಲ್ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ. ಈ ಕುರಿತು ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.

### ಕೊಚ್ಚಿ ಹಿನ್ನೀರಿಗೆ ಕಸ ಎಸೆದ ಆರೋಪ: ಗಾಯಕನಿಗೆ 25 ಸಾವಿರ ದಂಡ

**ಕೊಚ್ಚಿ:** ಕೊಚ್ಚಿ ಹಿನ್ನೀರಿಗೆ ಕಸದ ಚೀಲ ಎಸೆದ ಆರೋಪದ ಮೇಲೆ ಖ್ಯಾತ ಹಿನ್ನೆಲೆ ಗಾಯಕ ಎಂ. ಜಿ. ಶ್ರೀಕುಮಾರ್ ಅವರಿಗೆ ಇಲ್ಲಿನ ಸ್ಥಳೀಯ ಸಂಸ್ಥೆ 25 ಸಾವಿರ ದಂಡ ವಿಧಿಸಿದೆ. ಈ ಸಂಬಂಧ ಗಾಯಕನಿಗೆ ನೋಟಿಸ್ ಜಾರಿ ಮಾಡಿರುವ ಮುಳವು ಕಾಡ್ ಗ್ರಾಮ ಪಂಚಾಯತ್, 15 ದಿನಗಳಲ್ಲಿ ದಂಡವನ್ನು ಪಾವತಿಸುವಂತೆ ಸೂಚಿಸಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ. ಶ್ರೀಕುಮಾರ್ ಅವರ ಮನೆಯ ಕೆಲಸದವರು ಕೊಚ್ಚಿ ಹಿನ್ನೀರಿಗೆ ಕಸದ ಚೀಲವನ್ನು ಎಸೆಯುತ್ತಿರುವದನ್ನು ಪ್ರವಾಸಿಗೊಬ್ಬರು ತಮ್ಮ ಮೊಬೈಲ್ ಫೋನ್‌ನಲ್ಲಿ ವಿಡಿಯೋ ಮಾಡಿಕೊಂಡಿದ್ದು, ಅದನ್ನು ಸಚಿವ ಎಂ.ಬಿ.ರಾಜೇಶ್ ಅವರನ್ನು ಟ್ಯಾಗ್ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದರು.

ಇದಕ್ಕೆ ಪ್ರತಿಕ್ರಿಯೆ ನೀಡಿದ್ದ ಸಚಿವರು, ಕಸ ಎಸೆದಿರುವ ಬಗ್ಗೆ ದೂರನ್ನು ಸಾಕ್ಷಿ ಸಮೇತ ಸರ್ಕಾರಿ ವಾಟ್ಸಾಪ್ ಸಂಖ್ಯೆಗೆ ಸಲ್ಲಿಸುವಂತೆ ಸೂಚಿಸಿದ್ದರು. ದೂರು ಸ್ವೀಕರಿಸಿದ ನಿಯಂತ್ರಣ ಕೊಠಡಿಯು, ಸ್ಥಳ ಪರಿಶೀಲಿಸಿ ವರದಿ ನೀಡುವಂತೆ ಅಧಿಕಾರಿಗಳಿಗೆ ನಿರ್ದೇಶಿಸಿದೆ. ನಂತರ ದಂಡ ಪಾವತಿಸುವಂತೆ ಗಾಯಕನಿಗೆ ನೋಟಿಸ್ ನೀಡಿದೆ ಎಂದು ಮೂಲಗಳು ತಿಳಿಸಿವೆ.

### ಬಾಳಾ ಸಾಹೇಬ್ ಸಿದ್ಧಾಂತದಿಂದ ದೂರ ಸರಿದ ಉದ್ಧವ್: ಶಿಂದೆ

**ಮುಂಬೈ:** ವಕ್ಫ್ ತಿದ್ದುಪಡಿ ಮಸೂದೆಗೆ ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾ ವಿರೋಧ ವ್ಯಕ್ತಪಡಿಸಿರುವುದಕ್ಕೆ ಕಿಡಿಕಾರಿರುವ ಮಹಾರಾಷ್ಟ್ರ ಉಪಮುಖ್ಯಮಂತ್ರಿ ಏಕನಾಥ ಶಿಂದೆ, ರಾಹುಲ್ ಗಾಂಧಿ ಪ್ರಭಾವದಿಂದಾಗಿ ಬಾಳಾ ಸಾಹೇಬ್ ಸಿದ್ಧಾಂತದಿಂದ ಉದ್ಧವ್ ಠಾಕ್ರೆ ದೂರ ಸರಿದಿದ್ದಾರೆ ಎಂದು ಹೇಳಿದ್ದಾರೆ. ಮಸೂದೆ ವಿಚಾರವಾಗಿ ಶಿವಸೇನಾ ನಿಲುವನ್ನು ಪ್ರಶ್ನಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಶಿಂದೆ, ಉದ್ಧವ್ ಠಾಕ್ರೆಯವರು ಬಾಳಾಸಾಹೇಬರ ಆದರ್ಶಗಳನ್ನು ಎತ್ತಿಹಿಡಿಯುತ್ತಾರೆಯೇ? ಅಥವಾ ರಾಹುಲ್ ಗಾಂಧಿಯವರ ಸೂಚನೆಗಳನ್ನು ಅನುಸರಿಸುತ್ತಾರೆಯೇ? ಎಂದು ಕೇಳಿದ್ದಾರೆ. ವಕ್ಫ್ ಮಸೂದೆಯಿಂದ ಮತಬ್ಯಾಂಕ್ ರಾಜಕೀಯದಲ್ಲಿ ತೊಡಗಿರುವವರ ನಿಜವಾದ ಮುಖಗಳು ಬಹಿರಂಗಗೊಂಡಿವೆ' ಎಂದು ಕಿಡಿಕಾರಿದ್ದಾರೆ.

# ಮದುವೆ ಆದವನೊಂದಿಗೆ ನಾನು ಸುತ್ತಾಡಲ್ಲ

ಪ್ರಕಾಶ್ ಜೊತೆಗಿನ ಡೇಟಿಂಗ್ ಸುದ್ದಿಗೆ ದಿವ್ಯಾ ಪ್ರತಿಕ್ರಿಯೆ



ನಟ ಕಮ್ ಮ್ಯೂಸಿಕ್ ಡೈರೆಕ್ಟರ್ ಜಿ.ವಿ ಪ್ರಕಾಶ್ ಜೊತೆ ದಿವ್ಯಾ ಭಾರತಿ ಡೇಟಿಂಗ್ ಬಗ್ಗೆ ಹಲವು ದಿನಗಳಿಂದ ಚರ್ಚೆಗೆ ಗ್ರಾಸವಾಗಿದೆ. ಈ ಬಗ್ಗೆ ದಿವ್ಯಾ ರಿಯಾಕ್ಟ್ ಮಾಡಿದ್ದಾರೆ. ಮದುವೆ ಆದ ವ್ಯಕ್ತಿಯೊಡನೆ ನಾನೇಕೆ ಸುತ್ತಲಿ, ಇದೊಂದು ಸುಳ್ಳು ವದಂತಿ ಎಂದು ನಟಿ ಸ್ಪಷ್ಟಪಡಿಸಿದ್ದಾರೆ. 2ನನ್ನ ಹೆಸರನ್ನು ಖಾಸಗಿ ಕುಟುಂಬದ ವಿಚಾರಕ್ಕೆ ಅನಗತ್ಯವಾಗಿ ಎಳೆದು ತರಲಾಗಿದೆ. ಜಿ.ವಿ ಪ್ರಕಾಶ್ ಅವರ ಕೌಟುಂಬಿಕ ಸಮಸ್ಯೆಗೂ ನನಗೂ ಸಂಬಂಧವಿಲ್ಲ. ನಾನು ಯಾವುದೇ ನಟರೊಂದಿಗೆ ಡೇಟಿಂಗ್ ಮಾಡುವುದಿಲ್ಲ. ಅದರಲ್ಲೂ ವಿವಾಹ ಆದವನೊಂದಿಗೆ ಸುತ್ತಾಡಲ್ಲ ಎಂದು ಖಡಕ್ ಆಗಿ ನಟಿ ಹೇಳಿದ್ದಾರೆ. ಇಂತಹ ವಿಚಾರಗಳಿಗೆ ಗಮನ ಕೊಡುವುದು ಬೇಡ ಎಂದು ನಾನು ಭಾವಿಸಿ ಸುಮ್ಮನಿದ್ದೆ, ಆದರೀಗ ಎಲ್ಲಾವೂ ಮಿತಿ ಮೀರಿದೆ. ನಾನು ಸ್ವಾವಲಂಬಿ ಮಹಿಳೆ, ಈ ರೀತಿ ನಿಜವಲ್ಲದ ಆರೋಪಗಳಿಗೆ ನನ್ನ ಇಮೇಜ್ ಹಾಳಾಗಲು ನಾನು ಬಿಡುವುದಿಲ್ಲ. ಹೀಗೆ ನೆಗೆಟಿವಿ ಹರಡುವ ಬದಲು ಉತ್ತಮ ಜಗತ್ತನ್ನು ನಿರ್ಮಿಸುವತ್ತ ಗಮನ ಹರಿಸೋಣ. ಈ ವಿಚಾರದ ಬಗ್ಗೆ ಇದೇ ನನ್ನ ಮೊದಲ ಹಾಗೂ ಕಡೆಯ ಪ್ರತಿಕ್ರಿಯೆ ಎಂದು ನಟಿ ಬರೆದುಕೊಂಡಿದ್ದಾರೆ. 2021ರಲ್ಲಿ 'ಬ್ಯಾಚುಲರ್' ಸಿನಿಮಾದಲ್ಲಿ ಜಿ.ವಿ ಪ್ರಕಾಶ್ ಮತ್ತು ದಿವ್ಯಾ ಭಾರತಿ ಒಟ್ಟಿಗೆ ಕೆಲಸ ಮಾಡಿದ್ದರು. ಅಂದಿನಿಂದ ಇಬ್ಬರ ನಡುವೆ ಲವ್ವಿಡವ್ವಿ ಇದೆ ಎಂದೇ ಸುದ್ದಿ ಹಬ್ಬಿತ್ತು. ಈ ವಿಚಾರ ಸುಳ್ಳು ಇಬ್ಬರೂ ಈ ಮೊದಲೇ ತಿರಸ್ಕರಿಸಿದ್ದರು.

## 50 ಕೆಜಿ ಚಿನ್ನ ತಂದು ಸಾಹಿಲ್‌ಗೆ ಕೊಟ್ಟಿದ್ದ ರನ್ಯಾ

### ರನ್ಯಾ ರಾವ್ ಜೊತೆಗೆ ವಾಟ್ಸಪ್ ಚಾಟಿಂಗ್



ನಟಿ ರನ್ಯಾ ರಾವ್ ಗೋಲ್ಡ್ ಸ್ಮಗ್ಲಿಂಗ್ ಪ್ರಕರಣದಲ್ಲಿ ಬಗೆದಷ್ಟೂ ಸ್ಫೋಟಕ ರಹಸ್ಯಗಳು ಬಯಲಾಗುತ್ತಲೇ ಇವೆ. ಹವಾಲಾ ವಹಿವಾಟಿನಲ್ಲಿ ನಟಿ ರನ್ಯಾ ಪಂಟರ್ ಆಗಿದ್ದ ನಟಿ, ಕಳೆದ ನವೆಂಬರ್ ತಿಂಗಳಿನಿಂದಲೇ ದುಬೈನಿಂದ 50 ಕೆಜಿ ಚಿನ್ನ ಸಾಗಿಸಿದ್ದಳು ಅನ್ನೋ ಸ್ಫೋಟಕ ಮಾಹಿತಿ ತನಿಖೆಯಲ್ಲಿ ಬಯಲಾಗಿದೆ. ಕಳೆದ ನವೆಂಬರ್ ತಿಂಗಳಿನಿಂದಲೇ ಬರೋಬ್ಬರಿ 50 ಕೆಜಿ ಚಿನ್ನ ತಂದು ತನಗೆ ಕೊಟ್ಟಿರುವುದಾಗಿ ಗೋಲ್ಡ್ ಸ್ಮಗ್ಲಿಂಗ್ ಪ್ರಕರಣದ 3ನೇ ಆರೋಪಿ ಸಾಹಿಲ್ ಜೈನ್ ಡಿಆರ್‌ಐ ಮುಂದೆ ಬಾಯ್ಬಿಟ್ಟಿದ್ದಾನೆ. ಕಳೆದ ನವೆಂಬರ್‌ನಿಂದಲೇ ರನ್ಯಾ ರಾವ್ ಬರೋಬ್ಬರಿ 50 ಕೆಜಿ ಚಿನ್ನ ತಂದು ಸಾಹಿಲ್ ಜೈನ್‌ಗೆ ಕೊಟ್ಟಿದ್ದಳು. ಈ ಚಿನ್ನವನ್ನ ಸಾಹಿಲ್ ಮಾರಾಟ ಮಾಡಿಕೊಡುವ ಕೆಲಸ ಮಾಡಿದ್ದ. ಅಷ್ಟೇ ಅಲ್ಲ ರನ್ಯಾ ರಾವ್ 30 ಕೋಟಿ ರೂ. ಹಣವನ್ನು ಹವಾಲಾ ಮೂಲಕ ದುಬೈಗೆ ಸಾಗಾಟ ಮಾಡಲಾಗಿತ್ತು ಎಂದು ಸಾಹಿಲ್ ಜೈನ್ ಡಿಆರ್‌ಐ ಅಧಿಕಾರಿಗಳ ಮುಂದೆ ಬಾಯಿಬಿಟ್ಟಿದ್ದಾನೆ. ಡಿಆರ್‌ಐ ಅಧಿಕಾರಿಗಳು ಕೋರ್ಟ್ ಮುಂದೆ ತನಿಖೆಯ ಮಾಹಿತಿ ಹಂಚಿಕೊಂಡಿದ್ದಾರೆ. ಈ ಪ್ರಕರಣದ ಮೂರನೇ ಆರೋಪಿ ಸಾಹಿಲ್ ಜೈನ್‌ಗೆ ನಿನ್ನೆಯಷ್ಟೆ ಕೋರ್ಟ್ ನ್ಯಾಯಾಂಗ ಬಂಧನ ವಿಧಿಸಿ ಆದೇಶ ನೀಡಿದೆ. ಬಳ್ಳಾರಿ ಮೂಲದ ಸಾಹಿಲ್ ಜೈನ್ ರನ್ಯಾ ರಾವ್ ಜೊತೆಗೆ ವಾಟ್ಸಪ್ ಚಾಟಿಂಗ್ ಮಾಡಿದ್ದ ಹಿನ್ನೆಲೆ ಸಾಹಿಲ್ ಜೈನ್ ಲಾಕ್ ಆಗಿದ್ದ. ಸಾಹಿಲ್ ಜೈನ್ ತಂದೆ ಮಹೇಂದ್ರ ಜೈನ್ ಅವರ ಸಹೋದರರ ಬಟ್ಟೆ ಅಂಗಡಿ ಬಳ್ಳಾರಿಯಲ್ಲಿದ್ದು, ಸಹೋದರರು ಬಳ್ಳಾರಿಯಲ್ಲಿ ವಾಸವಾಗಿದ್ದಾರೆ. ಆದರೆ ಕೆಲ ವರ್ಷಗಳಿಂದ ಸಾಹಿಲ್ ಜೈನ್ ಕುಟುಂಬ ಬೆಂಗಳೂರಿಗೆ ಶಿಫ್ಟ್ ಆಗಿದೆ. ಸಾಹಿಲ್ ಚಿಕ್ಕಂದಿನಿಂದಲೇ ಸೋದರ ಮಾವನ ಜೊತೆಯಲ್ಲಿ ಮುಂಬೈನಲ್ಲಿ ವಾಸ ಮಾಡುತ್ತಿದ್ದ. ಈಗಾಗಲೇ ಇದೇ ರೀತಿಯ ಪ್ರಕರಣದಲ್ಲಿ ಸಾಹಿಲ್ ಮುಂಬೈನಲ್ಲಿ ಒಮ್ಮೆ ಬಂಧನಕ್ಕೆ ಒಳಗಾಗಿದ್ದ. ಕಸ್ಟಮ್ಸ್ ಅಧಿಕಾರಿಗಳು ಮುಂಬೈ ಏರ್ಪೋರ್ಟ್‌ನಲ್ಲಿ ಬಂಧಿಸಿದ್ದರು.

## 'ಫಣಿ' ಚಿತ್ರದ ಮೋಷನ್ ಪೋಸ್ಟರ್ ಅನಾವರಣ

ತೆಲುಗಿನಲ್ಲಿ ಬಾಸ್, ಶ್ರೀರಾಮ್, ನೇನುನ್ನಾನು, ಆಟ ಸೇರಿದಂತೆ ಹಲವು ಹಿಟ್ ಚಿತ್ರ ನಿರ್ದೇಶಿಸಿರುವ ಪ್ರತಿಭಾನ್ವಿತ ನಿರ್ದೇಶಕ ಡಾ. ವಿ.ಎನ್. ಆದಿತ್ಯ ಈಗ 'ಫಣಿ' ಚಿತ್ರ ನಿರ್ದೇಶನ ಮಾಡಲು ರೆಡಿಯಾಗಿದ್ದಾರೆ. ಇದೀಗ ಫಣಿ ಚಿತ್ರದ ಪೋಸ್ಟರ್ ರಿಲೀಸ್ ಮಾಡಿ ಖ್ಯಾತ ನಿರ್ದೇಶಕ ಕೆ.ರಾಘವೇಂದ್ರ ರಾವ್ ಚಿತ್ರತಂಡಕ್ಕೆ ಶುಭಕೋರಿದ್ದಾರೆ. ನಟಿ ಕ್ಯಾಥರೀನ್ ಟ್ರೆಸಾ 'ಫಣಿ' ಸಿನಿಮಾದಲ್ಲಿ ಪ್ರಮುಖ ಪಾತ್ರಕ್ಕೆ ಜೀವ ತುಂಬಲಿದ್ದಾರೆ. ಮಹೇಶ್ ಶ್ರೀರಾಮ್ ಮುಖ್ಯ ಪಾತ್ರದಲ್ಲಿ ನಟಿಸಲಿದ್ದಾರೆ. ಹಿಂದಿ ಜೊತೆಗೆ, ಫಣಿ ಚಿತ್ರ ತೆಲುಗು, ತಮಿಳು, ಕನ್ನಡ, ಮಲಯಾಳಂ ಮತ್ತು ಇತರ ಜಾಗತಿಕ ಭಾಷೆಗಳಲ್ಲಿ ಬಿಡುಗಡೆಯಾಗಲಿದೆ. ನಿರ್ದೇಶಕ ಕೆ. ರಾಘವೇಂದ್ರ ರಾವ್ ಹೈದರಾಬಾದ್‌ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ 'ಫಣಿ' ಚಿತ್ರದ ಮೋಷನ್ ಪೋಸ್ಟರ್ ಅನ್ನು ರಿವೀಲ್ ಮಾಡಿದ್ದಾರೆ.



## ಸ್ತ್ರೀ 2 ಸಕ್ಸಸ್ ಬಳಿಕ ಶ್ರದ್ಧಾ ಕಪೂರ್‌ಗೆ ಒಲಿದ ಅದೃಷ್ಟ



ಬಾಲಿವುಡ್ ಬೆಡಗಿ ಶ್ರದ್ಧಾ ಕಪೂರ್‌ಗೆ 'ಸ್ತ್ರೀ 2' ಸಕ್ಸಸ್ ಬಳಿಕ ಬಂಪರ್ ಸಿನಿಮಾ ಆಫರ್‌ಗಳು ಅರಸಿ ಬರುತ್ತಿವೆ. ಹೀಗಿರುವಾಗ ಈಗ ಏಕ್ತಾ ಕಪೂರ್ ನಿರ್ಮಾಣದ ಚಿತ್ರಕ್ಕೆ ನಟಿ ಗ್ರೀನ್ ಸಿಗ್ನಲ್ ಕೊಟ್ಟಿದ್ದಾರೆ. ಸಕ್ಸಸ್ ಸಿಕ್ತು ಎಂದು ಹಿಗ್ಗದೇ ಸಿನಿಮಾ ಆಯ್ಕೆಯಲ್ಲಿ ಶ್ರದ್ಧಾ ಕಪೂರ್ ಚ್ಯೂಸಿಯಾಗಿದ್ದಾರೆ. ಉತ್ತಮ ಕಥೆ ಹುಡುಕಾಟದಲ್ಲಿದ್ದ ಅವರು 'ತುಂಬದ್' ಡೈರೆಕ್ಟರ್ ರಾಹಿ ಅನಿಲ್ ಬರ್ವೆ ಜೊತೆ ಕೈಜೋಡಿಸಿದ್ದಾರೆ. ಈ ಚಿತ್ರದಲ್ಲಿ ಶ್ರದ್ಧಾ ವಿಭಿನ್ನ ಗೆಟಪ್‌ನಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಈ ಚಿತ್ರದ ಪ್ರಿ ಪ್ರೊಡಕ್ಷನ್‌ಗೆ ಸುಮಾರು 3ರಿಂದ 4 ತಿಂಗಳು ಬೇಕಿದೆ. 2025ರ ದ್ವಿತೀಯಾರ್ಧದಲ್ಲಿ ಈ ಚಿತ್ರದ ಶೂಟಿಂಗ್ ಶುರುವಾಗಲಿದೆ. ಮುಂದಿನ ವರ್ಷ ಈ ಚಿತ್ರವನ್ನು ರಿಲೀಸ್ ಮಾಡಲು ಚಿತ್ರತಂಡ ಪ್ಲ್ಯಾನ್ ಮಾಡಿದೆ ಎನ್ನಲಾಗಿದೆ. ಈ ಚಿತ್ರ ಬಿಟ್ಟು ಏಕ್ತಾ ಕಪೂರ್ ಜೊತೆ ಶ್ರದ್ಧಾ ಮತ್ತೊಂದು ಸಿನಿಮಾ ಕೂಡ ಮಾಡಲಿದ್ದಾರೆ. ಚೆಂದದ ಲವ್ ಸ್ಟೋರಿ ಹೇಳಲು ಶ್ರದ್ಧಾ ರೆಡಿಯಾಗಿದ್ದಾರೆ. ಈ ಸಿನಿಮಾಗೆ 'ಆಶಿಕಿ 2' ನಿರ್ದೇಶಕ ಮೋಹಿತ್ ಸೂರಿ ನಿರ್ದೇಶನ ಮಾಡಲಿದ್ದಾರೆ. ಇದರೊಂದಿಗೆ ಕರಣ್ ಜೋಹರ್ ನಿರ್ಮಾಣದ ಸಿನಿಮಾ, 'ಸ್ತ್ರೀ ಪಾರ್ಟ್ 3' ಕೂಡ ನಟಿಯ ಕೈಯಲ್ಲಿದೆ. ಒಟ್ನಲ್ಲಿ ಶ್ರದ್ಧಾಗೆ ಭರ್ಜರಿ ಅವಕಾಶಗಳು ಸಿಕ್ತಿವೆ. ನಟಿಯ ಚಿತ್ರದ ಲಿಸ್ಟ್ ಕೇಳಿಯೇ ಫ್ಯಾನ್ಸ್ ಥ್ರಿಲ್ ಆಗಿದ್ದಾರೆ.

ಸಿನಿ ವಾಹಿನಿ

## ತೆಲುಗಿನತ್ತ ಧರ್ಮ ಅಪ್ಸರ ಜೊತೆ ಸಿನಿಮಾ


### ಚಿತ್ರದ ಫಸ್ಟ್ ಲುಕ್‌ಗೆ ಭಾರೀ ಪ್ರಶಂಸೆ





'ಬಿಗ್ ಬಾಸ್ ಕನ್ನಡ 11'ರ ಸ್ಪರ್ಧಿ ಧರ್ಮ ಕೀರ್ತಿರಾಜ್ ಇದೀಗ ತೆಲುಗಿನತ್ತ ಮುಖ ಮಾಡಿದ್ದಾರೆ. ಟಾಲಿವುಡ್‌ನ ಬೋಲ್ಡ್ ಬ್ಯೂಟಿ ಅಪ್ಸರ ರಾಣಿ ಜೊತೆ ಧರ್ಮ ತೆರೆಹಂಚಿಕೊಳ್ಳುತ್ತಿದ್ದಾರೆ. 'ಬ್ಲಡ್ ರೋಸಸ್' ಚಿತ್ರಕ್ಕೆ ಅವರು ಸಾಥ್ ನೀಡಿದ್ದಾರೆ. ಈ ಸಿನಿಮಾದ ಫಸ್ಟ್ ಲುಕ್ ಕೂಡ ಅನಾವರಣ ಆಗಿದೆ. 1'ಬ್ಲಡ್ ರೋಸಸ್' ಎಂಬ ತೆಲುಗಿನ ಸಿನಿಮಾದಲ್ಲಿ ಧರ್ಮಗೆ ಪವರ್ ಫುಲ್ ಪಾತ್ರಕ್ಕೆ ಸಿಕ್ಕಿದೆ. ಆರ್‌ಜಿವಿ ನಿರ್ದೇಶನದ 'ಡೇಂಜರಸ್' ಚಿತ್ರದಲ್ಲಿ ನಟಿಸಿದ್ದ ಅಪ್ಸರ ರಾಣಿ ಈ ಸಿನಿಮಾದಲ್ಲಿ ನಾಯಕಿಯಾಗಿ ನಟಿಸುತ್ತಿದ್ದಾರೆ. ಪೊಲೀಸ್ ಪಾತ್ರದಲ್ಲಿ ಅವರು ಖದರ್ ತೋರಿಸಲಿದ್ದಾರೆ. ಕನ್ನಡದ ನಟ ಧರ್ಮಗೆ ಅಪ್ಸರ ಜೊತೆಯಾಗಿದ್ದಾರೆ. ಸದ್ಯ ರಿವೀಲ್ ಆಗಿರೋ ಚಿತ್ರದ ಫಸ್ಟ್ ಲುಕ್‌ಗೆ ಭಾರೀ ಪ್ರಶಂಸೆ ವ್ಯಕ್ತವಾಗಿದೆ. ಚಿತ್ರತಂಡದ ಜೊತೆಗಿನ ಫೋಟೋಗಳನ್ನು ಧರ್ಮ ಶೇರ್ ಮಾಡಿ ತೆಲುಗಿನಲ್ಲಿ ನಟಿಸಿರುವ ಚಿತ್ರದ ಬಗ್ಗೆ ಮಾಹಿತಿ ನೀಡಿದ್ದಾರೆ. ಈ ಸುದ್ದಿ ತಿಳಿದು ಫ್ಯಾನ್ಸ್ ಥ್ರಿಲ್ ಆಗಿದ್ದಾರೆ. ಸದ್ಯದಲ್ಲೇ ಚಿತ್ರದ ರಿಲೀಸ್ ಬಗ್ಗೆ ತಂಡ ಅಪ್‌ಡೇಟ್ ನೀಡಲಿದೆ. ತೆಲುಗಿನ ಜೊತೆ ಕನ್ನಡದಲ್ಲೂ ಈ ಸಿನಿಮಾ ಬರಲಿದೆಯಾ ಎಂದು ಕಾಯಬೇಕಿದೆ.

## ಹುಡುಗಿಯಾಗಿ ಬದಲಾದ ಟೀಮ್ ಇಂಡಿಯಾದ ಮಾಜಿ ಆಟಗಾರನ ಪುತ್ರ



ಟೀಮ್ ಇಂಡಿಯಾದ ಮಾಜಿ ಆಟಗಾರ ಸಂಜಯ್ ಬಂಗಾರ್ ಅವರ ಪುತ್ರ/ಪುತ್ರಿ ಸೋಷಿಯಲ್ ಮೀಡಿಯಾದಲ್ಲಿ ಸಂಚಲನ ಸೃಷ್ಟಿಸಿದ್ದಾರೆ. ಅದು ಸಹ ದಿಟ್ಟ ನಿರ್ಧಾರವನ್ನು ತೆಗೆದುಕೊಂಡಿರುವುದಾಗಿ ಬಹಿರಂಗಪಡಿಸುವಿಕೆಯೊಂದಿಗೆ ಎಂಬುದೇ ವಿಶೇಷ. ಸಂಜಯ್ ಬಂಗಾರ್ ಅವರ ಹಿರಿಯ ಮಗ ಆರ್ಯನ್ ತಾನು ಹಾರ್ಮೋನ್ ಪರಿವರ್ತಿಸಿಕೊಂಡಿದ್ದು, ಇದೀಗ ಹುಡುಗನಿಂದ ಹುಡುಗಿಯಾಗಿ ರೂಪಾಂತರಗೊಂಡಿದ್ದೇನೆ ಎಂದು ತಿಳಿಸಿದ್ದಾರೆ. ಅಲ್ಲದೆ ಇನ್ಮುಂದೆ ನನ್ನ ಹೆಸರು ಆರ್ಯನ್ ಅಲ್ಲ, ಬದಲಾಗಿ ಅನನ್ಯಾ ಎಂದಿದ್ದಾರೆ.

ಅಂದಹಾಗೆ ಅನನ್ಯಾ ಕಳೆದ 10 ತಿಂಗಳಿಂದ ಹಾರ್ಮೋನ್ ಬದಲಾವಣೆಗಾಗಿ ಚಿಕಿತ್ಸೆ ಪಡೆದಿದ್ದಾರೆ. ಇದೀಗ 10 ತಿಂಗಳ ಶಸ್ತ್ರಚಿಕಿತ್ಸೆಯ ನಂತರ ಹುಡುಗಿಯಾಗಿ ರೂಪಾಂತರಗೊಂಡಿರುವುದಾಗಿ ಅವರು ತಿಳಿಸಿದ್ದಾರೆ. ಅಲ್ಲದೆ ಇದಕ್ಕಾಗಿ ನನ್ನ ಕ್ರಿಕೆಟ್ ಕೆರಿಯರ್ ಅನ್ನು ತ್ಯಾಗ ಮಾಡಿರುವುದಾಗಿ ಅವರು ಹೇಳಿದ್ದಾರೆ. ಇದೀಗ ಅನನ್ಯಾ ಅವರ ನ್ಯೂ ಲುಕ್ ವಿಡಿಯೋ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ಮೇಕಪ್ ಮಾಡಿಸಿಕೊಳ್ಳಲು ಸಲೂನ್‌ಗೆ ತೆರಳಿರುವ ಫೋಟೋವನ್ನು ಅವರು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ಅನನ್ಯಾ ಬಂಗಾರ್ ಈ ಹಿಂದೆ ತಂದೆಯಂತೆ ಕ್ರಿಕೆಟಿಗನಾಗಬೇಕೆಂದು ಕನಸು ಕಂಡಿದ್ದರು. ಅದರಂತೆ ಬಾಲ್ಯದಿಂದಲೇ ಕ್ರಿಕೆಟ್ ಅಭ್ಯಾಸವನ್ನು ಸಹ ಶುರು ಮಾಡಿದ್ದರು. ಎಡಗೈ ಬ್ಯಾಟ್ಸ್‌ಮನ್ ಆಗಿ ಗುರುತಿಸಿಕೊಂಡಿದ್ದ ಆರ್ಯನ್ (ಅನನ್ಯಾ) ಲೀಸೆಸ್ಟರ್‌ಶೈರ್‌ನ ಹಿಂಕ್ಲೆ ಕ್ರಿಕೆಟ್ ಕ್ಲಬ್ ಪರ ಆಡಿದ್ದರು. ಆದರೆ ಆ ಬಳಿಕ ದೇಹದಲ್ಲಾದ ಪರಿವರ್ತನೆಯಿಂದಾಗಿ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದಾರೆ. ಈ ಮೂಲಕ ಆರ್ಯನ್ ಆಗಿದ್ದ ಬಂಗಾರ್ ಪುತ್ರ ಇದೀಗ ಅನನ್ಯಾ ಆಗಿ ಬದಲಾಗಿದ್ದಾರೆ. ಅಲ್ಲದೆ ನನ್ನ ಈ ನಿರ್ಧಾರದ ಬಗ್ಗೆ ತುಂಬಾ ತೃಪ್ತಿಯಿದೆ ಎಂದು ಅವರು ತಿಳಿಸಿದ್ದಾರೆ. ಸದ್ಯ ಅನನ್ಯಾ ಬಂಗಾರ್ ಇಂಗ್ಲೆಂಡ್‌ನ ಮ್ಯಾಂಚೆಸ್ಟರ್‌ನಲ್ಲಿ ವಾಸಿಸುತ್ತಿದ್ದು, ಹುಡುಗಿಯಾಗಿ ರೂಪಾಂತರಗೊಂಡಿರುವ ಅವರು ಮುಂಬರುವ ದಿನಗಳಲ್ಲಿ ಕ್ರಿಕೆಟ್ ಕೆರಿಯರ್ ಮುಂದುವರೆಸಲಿದ್ದಾರಾ ಎಂಬುದನ್ನು ಕಾದು ನೋಡಬೇಕಿದೆ.

## ವೆಂಕಟೇಶ್ ಅಯ್ಯರ್, ರಘುವಂಶಿ ಅಲ್ವೇ ಅಲ್ಲ! ಕೆಕೆಆರ್ ಗೆಲುವಿಗೆ ಅಸಲಿ ಕಾರಣ ಈ ಯಂಗ್‌ಸ್ಟರ್

### ಹೈದರಾಬಾದ್‌ಗೆ ಆರಂಭದಲ್ಲೇ ಶಾಕ್



ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಕೆಕೆಆರ್, ವೆಂಕಟೇಶ್ ಅಯ್ಯರ್ ಮತ್ತು ರಘುವಂಶಿ ಅವರ ಅರ್ಧಶತಕಗಳ ನೆರವಿನಿಂದ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 200 ರನ್ ಗಳಿಸಿದೆ.

ಐಪಿಎಲ್ 2025 ರ 15 ನೇ ಪಂದ್ಯದಲ್ಲಿ, ಸನ್‌ರೈಸರ್ಸ್ ಹೈದರಾಬಾದ್ ತಂಡವು ಕೋಲ್ಕತ್ತಾದ ಈಡನ್ ಗಾರ್ಡನ್ಸ್‌ನಲ್ಲಿ ಕೋಲ್ಕತ್ತಾ ನೈಟ್ ರೈಡರ್ಸ್ ತಂಡವನ್ನು ಎದುರಿಸುತ್ತಿದೆ. ಈ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಕೆಕೆಆರ್, ವೆಂಕಟೇಶ್ ಅಯ್ಯರ್ ಮತ್ತು ರಘುವಂಶಿ ಅವರ ಅರ್ಧಶತಕಗಳ ನೆರವಿನಿಂದ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 200 ರನ್ ಗಳಿಸಿದೆ.


ಇನ್ನೂ 201 ರನ್‌ಗಳ ಬೃಹತ್ ಮೊತ್ತದ ಗುರಿ ಬೆನ್ನಟ್ಟಿದ ಹೈದರಾಬಾದ್ ತಂಡ ಈ ಸ್ಕೋರ್ ಅನ್ನು ಸುಲಭವಾಗಿ ಚೇಸ್ ಮಾಡಲಿದೆ ಎಂದೇ ಅನೇಕರು ನಂಬಿಕೊಂಡಿದ್ದರು. ಕಾರಣ ಅದರ ಬ್ಯಾಟಿಂಗ್ ಲೈನ್‌ಅಪ್. ಆದ್ರೆ, ಬ್ಯಾಟಿಂಗ್ ಆರಂಭಿಸಿದ ಹೈದರಾಬಾದ್ ತಂಡಕ್ಕೆ ಉತ್ತಮ ಆರಂಭ ಸಿಗಲಿಲ್ಲ. ಮಾತ್ರವಲ್ಲ ಯಾವುದೇ ಬ್ಯಾಟರ್ ಕ್ರೀಸ್ ಕಚ್ಚಿ ನಿಲ್ಲಲು ಕೆಕೆಆರ್ ಬೌಲರ್‌ಗಳು ಬಿಡಲಿಲ್ಲ. ಬಿಗ್ ಸ್ಕೋರ್ ಅನ್ನು ಸುಭವಾಗಿ ಗೆಲ್ಲಬಹುದಾದ ಪಂದ್ಯದಲ್ಲಿ ಕೆಕೆಆರ್ ಬೌಲರ್‌ಗಳು ಹೈದರಾಬಾದ್ ಬ್ಯಾಟರ್‌ಗಳನ್ನು ಮಂಡಿಯೂರುವಂತೆ ಮಾಡಿದರು.

ಇನ್ನೂ ಪಂದ್ಯದ ಗೆಲುವಿಗೆ ಅಸಲಿ ಕಾರಣ ಏನು ಅಂತಾ ನೋಡುವುದಾದ್ರೆ, ಬದಲಿ ಆಟಗಾರನಾಗಿ ಬಂದ 27 ವರ್ಷದ ವೈಭವ್ ಅರೋರ. ಇವರು ತಮ್ಮ ಮೊದಲ ಓವರ್‌ನ 2ನೇ ಎಸೆತದಲ್ಲೇ ಸ್ಫೋಟಕ ಆರಂಭಿಕಕಾರ ಟ್ರಾವಿಸ್ ಹೆಡ್ ಅವರನ್ನು ಔಟ್ ಮಾಡಿದರು.

ಮಾತ್ರವಲ್ಲ ತಮ್ಮ ಕೋಟಾದ ಎರಡನೇ ಓವರ್‌ನಲ್ಲಿ ಬಿಗ್ ಹಿಟ್ಟರ್ ಹಾಗೂ ಮೊದಲ ಪಂದ್ಯದಲ್ಲಿ ಶತಕ ಬಾರಿಸಿದ್ದ ಇಶಾನ್ ಕಿಶನ್ ಅವರನ್ನು ಪೆವಿಲಿನ್‌ಗೆ ಅಟ್ಟಿದರು. ಆ ಮೂಲಕ ಹೈದರಾಬಾದ್‌ಗೆ ಆರಂಭದಲ್ಲೇ ಶಾಕ್ ನೀಡಿದರು.

ಮಾತ್ರವಲ್ಲ ಕೊನೆಯಲ್ಲಿ ಉತ್ತಮವಾಗಿ ಬ್ಯಾಟಿಂಗ್ ಮಾಡ್ತಾ ಇದ್ದ ಸ್ಫೋಟಕ ದಾಂಡಿಗ ಹೆನ್ರಿಕ್ ಕ್ಲಾಸನ್ ಅವರನ್ನು ಔಟ್ ಮಾಡುವ ಮೂಲಕ ಕೆಕೆಆರ್ ಗೆಲುವನ್ನು ಖಚಿತಪಡಿಸಿದರು. ಹಾಗಾಗಿ ಬಿಗ್ ಸ್ಕೋರ್ ಅನ್ನು ಸುಲಭವಾಗಿ ಗೆಲ್ಲಬಹುದಾದ ರನ್ ಅನ್ನು ಉಳಿಸಿದ್ದು ವೈಭವ್ ಅರೋರಾ ಎಂದೇ ಹೇಳಬಹುದು.

## ಈಗ ನಾನು ನಾಯಕನಲ್ಲ



ಇಂಡಿಯನ್ ಪ್ರೀಮಿಯರ್ ಲೀಗ್ ಇತಿಹಾಸದ ಅತ್ಯಂತ ಯಶಸ್ವಿ ನಾಯಕರಲ್ಲಿ ರೋಹಿತ್ ಶರ್ಮಾ ಕೂಡ ಒಬ್ಬರು. ಮುಂಬೈ ಇಂಡಿಯನ್ಸ್ ತಂಡವನ್ನು 5 ಬಾರಿ ಚಾಂಪಿಯನ್ ಪಟ್ಟಕ್ಕೇರಿಸಿದ ಹಿಟ್ ಮ್ಯಾನ್ ಈಗ ತಂಡದಲ್ಲಿ ಕೇವಲ ಬ್ಯಾಟರ್ ಆಗಿ ಕಾಣಿಸಿಕೊಳ್ಳುತ್ತಿದ್ದಾರೆ. ಅದರಲ್ಲೂ ಕಳೆದ ಮೂರು ಪಂದ್ಯಗಳಲ್ಲಿ ಎರಡು ಬಾರಿ ಅವರನ್ನು ಇಂಪ್ಯಾಕ್ಟ್ ಪ್ಲೇಯರ್ ಆಗಿ ಕಣಕ್ಕಿಳಿಸಲಾಗಿತ್ತು. ಇದಾಗ್ಯೂ, ಮುಂಬೈ ಇಂಡಿಯನ್ಸ್ ಕಡೆಯಿಂದ ನಿರೀಕ್ಷಿತ ಪ್ರದರ್ಶನ ಮೂಡಿಬಂದಿಲ್ಲ ಎಂಬುದೇ ಸತ್ಯ. ಮೊದಲೆರಡು ಪಂದ್ಯಗಳಲ್ಲಿ ಹೀನಾಯವಾಗಿ ಸೋತಿದ್ದ ಮುಂಬೈ ಪಡೆ ಮೂರನೇ ಪಂದ್ಯದಲ್ಲಿ ಮಾತ್ರ ಗೆಲುವು ದಾಖಲಿಸಿದೆ. ಅದು ಸಹ ತವರು ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಮಾತ್ರ.

ಇದರ ನಡುವೆ ರೋಹಿತ್ ಶರ್ಮಾ ಅವರಿಗಿರುವ ನಾಯಕತ್ವದ ಅನುಭವವನ್ನು ಮುಂಬೈ ಇಂಡಿಯನ್ಸ್ ತಂಡ ಬಳಸಿಕೊಳ್ಳುತ್ತಿಲ್ಲವಾ ಎಂಬ ಪ್ರಶ್ನೆಯೊಂದು ಹುಟ್ಟಿಕೊಂಡಿದೆ. ಏಕೆಂದರೆ ರೋಹಿತ್ ಶರ್ಮಾ ಅವರನ್ನು ಬ್ಯಾಟಿಂಗ್‌ಗಾಗಿ ಮಾತ್ರ ಕಣಕ್ಕಿಳಿಸಲಾಗುತ್ತಿದೆ. ಇಂತಹದೊಂದು ನಡೆಯ ನಡುವೆ ರೋಹಿತ್ ಶರ್ಮಾ ನೀಡಿರುವ ಸಂದರ್ಶನವು ಇದೀಗ ಭಾರೀ ವೈರಲ್ ಆಗಿದೆ. ಜಿಯೋಸ್ಟಾರ್ ಜೊತೆ ಮಾತನಾಡಿದ ರೋಹಿತ್ ಶರ್ಮಾ, ನಾನು ಐಪಿಎಲ್‌ನಲ್ಲಿ ಆಡಲು ಆರಂಭಿಸಿದಾಗಿನಿಂದ ಬಹಳಷ್ಟು ವಿಷಯಗಳು ಬದಲಾಗಿದೆ. ನಾನು ಆಗ ಮಧ್ಯಮ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡುತ್ತಿದ್ದೆ. ಈಗ ಓಪನಿಂಗ್ ಮಾಡುತ್ತೇನೆ. ಅಲ್ಲದೆ ನಾನು ಮುಂಬೈ ಇಂಡಿಯನ್ಸ್ ತಂಡದ ನಾಯಕನಾಗಿ ಕಣಕ್ಕಿಳಿಯುತ್ತಿದ್ದೆ. ಆದರೀಗ ಕೇವಲ ಆಟಗಾರ ಅಷ್ಟೇ. ಎಲ್ಲಾವೂ ಬದಲಾಗಿದೆ. ಈ ಬದಲಾವಣೆಯ ಹೊರತಾಗಿಯೂ ನನ್ನ ಮನಸ್ಥಿತಿಯು ಮೊದಲಿನಂತೇ ಇದೆ ಎಂದು ರೋಹಿತ್ ಶರ್ಮಾ ಹೇಳಿದ್ದಾರೆ.


## ವಿರಾಟ್ ಕೊಹ್ಲಿಗೆ ಗಾಯ

### ಹೆಬ್ಬೆರಳಿನ ಭಾಗಕ್ಕೆ ಗಾಯ



ಆರ್‌ಸಿಬಿ ತಂಡದ ಸ್ಟಾರ್ ಆಟಗಾರ ವಿರಾಟ್ ಕೊಹ್ಲಿ ಐಪಿಎಲ್‌ನ 14ನೇ ಪಂದ್ಯದ ವೇಳೆ ಗಾಯಗೊಂಡಿದ್ದರು. ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆದ ಗುಜರಾತ್ ಟೈಟಾನ್ಸ್ ವಿರುದ್ಧದ ಪಂದ್ಯದ ಫೀಲ್ಡಿಂಗ್ ವೇಳೆ ಕೊಹ್ಲಿಯ ಕೈಗೆ ಗಾಯವಾಗಿತ್ತು. ಗುಜರಾತ್ ಟೈಟಾನ್ಸ್ ತಂಡದ ಆರಂಭಿಕ ಆಟಗಾರ ಸಾಯಿ ಸುದರ್ಶನ್ ಡೀಪ್ ಮಿಡ್ ವಿಕೆಟ್‌ನತ್ತ ಬಾರಿಸಿದ ಚೆಂಡನ್ನು ಹಿಡಿಯುವ ಯತ್ನದಲ್ಲಿ ಕೊಹ್ಲಿಯ ಹೆಬ್ಬೆರಳಿನ ಭಾಗಕ್ಕೆ ಗಾಯವಾಗಿದೆ. ಅತ್ತ ಚೆಂಡು ತಾಗುತ್ತಿದ್ದಂತೆ ಕೊಹ್ಲಿ ನೋವಿನಿಂದ ಕುಸಿದು ಕೂತಿದ್ದರು. ಈ ಗಾಯದ ಕಾರಣ ವಿರಾಟ್ ಕೊಹ್ಲಿ ಮುಂದಿನ ಪಂದ್ಯದಲ್ಲಿ ಕಣಕ್ಕಿಳಿಯುವುದು ಅನುಮಾನ ಎನ್ನಲಾಗಿತ್ತು. ಇದೀಗ ವಿರಾಟ್ ಕೊಹ್ಲಿಯ ಗಾಯದ ಬಗ್ಗೆ ಆರ್‌ಸಿಬಿ ತಂಡದ ಮುಖ್ಯ ಕೋಚ್ ಆಯಂಡಿ ಫ್ಲವರ್ ಮಾಹಿತಿ ನೀಡಿದ್ದಾರೆ. ಕೊಹ್ಲಿಗೆ ಉಂಟಾಗಿರುವ ಗಾಯವು ಗಂಭೀರವೇನಲ್ಲ. ಅಲ್ಲದೆ ಅವರು ಫೈನ್ ಆಗಿದ್ದು, ಮುಂದಿನ ಪಂದ್ಯದಲ್ಲಿ ಕಣಕ್ಕಿಳಿಯುವ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ. ಹೀಗಾಗಿ ಏಪ್ರಿಲ್ 7 ರಂದು ನಡೆಯಲಿರುವ ಮುಂಬೈ ಇಂಡಿಯನ್ಸ್ ವಿರುದ್ಧದ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಪರ ವಿರಾಟ್ ಕೊಹ್ಲಿ ಕಣಕ್ಕಿಳಿಯುವುದು ಖಚಿತ. ಏಕೆಂದರೆ ಈ ಪಂದ್ಯಕ್ಕೆ ಇನ್ನೂ ಮೂರು ದಿನಗಳ ಕಾಲಾವಕಾಶವಿದ್ದು, ಅದರೊಳಗೆ ಅವರ ಬೆರಳಿನ ಗಾಯವು ಸಂಪೂರ್ಣ ಗುಣಮುಖವಾಗುವ ನಿರೀಕ್ಷೆಯಿದೆ.

## ನಾನು ಮ್ಯಾಚ್ ವಿನ್ನರ್ ಸಿರಾಜ್ ಅನ್ನು ಮಾತ್ರ ನಂಬುತ್ತೇನೆ..!



ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ಗೆದ್ದು ಬೀಗಿರುವ ಗುಜರಾತ್ ಟೈಟಾನ್ಸ್ ತಂಡದ ಡ್ರೆಸ್ಸಿಂಗ್ ರೂಮ್ ವಿಡಿಯೋ ಹೊರಬಿದ್ದಿದೆ. ಈ ವಿಡಿಯೋದಲ್ಲಿ ಮಾತನಾಡಿದ ಗುಜರಾತ್ ಟೈಟಾನ್ಸ್ ತಂಡದ ಮೆಂಟರ್ ಪಾರ್ಥೀವ್ ಪಟೇಲ್ ಆರ್‌ಸಿಬಿ ವಿರುದ್ಧ ಅತ್ಯುತ್ತಮ ಪ್ರದರ್ಶನ ನೀಡಿದ ಆಟಗಾರರನ್ನು ಹಾಡಿ ಹೊಗಳಿದರು.

ಅದರಲ್ಲೂ ಸಣ್ಣ ಮೈದಾನದಲ್ಲಿ ಅತ್ಯುತ್ತಮ ಬೌಲಿಂಗ್ ಪ್ರದರ್ಶನ ನೀಡಿದ ಸ್ಪಿನ್ನರ್ ಸಾಯಿ ಕಿಶೋರ್ ಅವರನ್ನು ಇಂಪ್ಯಾಕ್ಟ್ ಆಟಗಾರ ಎಂದು ಬಣ್ಣಿಸಿದರು. ಇನ್ನು ಇಡೀ ಪಂದ್ಯದ ಮೇಲೆ ಪ್ರಭಾವ ಬೀರಿದ ಬ್ಯಾಟರ್ ಆಗಿ ಜೋಸ್ ಬಟ್ಲರ್ ಅವರನ್ನು ಹಾಡಿ ಹೊಗಳಿದರು.

ಇದಾದ ಬಳಿಕ ಮೊಹಮ್ಮದ್ ಸಿರಾಜ್ ಅವರ ಬೌಲಿಂಗ್ ಪ್ರದರ್ಶನಕ್ಕೆ ಬಹುಪಾರಕ್ ಎಂದ ಪಾರ್ಥೀವ್ ಪಟೇಲ್, 19ನೇ ಓವರ್ ಎಸೆದ ರೀತಿಯನ್ನು ಹಾಡಿ ಹೊಗಳಿದರು. ಅಲ್ಲದೆ ನಾನು ಮ್ಯಾಚ್ ವಿನ್ನರ್ ಮೊಹಮ್ಮದ್ ಸಿರಾಜ್ ಅನ್ನು ಮಾತ್ರ ನಂಬುತ್ತೇನೆ ಎಂದು ಹಾಸ್ಯ ಚಟಾಕಿ ಹಾರಿಸಿದರು.

ಅಂದಹಾಗೆ ನಾನು ಜಸ್ಸಿ ಭಾಯ್ (ಜಸ್‌ಪ್ರೀತ್ ಬುಮ್ರಾ) ಅವರನ್ನು ಮಾತ್ರ ನಂಬುತ್ತೇನೆ ಎನ್ನುವುದು ಮೊಹಮ್ಮದ್ ಸಿರಾಜ್ ಅವರ ಟ್ರೇಡ್ ಮಾರ್ಕ್ ಡೈಲಾಗ್. ಇದನ್ನೇ ಈಗ ಪಾರ್ಥೀವ್ ಪಟೇಲ್ ನಾನು ಮ್ಯಾಚ್ ವಿನ್ನರ್ ಮೊಹಮ್ಮದ್ ಸಿರಾಜ್ ಅನ್ನು ಮಾತ್ರ ನಂಬುತ್ತೇನೆ ಎನ್ನುವ ಮೂಲಕ ಮೆಚ್ಚುಗೆ ಸೂಚಿಸಿದ್ದಾರೆ.

ಇನ್ನು ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಆರ್‌ಸಿಬಿ 169 ರನ್ ಕಲೆಹಾಕಿದರೆ, ಗುಜರಾತ್ ಟೈಟಾನ್ಸ್ ತಂಡವು ಈ ಗುರಿಯನ್ನು ಕೇವಲ 17.5 ಓವರ್‌ಗಳಲ್ಲಿ ಚೇಸ್ ಮಾಡಿ 8 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966